No L 3937

'ವಂದೇಮಾತರಂ'

THE Congress Bulletin
ಕಾಂಗ್ರೆಸ್ ಬುಲೆಟಿನ್

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.

ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ.— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ

ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಪ್ರಾವರಾನ್ನಿಬೋಧತ.

ಸಂಚಿಕೆ ೧ ಬಳ್ಳಾರಿ, ಜನವರಿ 7 ನೇ ಶನಿವಾರ 1939. ಪ್ರತಿ ೨ಪೈ

ಬಳ್ಳಾರಿ ಜಿಲ್ಲೆಯಲ್ಲಿ

ತ್ರಿಪುರೀ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ.

ಬಳ್ಳಾರಿ ಜಿಲ್ಲೆಗಾಗಿ ಕಾದಿಟ್ಟ ಸ್ಥಾನ ೫.

8—1—39 ನೇ ಭಾನುವಾರ ಚುನಾವಣೆ ನಡೆಯಲಿದೆ.

ಉಮೇದುವಾರರು.

೧. ಬಳ್ಳಾರಿ ನಗರ— ಶ್ರೀ ತಿ. ಸೆಜ್. ವೆಂಕೋಬರಾವ್
,, ಬಿ ಯಂ. ರೇವಣಸಿದ್ದಯ್ಯ
,, ಕ. ವಿಶ್ವನಾಥಪ್ಪ.
೨. ಹೊಸಪೇಟೆ ನಗರ ,, ಮತ್ತಿಹಳ್ಳಿ ರಾಘವೇಂದ್ರರಾವ್
,, ಆಸುಂಡಿ ತಿರುಮಲರಾವ್
,, ಬೆಲ್ಲದ ಚನ್ನಪ್ಪ
೩. ಹರಪನಹಳ್ಳಿ ಭಾಗ ,, ವಿ. ಯಂ. ಗಿರಿ
,, ಟಿ ವಂಕಾಕ್ಷರಯ್ಯ
೪. ಹಡಗಲಿ ಹೊಳಲು ,, ಶಿವದೇವಯ್ಯ
ಫಿರ್ಕಾ ,, ಗರುಡನವರಾಜ
ಬಳ್ಳಾರಿ-ಕೊಟ್ಟೂರು ,, ಟಿ. ಎಸ್. ಗುರುಲಿಂಗನ್ನ
ಹೊಸಪೇಟೆ ಭಾಗ ,, ಹೊ. ಬಸವನಗೌಡ

ನಿರಾಕರಿಸಲ್ಪಟ್ಟ ಅರ್ಜಿಗಳ ವಿಷಯ. ಹಿಂಪಡೆದುಕೊಂಡ ಉಮೇದವಾರರ ಹೆಸರು ಗೊತ್ತಿಲ್ಲ. ವಿವರಗಳು ಮುಂದಿನ ವಾರ.

ಸಂತೋಷ ಮತ್ತು ತೃಪ್ತಿ

ಇವುಗಳಿಂದ

ಜೀವನವು ಸುಖಮಯವಾಗುವುದು,

ತೊಂದರೆ ಮತ್ತು ಚಿಂತಾಯುಕ್ತವ್ಯಸನಗಳಿಂದ ಪಾರಾದರೆ ಮಾತ್ರ ಮನಸ್ಸಿಗೆ ಪೂರಾಶಾಂತಿಯು ಲಭಿಸುವುದು. ತನ್ನ ಹಣ, ಕಾಸಿನ ವಿಷಯದಲ್ಲಿ ಸದಾ ಚಿಂತಿಸುತ್ತಿರುವವನಿಗೆ ಶಾಂತಿಯೆಲ್ಲಿ? ನಿಮ್ಮ ಹಣ ಕಾಸಿನ "ಭದ್ರತೆ" ಯ ವಿಷಯಕ್ಕೆ ನಾವು ನಿಮಗೆ ಪೂರಾಭರವಸೆ ಕೊಡುತ್ತೇವೆ. ನೀವು ಈ ವಿಷಯದ ತಾವತ್ಕಾರ್ಯ ವಡುವುದುಬೇಡ. ಕಳೆದ 13 ವರ್ಷಗಳಲ್ಲಿ ಸಾವಿರಾರು ಜನರು ನಮ್ಮೊಡನೆ ವ್ಯವಹರಿಸಿ ಲಾಭವೊಂದಿ ತಮ್ಮ ವಿಶ್ವಾಸನ ನಂಬಿಕೆಗಳನ್ನು ವ್ಯಕ್ತ ಪಡಿಸಿರುವರು. ನಿಮ್ಮ ಆರ್ಥಿಕ ವ್ಯವಹಾರಗಳನ್ನು ನಮಗೊಪ್ಪಿಸಿರಿ. ನಿಮಗೆ ಪೂರ್ಣ ತೃಪ್ತಿ ಮತ್ತು ಸಮಾಧಾನಕರ ರೀತಿಯಲ್ಲಿ ಕೆಲಸಮಾಡಿಕೊಡುತ್ತೇನೆ

ದಿ ಕ್ಯಾನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ಮುಖ್ಯಕಛೇರಿ— ಉಡಿಪಿ (ದಕ್ಷಿಣ ಕನರಾ)

ಮೆಂಬರ್— ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾ - ಜೊಂಟಾಯಿ

ಬಳ್ಳಾರಿಯಲ್ಲಿ - ನಮ್ಮ ಶಾಖೆಯುಂಟು,

ಅಧಿಕೃತ ಭಂಡವಲ .... ರೂ. 10,00,000.
ಚಾ.ಪಿ.ರಿ.ಪ್ಪಡಿಲ್ಪಟ್ಟ ,, ... ರೂ. 8,00,000.
ಚಂದಾ ಆದ ,, ... ರೂ. 7,74,500.
ಸಲ್ಲಿಸಿದ ,, ... ರೂ. 3,86,880.
ಕಾದಿಟ್ಟಹಣ ,, ... ರೂ. 2,16,700.

ಎಲ್ಲಾ ತರದ ಮೊತ್ತವು ೫೧ ಲಕ್ಷ ರೂ. ಗಳಿಗೆ ಮಿಂರಿದೆ.

CONGRESS BULLETIN
ಕಾಂಗ್ರೆಸ್ ಬುಲೆಟಿನ್
ಸಂಪಾದಕರು—ಟಿ.ಪ್ರಕಾಶವಿನ್

ಶನಿವಾರ, ಜನವರಿ 7, 1939

ಕರ್ನಾಟಕ ಸಾಹಿತ್ಯ ಸಮ್ಮೇಳನ.

ಬಳ್ಳಾರಿಯಲ್ಲಿ ಈ ವರ್ಷ ನಡೆದ ಸಾಹಿತ್ಯ ಸಮ್ಮೇಳನವು ಎಲ್ಲಾ ವಿಧದಿಂದಲೂ ಚರಿತ್ರಾರ್ಹವಾಗಿದೆ. ಸಂಡೂರು ಮಹಾರಾಜರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ಕರ್ನಾಟಕದಲ್ಲಿ ಪೂಜ್ಯವ್ಯಕ್ತಿಗಳಾದ ಶ್ರೀ ದಿವಾಕರರಾಯರು ಅಧ್ಯಕ್ಷ ಪದವಯನ್ನಲಂಕರಿಸಿದ್ದು, ಗಡಿನಾಡಿನ ಸಾಹಿತ್ಯ ಶ್ರೀ ಸ್ಮರಲ್ಲೊಬ್ಬರಾದ ಶ್ರೀ ನಾಗೇಶಶಾಸ್ತ್ರಿಗಳು ಸ್ವಾಗತ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಬಳ್ಳಾರಿನಾಡಿನ ಪುರಾತನ ವೈಭವವನ್ನು ಇಡೀ ಕರ್ನಾಟಕಕ್ಕೇ ಪರಿಚಯ ಮಾಡಿದ್ದು ಮೇಲಾಗಿ ಎಳ್ಳಾರಿಯ ಭೋಜನಾದಿ ಸೌಕರ್ಯಗಳ ವಿಸ್ತಾರ ಸ್ವಯಂಸೇವಕ ಸೇವಿಕೆಯರ ಸವಾಸೇನೆಯ ನೃತ್ತ, ಕಾರ್ಯಕ್ರಮಗಳ ಮತ್ತು ಸುಪ್ರಸಿದ್ಧ ಭಾಷಣಕಾರರ ಸುರಿಮಳೆ ಇವೆಲ್ಲಾ 2ನೆ ವರ್ಷಗಳಲ್ಲಿಯೇ ಅಪರೂಪವಾಗಿವೆ. ನಿರಾಶೆಯಿಂದಲೂ ಜಿಲ್ಲೆಯ ವಿಚಿತ್ರ ಪರಿಸ್ಥಿತಿಯಿಂದಲೂ ಕಳೆಗುಂದಿದ ಕನ್ನಡಿಗರು ಎಲ್ಲೆಲ್ಲಿದ್ದರೋ ಅಂಥವರಲ್ಲಿ ಈ ಸಮ್ಮೇಳನದಿಂದ ಧೈರ್ಯೋತ್ಸಾಹಗಳು ಮೂಡಿದವು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ತ್ರೇಷ್ಠತೆಯು ಪರಭಾಷೆಯವರನು ಕೂಡ ಅಚ್ಚರಿಗೊಳಿಸಿತು.

ವಿವಿಧ ಕಾರ್ಯಕ್ರಮಗಳಲ್ಲಿ ನಡೆದ ಭಾಷಣಗಳೆಲ್ಲವನ್ನೂ ಶ್ರಕಟಿಸಿದರೆ. ಒಂದು ದೊಡ್ಡ ಗ್ರಂಥವಾಗುತ್ತದೆ. ಶ್ರೀ ದಿವಾಕರರು ಸಾಹಿತ್ಯ ಪರಿಷತ್ತಿಗೆ ತನ್ಮ್ಯ ಅಮೂಲ್ಯ ಸಲಹೆಗಳಿಂದ ನೂತನ ಜೀವನವನ್ನು ಕೊಟ್ಟರು. ಮರಾಠೀ ಮಾತೃಭಾಷೆಯಾಗುಳ್ಳ ಸಂಡೂರ ಸರೇಶರು, ಕನ್ನಡವಲ್ಲಿ ಭಾಷಣಮಾಡಿ ಸಾಹಿತ್ಯೋತ್ಸವಕ್ಕೆ ದ್ರವ್ಯ ಸಹಾಯ ಮಾಡುವುದರ ಮೂಲಕ ತನ್ಮ್ಯ ಉದಾರಾಶಯಗಳನ್ನು ವ್ಯಕ್ತಪಡಿಸಿದರು. ಕವಿಸಮ್ಮೇಳನದ ಅಧ್ಯಕ್ಷರಾದ ಶ್ರೀ ರಾಜರತ್ನಂ, ನಾಟಕ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕಾರಂತರು ಕನ್ನಡನಾಡಿನ ಗತವೈಭವವನ್ನು ಸ್ಮರಣೆಗೆ ತರುವಂತೆ ಕಾರ್ಯಭಾಗಗಳನ್ನು ನಡೆಸಿದರು. ಕರ್ನಾಟಕ ಏಕೀಕರಣ ಸಭೆಯ ಶ್ರೀ ಅಂಗಡಿಯವರು, ಒಳ್ಳೇ ದಪ್ಪಡಿಂದಲೂ, ಪ್ರತಿಭೆಯಿಂದಲೂ ಸಭೆಯನ್ನು ನಡೆಸಿದರು. ತುಂಗಭದ್ರಾ ಯೋಜನೆಯ ಮಹತ್ವಕ್ಕೆ ಬೆಂಬಲವು ಕೊಡಲಾಯಿತು. **ಈ ಸಮ್ಮೇಳನದ ಇನ್ನೊಂದು ವಿಶೇಷವೆಂದರೆ—ಎಲ್ಲಾ ಜಾತಿ ಮತಗಳವರೂ ವಿವಿಧ ರಾಜಕೀಯ ಪಕ್ಷದವರೂ, ಬಂಧುಗಳಂತೆ ಕೆಲಸ ಸಮ್ಮೇಳನದ ಯಶಸ್ವಿಗಾಗಿ ಸರ್ವಸಮತ್ವ ಬುದ್ಧಿಯಿಂದ ದುಡಿದರು. ಇದೇ ಸೌಹಾರ್ದಭಾವವು ಕಾಂಗ್ರೆಸ್ಸಿನ ಎಲ್ಲಾ ಕಾರ್ಯಗಳಲ್ಲೂ ವ್ಯಕ್ತವಾಗಿ, ಜಿಲ್ಲೆಯು ರಾಜಕೀಯ, ಆರ್ಥಿಕ ಸ್ಥಿತಿಕ ವಿಚಾರಗಳಲ್ಲಿ ಮುಂದುವರಿಯಲೆಂದು ನಾವು ಆಶಿಸುತ್ತೇವೆ.**

ಸಮ್ಮೇಳನವನ್ನು ಇಷ್ಟು ಯಶಸ್ವಿಮಾಡಿ ಬಳ್ಳಾರಿಗೆ ಕೀರ್ತಿತಂದ ಜಿಲ್ಲೆಯ ಎಲ್ಲಾ ಭಾಗದ ಮಹನೀಯರಿಗೂ, ಕಾರ್ಯಕರ್ತರಿಗೂ ಸಮ್ಮೇಳನದ ವಿವಿಧ ಶಾಖೆಗಳ ಕಾರ್ಯದರ್ಶಿಗಳಿಗೂ ನಾವು ಋಣಿಗಳಿರಬೇಕಾಗಿದೆ. ಈ ಸಂದರ್ಭದಲ್ಲಿ ನಾವು ಅವರನ್ನು ಹಾರ್ದಿಕವಾಗಿ ಅಭಿನಂದಿಸದಿರಲಾರೆವು.

ಕೋರ್ಟು ಮತ್ತು ಶೆರೆಮನೆಗಳ ಖಾತೆಯ ಮಂತ್ರಿ

ಶ್ರೀ ಕೆ. ರಾಮನ್ ಮೆನನ್‌ರವರು ಕಾಲಾಧೀನವಾದರು.

ಮದ್ರಾಸು ಜನವರಿ 3

ನ್ಯಾಯಾಸ್ಥಾನಗಳ ಮತ್ತು ಶೆರೆಮನೆಗಳ ಸಚಿವರಾಗಿದ್ದ ಶ್ರೀ ಕೆ. ರಾಮ್ಮಮೆನನ್‌ರವರು ಇಂದು ರಾತ್ರಿ ಸುಮಾರು 8—30 ಘಂಟೆ ಹೊತ್ತಿನಲ್ಲಿ ಸ್ವರ್ಗಸ್ಥರಾದರು. ಅವರು ಕೊಂಚಕಾಲದಿಂದ ರೋಗಸ್ಥರಾಗಿದ್ದರು. ಶನಿವಾರ ಸಂಜೆ ಅವರನ್ನು ಜನರಲ್ ಆಸ್ಪತ್ರೆಯಿಂದ ಕಾಲೇಜ್ ಪಾರ್ಕ್ ಬಂಗಲೆಗೆ (ಕೆಲ್‌ಪಾರ್ಕ್) ಸಾಗಿಸಲಾಯಿತು. ಅವರು ಇಂದು ಅಲ್ಲಿ ಸ್ವರ್ಗಸ್ಥರಾದರು.

ಶ್ರೀ ರಾಮನ್‌ಮೆನನ್ ಬಿ. ಎಲ್. ಡಿಗ್ರಿಯನ್ನು ಪಡೆದು ಕಾಲಿಕಟ್ ನಗರದಲ್ಲಿ ವಕೀಲವೃತ್ತಿಯನ್ನು 1919ರಲ್ಲಿ ಕೈಗೊಂಡರು. ಕೊಂಚ ದಿನಗಳಲ್ಲಿಯೇ ಅವರು ಕಾಂಗ್ರೆಸ್ಸಿಗೆ ಸೇರಿದರ. ಮತ್ತು ಸಾರ್ವಜನಿಕ ಜೀವನದಲ್ಲಿ ಕಾಲಿಟ್ಟರು. ಶಾಸನಭಂಗ ಚಳುವಳಿಯ ಕಾಲದಲ್ಲಿ 2 ಸಾರಿ ಅವರು ಜೈಲಿಗೆ ಹೋಗಿದ್ದರು.

ಕಳೆದ ಚುನಾವಣೆಗಳಲ್ಲಿ ಅವರು ಮಲಬಾರಿನಿಂದ ಉಮೇದುವಾರರಾಗಿ ನಿಂತು ಮದರಾಸ್ ಅಸೆಂಬ್ಲಿ ಸಭೆಗೆ ಚುನಾಯಿಸಲ್ಪಟ್ಟರು. 1937ನೇ ವರ್ಷದ ಜೂಲೈ ತಿಂಗಳಲ್ಲಿ ಕಾಂಗ್ರೆಸ್ ಮಂತ್ರಿಗಳಿಗಾಗಿ ನಿಯಮಿಸಲ್ಪಟ್ಟರು.

ಈ ದಿನ ಪ್ರಾತಃಕಾಲ ಶವಸಂಸ್ಕಾರವು ನಡೆಯಿತು. ಮುಖ್ಯಪ್ರಧಾನರಾದ ಶ್ರೀ ರಾಜಗೋಪಾಲಾಚಾರಿ ಮತ್ತು ಇತರ ಸಚಿವರು ಪಾರ್ಲಿಮೆಂಟರಿ ಕಾರ್ಯದರ್ಶಿಗಳು ನ್ಯಾಯಮೂರ್ತಿ ಸರ್ ಮಾಧವನಾಯರ್, ಮತ್ತು ಇತರ ಮಹನೀಯರೂ ಅಧಿಕಾರಿಗಳೂ ಕಾಲೇಜ್ ಭವನಕ್ಕೆ ಬಂದು ಶ್ರೀ ರಾಮ್ಮಮೆನನ್‌ರವರ ಅಂತಿಮದರ್ಶನವನ್ನು ತೆಗೆದುಕೊಂಡರು.

ಶ್ರೀ ರಾಮ್ಮಮೆನನ್‌ರವರಿಗೆ ಸಾಯುವಾಗ 43 ವರ್ಷವಾಗಿತ್ತು. ಅವರಿಗೆ ಧರ್ಮ ಪತ್ನಿಯೂ ವೃದ್ಧ ಮಾತೆಯೂ ಆರು ಮಂದಿ ಮಕ್ಕಳೂ ಇಬ್ಬರು ಸಹೋದರರೂ ಒಬ್ಬ ಸಹೋದರಿಯೂ ಇದ್ದಾರೆ.

Supplement to—CONGRESS BULLETIN. 7/1/39

ಆದವಾನಿ
ರಾಯರಸೀಮೆ ಮಹಾಸಭೆಯಲ್ಲಿ
ತೀರ್ಮಾನಿಸಲ್ಪಟ್ಟ ನಿರ್ಣಯಗಳು.

(೧೯೩೮ನೇ ಡಿಸೆಂಬರ್ ೨೪—೨೫)

[1] ರಾಯರಸೀಮೆಯು ಮಳೆ ಇಲ್ಲದ ಪರಿಸ್ಥಿತಿ, ಕ್ಷಾಮಗಳಿಗೆ ತುತ್ತಾಗಿ ಆರ್ಥಿಕವಾಗಿ ಹೀನವಾಗಿರುವುದರಿಂದಲೂ, ಹಿಂದಿನ ಸರಕಾರಗಳು (ನೀರಾವರಿ ಮತ್ತು ಔದ್ಯೋಗಿಕೋನ್ನತಿಗಾಗಿ ಏನೂ ಮಾಡದಿದ್ದುದರಿಂದಲೂ, ಆಂಧ್ರ ಕರ್ನಾಟಕ ಪ್ರಾಂತಗಳನ್ನು ನಿರ್ಮಾಣ ಮಾಡಬೇಕೆಂಬ ಚಳವಳಿಯಿಂದ ರಾಯರಸೀಮೆಯ ಆರ್ಥಿಕಾಭಿವೃದ್ಧಿಯ ಮುಖ್ಯ ಪ್ರಶ್ನೆಗೆ ಬಹಳ ಧಕ್ಕೆಯು ಸಂಭವಿಸುವದರಿಂದಲೂ, ಈಗ ಆಲೋಚಿಸಲ್ಪಟ್ಟ ಭಾಷಾವಾರು ಪ್ರಾಂತಗಳಿಗೆ ರಾಯರಸೀಮೆಯಲ್ಲಿ ದೊಡ್ಡ ಭಾಗವನ್ನು ನೀರಾವರಿಮಾಡುವ **ತುಂಗಭದ್ರಾಯೋಜನೆ** ಯನ್ನಾಗಲೀ, ಇತರ ನೀರಾವರಿ ಮತ್ತು ಉಪಯುಕ್ತ ಔದ್ಯೋಗಿಕ ಯೋಜನೆಗಳನ್ನಾಗಲೀ ಕೈಗೊಳ್ಳಲು, ಆರ್ಥಿಕ, ಪ್ರಾಂತೀಕ ಮತ್ತು ಇತರ ಕಾರಣಗಳಿಂದ ಅಸಾಧ್ಯವಾಗಿರುವುದರಿಂದಲೂ,—ಆಂಧ್ರ - ಕರ್ನಾಟಕ ಪ್ರಾಂತಗಳ ನಿರ್ಮಾಣಕ್ಕೆ ಪೂರ್ವವೇ - ರಾಯರಸೀಮೆಯ ಆರ್ಥಿಕಾಭಿವೃದ್ಧಿಗಾಗಿ - ತುಂಗಭದ್ರಾ ಮತ್ತು ಇತರ ನೀರಾವರಿ ಯೋಜನೆಗಳು. ಔದ್ಯೋಗಿಕ ಯೋಜನೆಗಳು ಪ್ರಾರಂಭಿಸಲ್ಪಟ್ಟು ವಿದ್ಯಾ ಸಂಕಾರ್ಯಗಳು ಹೆಚ್ಚಿಸಲ್ಪಟ್ಟು ಬಹುಮಟ್ಟಿಗೆ ಮುಗಿಯಬೇಕೆಂದು ಈ ಸಭೆಯ ಖಂಡಿತಾಭಿಪ್ರಾಯವಿದೆ.

(2) ಕ್ಷಾಮ-ಸಿಬಂಧನೆಗಳನ್ನು ಬೇಡಿಮಾಡಲು ಒಂದು ಸಮಿತಿಯನ್ನು ರಚಿಸಿದ್ದಕ್ಕಾಗಿ ಈ ಸಭೆಯು ಮದ್ರಾಸ್ ಸರಕಾರವನ್ನು ಅಭಿನಂದಿಸುತ್ತಾ ಆ ವರದಿಯನ್ನು ಕೂಡಲೇ ಪ್ರಕಟಿಸಬೇಕೆಂದೂ ರಾಯರಸೀಮೆಗಾಗಿ ಆರ್ಥಿಕಾಭಿವೃದ್ಧಿಯ ಸಮಿತಿಯನ್ನು ತೀಳ್ವಡಲ್ಲೆ ಏರ್ಪಡಿಸಿ-ಮುಖ್ಯವಾಗಿ **ತುಂಗಭದ್ರಾ ಯೋಜನೆ**, ನೀರಾವರಿಯೋಜನೆಗಳು, ಕೆರೆ ಮತ್ತು ಕಾಲುವೆಗಳ ಪುನರುದ್ಧಾರ - ಔದ್ಯೋಗಿಕ - ಯೋಜನೆಗಳ ಕಾರ್ಯ ನಿರ್ವಹಣೆ ಸಮಿತಿಯ ಶಿಫಾರ್ಸುಗಳನ್ನು ಕೂಡಲೇ ಕಾರ್ಯರೂಪವಲ್ಲಿ ತರಬೇಕೆಂದೂ ಈ ಸಭೆಯು ಸರಕಾರವನ್ನು ಕೋರುತ್ತದೆ.

3] ಪದೇ ಪದೇ ಸಂಭವಿಸುವ ಕ್ಷಾಮಗಳನ್ನು ಲಕ್ಷಿಸದೆ, ಕಾಲಕಾಲಕ್ಕೆ ವಿಮರ್ಶೆಯಾದಾಗ (**Re-settlement**] ರಾಯರಸೀಮೆಯ ರೈತವಾರಿ ಭೂಮಿಗಳ ಸಿಸ್ತನ್ನು ಅಮಿತವಾಗಿ ಹೆಚ್ಚಿಸಿರುವಕಾರಣ - ಈ ಕಂದಾಯವನ್ನೂ, ನೀರಾವರಿ ರೇಟುಗಳನ್ನೂ ಬಹುಮಟ್ಟಿಗೆ ಕಡಮೆಮಾಡಲು ಸರಕಾರದವರು ತೀವ್ರವಾಗಿ ಒಂದು ಸಮಿತಿಯನ್ನು ರಚಿಸಬೆಕೆಂದು ಈ ಸಭೆಯು ಕೋರುತ್ತದೆ.

4) ಬಳ್ಳಾರಿ, ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿ ೧೯೩೯ನೇ ಅಕ್ಟೋಬರ್ ತಿಂಗಳೊಂದೆ ಮಾದಕವಸ್ತು ನಿಷೇಧವನ್ನು ಜಾರಿಗೆ ತರಬೇಕೆಂದೂ, ಮುಖ್ಯವಾಗಿ ಈ ಜಿಲ್ಲೆಗಳಲ್ಲಿ ಆರ್ಥಿಕ ಸ್ಥಿತಿಯನ್ನು ಗಮನಿಸಬೇಕೆಂದೂ ಈ ಸಭೆಯು ಸರಕಾರಕ್ಕೆ ಸೂಚಿಸುತ್ತದೆ.

[5] ರಾಯರಸೀಮೆಯಲ್ಲಿ ಸರಕಾರದ ಎಲ್ಲಾ ಶಾಖೆಗಳಲ್ಲೂ ನವಕರಿಯಬಗ್ಗೆ ರಾಯರಸೀಮೆಯ ಜನರ ಹಕ್ಕುಗಳು ದುರ್ಬಲಗೊಳಿಸಲ್ಪಟ್ಟುದಕ್ಕೆ ಈ ಸಭೆಯು ತನ್ನ ವಿಷಾದವನ್ನು ಸೂಚಿಸುತ್ತಾ ರಾಯರಸೀಮೆಯ ಜನರ ಹಕ್ಕುಗಳು ದುರ್ಬಲಗೊಳಿಸಲ್ಪಟ್ಟುದಕ್ಕೆ ಈ ಸಭೆಯು ತನ್ನ ವಿಷಾದವನ್ನು ಸೂಚಿಸುತ್ತಾ ರಾಯರಸೀಮೆಯ ಜಿಲ್ಲೆಗಳ ಎಲ್ಲಾ ಇಲಾಖೆಗಳಲ್ಲಿ ಹೊರಗಿನವರ ಸಂಖ್ಯೆಯು ಇನ್ನೂ ಹೆಚ್ಚುತ್ತಿರುವುದಕ್ಕೆ ಕಳವಳವನ್ನು ಸೂಚಿಸುತ್ತಾ ಈ ದೊಡ್ಡ ಅನ್ಯಾಯವನ್ನು ತಕ್ಷಣವೇ ಸರಿಮಾಡಲು ಸರಕಾರವನ್ನು ಬೇಡುತ್ತದೆ.

P. T. O.

128

129

[6] ಯುದ್ಧಾನಂತರ ಮಂತ್ರಿವರ್ಗದಲ್ಲಿ ರಾಯರಸೀಮೆಗಾಗಿ ಸಾಕಾವಷ್ಟು ಸ್ಥಾನವನ್ನು ನ್ಯಾಯವಿಲ್ಲದಿರುವುದಕಾರಣ ಈ ಸಭೆಯು ಖಂಡಿಸುತ್ತದೆ. ಮತ್ತೂ ಈ ತಪ್ಪನ್ನು ಆದಷ್ಟು ಶೀಘ್ರಕಾಲದಲ್ಲಿ ಸರಿಪಡಿಸಲು ಕೋರುತ್ತದೆ.

[7] [A] ತಮ್ಮ ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಇಂದು ಭಾಗವಹಿಸಲು ಹೆಚ್ಚಿನ ಅವಕಾಶವು ಮಾಡಿಯಬೇಕೆಂದು ರಾಯರ ಸೀಮೆಯ ಜನರನ್ನು ಈ ಸಭೆಯು ಬೇಡುತ್ತದೆ.

[B] ರಾಯರಸೀಮೆಯ ಹಿತಾಭಿವೃದ್ಧಿಗಾಗಿ ಈ ಸಭೆಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವವರ ಮೂಲಕವೂ, ಇತರ ಕಾರ್ಯವನ್ನು ಮಾಡುವುದರ ಮೂಲಕವೂ, ಹೆಚ್ಚಿನ ಸಂಖ್ಯೆಯನ್ನು ಸೇರಿಸಿಕೊಳ್ಳಲಿಕ್ಕೆ ಅಧಿಕಾರ ವಿರುವ ಒಂದು ಕಾರ್ಯ ಕಾರಿಣೀಸಮಿತಿ ಇರಬೇಕೆಂದು ಈ ಸಭೆಯು ಶ್ರೀ ಹೆಚ್.ಲಿಂಗಾರೆಡ್ಡಿಯವರನ್ನು ಕಾರ್ಯದರ್ಶಿಗಳ ನ್ನಾಗಿಯೂ, ಈ ಸಭಾಧ್ಯಕ್ಷರನ್ನು ಅಧ್ಯಕ್ಷರನ್ನಾಗಿಯೂ (ಶ್ರೀ. ಆರ್. ಸೂರ್ಯನಾರಾಯಣರಾವ್) ಈ ವರ್ಷಕ್ಕೆ ನಿಯಮಿಸುತ್ತದೆ.

8. ತನ್ನ ಆರ್ಥಿಕ ಜೀವನದ ಪುರೋಭಿವೃದ್ಧಿಗಾಗಿ ರಾಯರಸೀಮೆ ಬ್ಯಾಂಕ್ ಮತ್ತು ಇನ್ಶೂರೆನ್ಸ್ ಸ್ಥಾಪಿಸಲ್ಪಡುವ ಉದ್ದೇಶ. ತಕ್ಕ ಪ್ರಯತ್ನಗಳನ್ನು ನಡೆಸಬೇಕೆಂದು ಈ ಸಭೆಯು ನಮ್ಮ ಜಿಲ್ಲೆಗಳಲ್ಲಿನ ಉದಾರ ವೃತ್ತಿಯ ಜನರನ್ನು ಬೇಡುತ್ತದೆ.

9. ಈಗಿನ ಏರ್ಪಾಟು ಬಹಳ ಅತೃಪ್ತಿದಾಯಕವಾಗಿರುವುದರಿಂದ ಅಖಿಲಭಾರತ ಚರಖಾ ಸಂಸ್ಥೆಯವರು, ರಾಯರಸೀಮೆಗಾಗಿ ಪ್ರತ್ಯೇಕ ಶಾಖೆಯನ್ನು, ಸ್ಥಾಪಿಸಬೇಕೆಂದು, ಈ ಸಭೆಯು ಅವರನ್ನು ಬೇಡುತ್ತದೆ.

10. ರಾಯಸೀಮೆಯ ವೃತ್ತ ಪತ್ರಿಕೋದ್ಯೋಗಕ್ಕೆ ಸಹಾಯವನ್ನು ಒದಗಿಸಬೇಕಾದುದು ಅಗತ್ಯವೂ, ನ್ಯಾಯವಾದುದೂ ಆಗಿರುವಕಾರಣ ಈ ಉದ್ದೇಶವು ಸಾಧಿಸಬೇಕಾಗಿರುವುದರಿಂದ ಸ್ಥಾನೀಕ ಸಂಸ್ಥೆಗಳೂ, ಇತರ ಧರ್ಮ ಸಂಸ್ಥೆಗಳೂ, ತಮ್ಮ ಉದಾರಸಹಾಯವನ್ನಿತ್ತು ರಾಯರಸೀಮೆಯ ವೃತ್ತ ಪತ್ರಿಕೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಡಬೇಕೆಂದು ಈ ಸಭೆಯು ಕೋರುತ್ತದೆ.

11. ಆಂಧ್ರ ವಿಶ್ವವಿದ್ಯಾಲಯಕ್ಕೆ ರಾಯರಸೀಮೆಯನ್ನು ಸೇರಿಸಬೇಕೆಂದು ಪ್ರಯತ್ನವನ್ನು ಈ ಸಭೆಯು ಬಲವಾಗಿ ನಿಷೇಧಿಸುತ್ತದೆ.

12. ರಾಯರಸೀಮೆ "ಸ್ವಯಂಸೇವಕ ದಳವು" ಕೂಡಲೇ ರಚಿಸಲ್ಪಡಬೇಕೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ

13. ಅರಣ್ಯಭಾಗಗಳಲ್ಲಿ ವಾಸಿಸುತ್ತಿರುವ ಅನೇಕ ಕೊಂಡರಿಗಳ ಕಡೆಗೆ ಸರ್ಕಾರವು ಗಮನಕೊಡಬೇಕೆಂದು ಸೂಚಿಸುತ್ತಾ, ಅವರ ಕಷ್ಟಗಳನ್ನು ದೂರಮಾಡಲು ಸಹಕಾರವಾದ ಅರಣ್ಯನಿಬಂಧನೆಗಳ ಸರಳಮಾಡಬೇಕೆಂದು ಈ ಸಭೆಯು ಸೂಚಿಸುತ್ತದೆ.

14. "ಶ್ರೀ ಬಾಗ್ ಸಂಧಿ" ಯು ರಾಯರಸೀಮೆಯವರ ಅಭಿಪ್ರಾಯಗಳನ್ನಾಗಲಿ ಆಶಯಗಳನ್ನಾಗಲೀ ಸೂಚಿಸುವುದಿಲ್ಲವೆಂದೂ ಅದಕ್ಕೆ ಅಧಿಕಾರವಾಣಿ ಇಲ್ಲವೆಂತಲೂ ಈ ಸಭೆಯು ಅಭಿಪ್ರಾಯಪಡುತ್ತದೆ.

15. ರಾಯಸೀಮೆ ಜಿಲ್ಲೆಗಳು ಹಿಂದುಳಿದಿರುವ ಕಾರಣ ಇವರಿಗೆ ಕೆಲವಾರು ಸ್ಥಾನಗಳನ್ನು ಕಾದಿಟ್ಟು, ರಾಯರಸೀಮೆಯ ವಿದ್ಯಾರ್ಥಿಗಳು ವಿದ್ಯಾಸಂಸ್ಥೆಗಳಲ್ಲಿ ಸೇರಲಿರುವ ಈಗಿನ ಕಷ್ಟಗಳನ್ನು ನಿವಾರಿಸಬೇಕೆಂದು ಈ ಸಭೆಯು ಸರ್ಕಾರವನ್ನು ಕೋರುತ್ತದೆ.

---

*ಸಕ್ಕರೆ ಸಾಮ್ರಾಜ್ಯಾಲಯ, ತೇರು ಬಜಾರ್, ಬಳ್ಳಾರಿ.

ತ್ರಿಪುರೀ ಕಾಂಗ್ರೆಸ್ಸು ಪ್ರತಿನಿಧಿಗಳ ಚುನಾವಣೆ.

ಮಾರ್ಚ್ ತಿಂಗಳಲ್ಲಿ ನಡೆಯಬೇಕಾದ ತ್ರಿಪುರೀ ಅಧಿವೇಶನಕ್ಕೆ ಪ್ರಾಥಮಿಕ ಸದಸ್ಯರು ದಾನೂಷಾ ಪ್ರಕಾರ ಪ್ರಾಂತ್ಯಗಳಿಗೆ ಕೊಟ್ಟ ಸಂಖೆಗನುಗುಣವಾಗಿ ಪ್ರತಿನಿಧಿಗಳನ್ನಾರಿಸಬೇಕಾಗಿದೆ. ಬ್ರಿಟಿಷ್ ಕರ್ನಾಟಕದ ಅನೇಕ ಮುಖ್ಯ ಮುಖಂಡರು ತಮ್ಮ ಭಾಗಗಳನ್ನು ಬಿಟ್ಟು ಮೈಸೂರು ಸಂಸ್ಥಾನದ ವಿವಿಧ ಭಾಗಗಳಲ್ಲಿ ನಿಂತಿರುತ್ತಾರೆ. 'ವಿಶ್ವ ಕರ್ನಾಟಕ' ದಿನ ಪತ್ರಿಕೆಯು ತನ್ನ 3—1—39ರ ಸಂಚಿಕೆಯ ಸಂಪಾದಕೀಯ ಲೇಖನದಲ್ಲಿ ಈ ಕೆಳಗೆ ಕಂಡಂತೆ ಟೀಕೆಮಾಡಿದೆ.

ಇದು ಸರಿಯಲ್ಲ

ಜನವರಿ 8ನೇ ತಾ॥ ದಿನ ತ್ರಿಪುರೀ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳ ಚುನಾವಣೆ ನಡೆಯುವುದಾಗಿದೆಯಷ್ಟೆ. ಮೈಸೂರಿನ ಹೊರಗಿನ ಮುಖಂಡರು ಮೈಸೂರು ಸಂಸ್ಥಾನದ ನಾನಾ ಚುನಾವಣೆ ಕ್ಷೇತ್ರಗಳಿಂದ ಉಮೇದುವಾರರಾಗಿ ನಿಂತಿದ್ದಾರೆ. ಇದುಬಹು ವಿಚಿತ್ರವೂ ವಿಷಾದಕರವೂ ಆದ ಅಂಶವೆಂದು ನಾವು ಹೇಳಬೇಕಾಗಿದೆ.

ಶ್ರೀ ಆರ್. ಆರ್. ದಿವಾಕರ್, ಶ್ರೀ ಆರ್. ಎಸ್. ಹುಕ್ಕೇರಿಕರ್, ಶ್ರೀ ಕರಿಗುದರಿ, ಶ್ರೀಮತಿ ಕಮಲಾದೇವಿ.... ಇಂಥ ಮಹನೀಯರು ಸಂಸ್ಥಾನದ ನಾನಾ ಕ್ಷೇತ್ರಗಳಲ್ಲಿ ಉಮೇದುವಾರರಾಗಿ ನಿಲ್ಲುವುದು ಅಭಿನಂದನೀಯವಾದ ವಿಚಾರವೇ ಸರಿ. ಆದರೆ ಅವರು ಹಾಗೆ ಮಾಡುವುದರಿಂದ ಸಂಸ್ಥಾನದ ಹಿತವನ್ನು ಸಾಧಿಸಿದಂತಾಗುವುದಿಲ್ಲವೆಂದು ನಾವು ವಿಷಾದದಿಂದ ಸೂಚಿಸುತ್ತೇವೆ. ಹೀಗೆ ಹೇಳುವಾಗ, ಆ ಮಹನೀಯರ ವಿಚಾರದಲ್ಲಿ ನಾವು ಕೊಂಚವೂ ದುರುದ್ದಿಶ್ಯಗಳನ್ನಿಟ್ಟುಕೊಂಡಿಲ್ಲವೆಂಬುವನ್ನು ಸ್ಪಷ್ಟಪಡಿಸಲಪೇಕ್ಷಿಸುತ್ತೇವೆ.

ಮೈಸೂರಿನವರ ರಾಜಕೀಯ ಜ್ಞಾನ ಬೆಳೆಯಬೇಕು ಕಾಂಗ್ರೆಸ್ಸಿನ ಕಾರ್ಯಕ್ರಮವು ಮೈಸೂರಿನವರಿಗೆ ಹೆಚ್ಚು ಹೆಚ್ಚಾಗಿ ಮನದಟ್ಟಾಗಬೇಕು. ಕರ್ನಾಟಕದ ಮುಖಂಡರ ವರ್ತನೆಯು ಇವಕ್ಕೆ ಕೊಂಚವೂ ಸಹಕಾರಿಯಾಗಿಲ್ಲ. ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಹೋಗಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮೈಸೂರಿನವರಿಗಿರುವ ಅಲ್ಪ ಸ್ವಲ್ಪ ಅವಕಾಶಗಳನ್ನೂ ಕಿತ್ತುಕೊಳ್ಳಲು ಕರ್ನಾಟಕದ ಮುಖಂಡರು ಮುಂದೆ ಬಂದಿದ್ದಾರೆ. ಮೈಸೂರು ಕಾಂಗ್ರೆಸ್ ದಿವಾಳಿ ಎದ್ದಿದೆಯೇನು? ಒಂದು ವೇಳೆ ದಿವಾಳಿ ಎದ್ದಿದ್ದರೂ ಕೂಡ ಕರ್ನಾಟಕದ ಮುಖಂಡರು ಮೈಸೂರಿನ ಚುನಾವಣೆ ಕ್ಷೇತ್ರಗಳಿಂದ ಉಮೇದುವಾರರಾಗಿ ನಿಲ್ಲುವುದನ್ನು ಪ್ರತಿಭಟಿಸಬೇಕಾಗಿದೆ. ಈ ಚುನಾವಣೆಗಳಲ್ಲಿ ಉಮೇದುವಾರರಾಗಿ ನಿಲ್ಲಲು ಸಮರ್ಥರಾದ ಮಹನೀಯರು ಮೈಸೂರಿನಲ್ಲಿಲ್ಲ ವೆಂದು ನಾವು ನಂಬುವುದಿಲ್ಲ. ಒಂದು ವೇಳೆ ಸಮರ್ಥರಾದವರಿಲ್ಲದಿದ್ದರೆ, ಅಂತಹವರನ್ನು ಸೃಷ್ಟಿಮಾಡುವುದು ನಾಯಕರಾದವರ ಕೆಲಸ. ಅದನ್ನು ಬಿಟ್ಟು ಹೊರಗಿನವರು ಮೈಸೂರಿನ ಪರವಾಗಿ ಪ್ರಾತಿನಿಧ್ಯ ವಹಿಸಲು ಬಿಡುವುದು ಎಷ್ಟು ಮಾತ್ರವೂ ನ್ಯಾಯವೆನಿಸಲಾರದು. ಈಗಾಗಲೇ ಈ ವಿಚಾರದಲ್ಲಿ ಪ್ರತಿಭಟನೆಗಳಿದ್ದಿವೆ. ತಕ್ಕಷ್ಟು ಮುಂಚೆಯೇ ಈ ವಿಚಾರವು ಸಾರ್ವಜನಿಕರಿಗೆ ತಿಳಿದಿದ್ದರೆ ಉಗ್ರ ಪ್ರತಿಭಟನೆಯೇಳುತ್ತಿತ್ತೆಂದು ಧಾರಾಳವಾಗಿ ಹೇಳಬಹುದು.

ಕರ್ನಾಟಕದ ಮುಖಂಡರು ಮೈಸೂರಿನವರ ಕಾರ್ಯಕ್ಷೇತ್ರದ ಮೇಲೆ ಅತಿಕ್ರಮಿಸುವುದು ಸರಿಯಲ್ಲ. ಅವರು ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾವು ನಮ್ರತೆಯಿಂದ ಸೂಚನೆ ಮಾಡುತ್ತೇವೆ. ಮೈಸೂರಿನ ಪ್ರತಿನಿಧಿಗಳಾಗಿರುವುದರಿಂದ ಅವರು ಸಂಸ್ಥಾನಕ್ಕೆ ಮಾಡಬಹುದಾದ ಉಪಕಾರಕ್ಕಿಂತ ಹೆಚ್ಚಿನ ಅಪಕಾರ ಮಾಡಿದಂತಾಗುತ್ತದೆ.

ಶ್ರೇಷ್ಠವಾದ

ಮುದ್ರಣ ಕೆಲಸ

(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ

ಬೇರೆ ಬೇರೆ ಬಣ್ಣಗಳ ಕ್ಲಾಕು ಸಮೇತ

ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ

ವಿಠಲ ಮುದ್ರಣಾಲಯಕ್ಕೆ

ಬನ್ನಿರಿ

1. ಉತ್ತಮ ಮುದ್ರಣವು ಕಲೆಯ ಹೆಗ್ಗುರುತು!
2. ಹೊತ್ತಿಗೆ ಸರಿಯಾಗಿ ದೊರೆಯುವದು ವ್ಯವಹಾರಕ್ಕೆ ಭೂಷಣ!!
3. ಕೆಲಸಗಳೆಲ್ಲ ಸಾಮಾನ್ಯ ದರದಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

—ವ್ಯವಸ್ಥಾಪಕ

ವಿಠಲ ಮುದ್ರಣಾಲಯ,

ತೇರು ಬಜಾರು ಬಳ್ಳಾರಿ.

ಅಂಬಾ ಭವನ ಕಾಫೀ ಕ್ಲಬ್ (ರಿಜಿಸ್ಟರ್ಡ್)

ಮತ್ತು

ಶಾಖೆ:— **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ - ಬೆಳಕು ಸಮೃದ್ಧ ಇತರ ಅನುಕೂಲಗಳುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕ್ಯ ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಿಟರ್ಸು— ಶಿ. ಕೆಸ್ಮಯ್ಯ, ಹೆಚ್. ಶಿರಿಬಸಪ್ಪ.

ಬಳ್ಳಾರಿಯಲ್ಲಿ
೨೩ನೇ ಕರ್ನಾಟಕ ಸಾಹಿತ್ಯ ಸಮ್ಮೇಳನ
೨೯ನೇ ತಾ|| ಗುರುವಾರ.

ಬಳ್ಳಾರಿಯಲ್ಲಿ ನಡೆದ ೨೩ನೆಯ ಕರ್ನಾಟಕಸಾಹಿತ್ಯ ಪರಿಷತ್ ಉತ್ಸವವು ಎಲ್ಲಾ ವಿಧಗಳಿಂದಲೂ ಅಪೂರ್ವವಾಗಿತ್ತೆ. ರಾಜಕೀಯ ಮತ್ತು ಸಾಹಿತ್ಯಗಳ ವಿಷಯಗಳಲ್ಲಿ ಸಮಾನ ಪ್ರಸಿದ್ಧಿಯನ್ನು ಹೊಂದಿ 'ಕರ್ನಾಟಕ ಗಾಂಧಿ' ಯೆಂದು ಹೆಸರಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಅಧ್ಯಕ್ಷರಾಗಿದ್ದರೂ, ಸಂಸ್ಥಾನಾಧೀಶ್ವರರಾದ ಸಂಡೂರು ಎಂಬ ನಿತಿಗಳು ಪ್ರಾರಂಭೋತ್ಸವವನ್ನು ನೆರವೇರಿಸಿದ್ದರೂ, ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ನವಯುಗಕ್ಕೆ ಪ್ರಾರಂಭ ಕೊಟ್ಟಂತಾಗಿದೆ. ಈವರೆಗೆ ಪ್ರತಿಸಾರಿಯ ಅಧ್ಯಕ್ಷರನ್ನು ೩೫ ಎತ್ತುಗಳ ರಥದಲ್ಲಿಯೂ, ಸಂಡೂರು ರಾಜರನ್ನು ಅಲಂಕರಿಸಿದ ಅಂಬಾರಿಯಲ್ಲಿಯೂ ನೆರಸಣಿಗೆಯಲ್ಲಿ ತಗೆದುಕೊಂಡು ಹೋದಾಗ ಸ್ಥಳಪರಸ್ಥಳದ ಸ್ತ್ರೀಪುರುಷರು ರಸ್ತೆಗಳಲ್ಲೆಲ್ಲಾ ಕಿಕ್ಕಿರಿದು ನೆರೆದು, ತಮ್ಮ ಆನಂದೋತ್ಸವಗಳನ್ನು ಪ್ರಕಟಿಸಿದರು. ಸಾಂಬಮೂರ್ತಿ ಮೈದಾನದಿಂದ ನಾಟಕಶಾಲೆಗೆ ಬರುತ್ತಿರುವಾಗಿನಿಂದ ಸುಮಾರು ೩ ಘಂಟೆಯಾಯಿತು. ಚನ್ನಬಸವೇಶ್ವರ ನಾಟಕ ಶಾಲೆಯು ಸಲವಾಯಿತು..

ಶ್ರೀ ಜೋ. ಪೊಡ್ಡನಗೌಡರ ವಾಗ್ದಾನೆಯೂ, ಶ್ರೀಮತಿ ಕೆ ಶಿ ಪುತ್ತಪ್ಪನ ಸ್ವಾಗತಗೀತೆಯೂ, ಶ್ರೀ ಡಾ. ಎಸ್ ಸುಬಣ್ಣನವರ ಸೋತ್ರರೂಪ ಗೀತೆಗಳೂ, ಆನಂತರ ಸ್ವಾಗತಾಧ್ಯಕ್ಷರಾದ ಶ್ರೀ ವೈ ನಾಗೇಶಶಾಸ್ತ್ರಿಗಳು ತಮ್ಮ ಭಾಷಣವನ್ನೊಂದಿ ಮುಗಿಸಿದರು ಸಂಡೂರು ರಾಜಾ ಸಾಹೇಬರು ಮಹಾಸ್ತ್ರೀಯರಿಂಗಿ ಕನ್ನಡಕ್ಕೆ ಅಪರಿಚಿತರಾದರೂ ಈಗ ಕನ್ನಡವನ್ನು ಕಲಿಯುತ್ತಿರುವಂತೆ ಭಾಸವಾಗುತ್ತಲಿದೆ. ಇನ್ನರು ತಮ್ಮ ಭಾಷಣವನ್ನು ಸಂಸ್ಕೃತ ಲಿಪಿಯಲ್ಲಿ ಬರೆದುಕೊಂಡು, ಸಿಧಾನವಾಗಿ, ಸ್ಪಷ್ಟ ಕನ್ನಡದಲ್ಲಿ ಹೇಳಿದರು. ಭಾಷಣಾನಂತರ ಅವರು ಹಿಂದೂಸ್ಥಾನಕ್ಕೆ ರಾಷ್ಟ್ರಭಾಷೆಯ ಅವಶ್ಯಕತೆಯನ್ನು ಹೇಳಿ, ಹಿಂದೂಸ್ಥಾನದ ಎಲ್ಲಾ ಭಾಷೆಗಳನ್ನೂ ನಾಗರಿ ಲಿಪಿಯಲ್ಲಿ ಬರೆಯುವುದರ ಅನುಕೂಲತೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟರು.

ಇದರನಂತರ ಅಧ್ಯಕ್ಷರ ಆಯ್ಕೆಯು ಬಳ್ಳಾರಿಯ ಶ್ರೀ ಕೆ. ಗುರುರಾಜರಾಯರಿಂದ ಸೂಚಿಸಲ್ಪಟ್ಟು, ಕರ್ನಾಟಕದ ವಿವಿಧ ಜಿಲ್ಲೆಗಳವರಿಂದ ಪುಷ್ಟೀಕೃತವಾಯಿತು. ಅಧ್ಯಕ್ಷರಾದ ಶ್ರೀ ದಿವಾಕರರು ತಮ್ಮ ಭಾಷಣದ ಅಶ್ಲಿಲ್ಲಿನ ಮುಖ್ಯಾಂಶಗಳನ್ನು ಓದಿ ತಿಳಿಸಿದರು. ವಿಷಯ ನಿಯಾಮಕ ಸಮಿತಿಗೆ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸದಸ್ಯರು ಆರಿಸಲ್ಪಟ್ಟರು. ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮೈಸೂರಿನ ಮಹಾರಾಜರ ಮತ್ತು ಯುವರಾಜರ ಆಶ್ರಯದಲ್ಲಿ ಪರಿಷತ್ತು ಹೇಗೆ ಅಭಿವೃದ್ಧಿ ಹೊಂದುತ್ತಿರುವುದೆಂಬುದನ್ನೂ, ಭಾಷೆಯ ಪುನರುಜ್ಜೀವನ ಸಾಂಸ್ಕೃತಿಕ, ಐಕಮತ್ಯಕ್ಕೆ ನಾವು ಮಾಡಬೇಕಾದ ಕೆಲಸಗಳನ್ನೂ ಸಂಕ್ಷಿಪ್ತವಾಗಿ ವಿವರಿಸಿದರು.

ಸ್ವಾಗತಕಾರಿ ಸಭೆಗೆ ಜಿಲ್ಲಾ ಕಲೆಕ್ಟರ್ ಜಡ್ಜ್ ಮತ್ತು ಇತರ ಹಿರಿಯ ಅಧಿಕಾರಿಗಳು ದಯಮಾಡಿಸಿದ್ದರು ಸಂಡೂರು ರಾಜರಿಗೆ ಸಾಯಂಕಾಲ ಗಾಂಧಿನಗರದಲ್ಲಿ ಶ್ರೀ ಡಿ. ಎಸ್. ಹನುಮಂತರಾಯರು ತಮ್ಮ ಭವನದಲ್ಲಿ ಉಪಹಾರ ಕೂಟವನ್ನೇರ್ಪಡಿಸಿದ್ದರು. ಅಲ್ಲಿಂದ ಸಾಹಿತ್ಯ ಪರಿಷತ್ತಿನ ಮುಖ್ಯದ್ವಾರದಲ್ಲಿ ಬಂದಿದ್ದರು.

ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಗೆ ಸನ್ಮಾನ
'ರಾಜಸೇವಾಸಕ್ತ' ಬಿರುದಿನಾಗಿ

ಸಾಯಂಕಾಲ [೯-೧-೩೯] ಶ್ರೀ ಚನ್ನಬಸವೇಶ್ವರ ನಾಟಕ ಶಾಲೆಯಲ್ಲಿ ಪೂಜ್ಯ ಶ್ರೀ ವೆಂಗಲ್ ರಾಮರಾಯರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ, ಶ್ರೀಯುತ ಬಿ. ಎಂ. ಶ್ರೀಕಂಠಯ್ಯನವರಿಗೆ ರಜತಕರಂಡವೂ ಬಿನ್ನವತ್ತಳೆಯೂ ಅರ್ಪಿಸಲ್ಪಟ್ಟಿತು. ಶ್ರೀಯವರು ತಮ್ಮ ಅಲ್ಪಸೇವೆಗೆ ಲಭಿಸಿದ ಸೌಭಾಗ್ಯದ ವಿಷಯ ಹೇಳಿ, ಮಹಾರಾಜರಿಗೂ ಯುವರಾಜರಿಗೂ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

೩೦ನೇ ತಾ|| ಶುಕ್ರವಾರ.

ಕನ್ನಡಕವಿ ಸಮ್ಮೇಳನ—

ಶ್ರೀ ರಾಜರತ್ನಂ ರವರ ಅಧ್ಯಕ್ಷತೆಯಲ್ಲಿ ಇದು ಯಶಸ್ವಿಯಾಗಿ ನೆರವೇರಿತು. ವಿದ್ವಾನ್ ಕರಿಬಸವಶಾಸ್ತ್ರಿಗಳು [ತಮ್ಮ ಸ್ವಾಗತಾಧ್ಯಕ್ಷರ ಭಾಷಣದಲ್ಲಿ] ವಿಜಯನಗರವು ಕನ್ನಡ ಸಾಮ್ರಾಜ್ಯವೆಂಬುದನ್ನು ಪ್ರತಿಪಾದಿಸಿದರು. ರಾಜರತ್ನಂರವರು ತಾವು ೧೧ ವರ್ಷಗಳಲ್ಲಿ ಕನ್ನಡಭಾಷೆಯಲ್ಲಿ ಇಷ್ಟು ಯೋಗ್ಯತೆ ಸಂಪಾದನೆ ಮಾಡಿರುವ ವಿಷಯ ಹೇಳಿ ಸ್ಥಾನಿಕ ಜನರಿಗೆ ಪ್ರೋತ್ಸಾಹ ಕೊಡಲು ಕೋರಿದರು.

ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಗುರುರಾಜರಾಯರು ಶ್ರೀಸೇರಾಯರು ಬರೆದ " **ಹುಬ್ಬಿನ ಜಾತ್ರೆ** " ಎಂಬ ಪದ್ಯಗಳನ್ನು ರಾಗಯುಕ್ತವಾಗಿ ಅಂದು ತೋರಿಸಿದರು.

ಶ್ರೀ ಕೃಷ್ಣದೇವರಾಯನ ರಾಜ್ಯದಲ್ಲಿ ಕನ್ನಡ ಕವಯಿತ್ರಿಯ ಬಗ್ಗೆ ಶ್ರೀಮತಿ ಸುಶೀಲಾ ರಾಮರಾಯರು ಬರೆದ ಭಾಗವನ್ನು ಓದಿದರು

ವಿದ್ವಾನ್ ತಿರುಮಲೇಶ, ರಾಜಗೋಪಾಲಾಚಾರಿ, ರಾಮಶಾಸ್ತ್ರಿ ಚಂಚಯ್ಯ ಚೆನ್ನಬಸವನಗೌಡ ಆನಂದ ಕವಿ ವೀರನಗೌಡ, ಚಾಂದ್ರವಳ್ಳಿಯಾವ ಪೊಡ್ಡನಗೌಡರೋಕ ಕಾರ್ಯದರ್ಶಿ ಮಹನೀಯರ ಪದ್ಯ ಪಠನವು ಸಭಿಕರನ್ನು ಆನಂದಗೊಳಿಸಿತು.

ಸ್ತ್ರೀಯರ ಸಮ್ಮೇಳನ—

ಬೆಂಗಳೂರಿನ ಪಂಡಿತ ಸುಂದರಮ್ಮನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಶ್ರೀಮತಿ ಕೆ ಪಿ. ಚಿನ್ನಪ್ಪನವರು ಎಲ್ಲಾ ಸ್ತ್ರೀಯರನ್ನು ಸ್ವಾಗತಿಸಿದರು. ತಾ|| ಸಾವಿತ್ರೀಬಾಯಿ ಬೆಂಗಳೂರಿನ ಶ್ರೀಮತಿ ಚನ್ನಮ್ಮ, ಶ್ರೀಮತಿಯರಾದ ಸುಶೀಲಬಾಯಿ, ವನಮಾಲಾ ರುಕ್ಮಿಣಿಬಾಯಿಯವರು ಸಾಹಿತ್ಯದ ಮೇಲೂ ಸ್ತ್ರೀಯರ ಅಭಿವೃದ್ಧಿಯ ಮೇಲೂ ಮಾತಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಮಾಯಣದ ಮಹತ್ವವನ್ನು ತಿಳಿಸಿ ಸೀತೆಯ ಉದಾಹರಣೆಯೆನ್ನು ಅನುಕರಿಸಲು ಬೇಡಿದರು.

ಸ್ತ್ರೀಯರಿಗಾಗಿ ಪರಿಷತ್ತಿನ ಅಂಗದ ಪ್ರತ್ಯೇಕ ಶಾಖೆ ಇರಬೇಕೆಂದೂ, ಕನ್ನಡ ಮಹಿಳೆಯರಿಗಾಗಿ ಒಂದು ಪ್ರತ್ಯೇಕ ಟ್ರೈನಿಂಗ್ ಶಾಲೆ ಇರಬೇಕೆಂದೂ, ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಿರಬೇಕೆಂದೂ ತೀರ್ಮಾನಿಸಲ್ಪಟ್ಟಿತು.

ಈದಿನ ರಾತ್ರೆ ಕನ್ನಡ ರಂಗಭೂಮಿ ಪ್ರೇಮಿಗಳ ಸಂಘದವರು "ಜ್ವಾಲಾಮುಖಿ" ಎಂಬ ನಾಟಕವನ್ನು ಪ್ರದರ್ಶಿಸಿದರು.

೩೧ನೇ ತಾ|| ಶನಿವಾರ.

ಕರ್ನಾಟಕ ಏಕೀಕರಣ ಸಭೆ (ಪ್ರಾತಃಕಾಲ)

ಸ್ವಾಗತಾಧ್ಯಕ್ಷರಾದ ಶ್ರೀ ಆರ್. ವೆಂಕಟಶಿಷ್ಟಯ್ಯನವರು ಕರ್ನಾಟಕ ಏಕೀಕರಣದ ಮಹತ್ವವನ್ನು ಹೇಳಿ, ರಾಯರ ಸೀಮೆಯ ಉದ್ದೇಶಗಳನ್ನು ಖಂಡಿಸಿ ಕೇಲ್ವರ್ ಅವಾರ್ಡ್ ಪುನರ್ವಿಮರ್ಶೆ ಮತ್ತು

ಆಲೂರು, ರಾಯದುರ್ಗ, ಆದವಾನಿ ತಾಲೂಕುಗಳನ್ನು, ಅನಂತಪುರದ ಕೆಲಭಾಗಗಳನ್ನು ಕರ್ನಾಟಕಕ್ಕೆ ಸೇರಿಸುವ ಅವಶ್ಯಕತೆಯ ಬಗ್ಗೆ ಎಚ್ಚರಿಸಿದರು.

ಶ್ರೀ ಅಂಗಡಿಯವರು [ಅಧ್ಯಕ್ಷರು] ಕರ್ನಾಟಕ ಏಕೀಕರಣವಾದರೆ ಕನ್ನಡಿಗರಿಗಿರುವ ಸರ್ವತೋಮುಖವಾದ ಅಭಿವೃದ್ಧಿಯು ಸಾಧಿಸುವುದೆಂಬುದನ್ನು ಸುಂದರ ಭಾಷಣದಲ್ಲಿ ಹೇಳಿದರು. ಕರ್ನಾಟಕ ಪ್ರಾಂತವು ಆರ್ಥಿಕರೀತ್ಯಾ ಸ್ವಾವಲಂಬಿಯಾಗುವುದೆಂದು ಹೇಳಿ ಲಕ್ಷಿಯವರ ಕ್ಷುದ್ರ ವಿಚಾರಗಳನ್ನು ಖಂಡಿಸಿದರು. ನಾಡಿನ ಸೇವೆ ಮಾಡಲು ಸ್ವಯಂಸೇವಕ ದಳವು ಅತ್ಯಗತ್ಯವೆಂದರು.

ಕರ್ನಾಟಕ ಪ್ರಾಂತ ನಿರ್ಮಾಣದ ಶ್ರಮವು ಸಾಸುಮೂಡಿದ್ದಕ್ಕಾಗಿ ಮುದವೀಡು ಕೃಷ್ಣರಾಯರು ಮುಂಬೈ, ಮದ್ರಾಸು ಸರ್ಕಾರಗಳನ್ನು ಅಭಿನಂದಿಸಿದರು. ಶ್ರೀ ದಿವಾಕರರು ತುಂಗಭದ್ರಾಯೋಜನೆಗೂ, ಪ್ರಾಂತೀಕರಣಕ್ಕೂ ಪುರಸ್ಕಾರ ಕೊಡುವ ಒಂದು ನಿರ್ಣಯವನ್ನು ಮುಂದಿಟ್ಟು ಚಿಕ್ಕ ಭಾಷಣ ಮಾಡಿದರು. ಶ್ರೀ ದಾತಾರರು ಏಕೀಕರಣ ಸಂಘದ ಪರವಾಗಿ ಮೂತಾಡುತ್ತ ತುಂಗಭದ್ರಾ ಪ್ರಾಜೆಕ್ಟಿನ ತೀರ್ಪಿನ ಕಾರ್ಯಕ್ಕೆ ತಾವು ಸಹಾಯ ಮಾಡುವುದಾಗಿಯೂ, ಏಕೀಕರಣವು ಇದಕ್ಕೆ ಅಡ್ಡ ಬರುವುದಿಲ್ಲವೆಂದೂ ಹೇಳಿದರು.

ಶ್ರೀ ಹೊಳಗುಂದಿ ಬಸವನಗೌಡರು, ತಂಗಿ ಮಲ್ಲೇಶಪ್ಪನವರು ಬೆಂಬಲ ನೀಡಿದರು, ಹೆ. ವೆಂಕಟೇಶ್ವರರಾಯರು ತುಂಗಭದ್ರಾ ಯೋಜನೆಯು ಶೀಘ್ರದಲ್ಲಿ ಕಾರ್ಯರೂಪಕ್ಕೆ ಬರಬೇಕಾದುದನ್ನೂ ಅದಕ್ಕೆ ಹೆಚ್ಚಿನ ಬೆಂಬಲ ಕೊಡುವುದರ ಆವಶ್ಯಕತೆಯನ್ನೂ ತಿಳಿಸಿದರು ಶ್ರೀ ದಿವಾಕರರ ನಿರ್ಣಯವು ಸಾಸಾಯಿತು.

ಜಿನೇ ಮಧ್ಯಾಹ್ನ

ಕರ್ನಾಟಕ ಸಾಹಿತ್ಯಕಲಾಪರಿಷತ್—

ಶ್ರೀ ಕೆ ಎಸ್. ಕಾರಂತರು ಅಧ್ಯಕ್ಷರು ಪ್ರೊ. ಜಹಗೀರ್ದಾರರು ಚಿಕ್ಕ ಭಾಷಣದಿಂದ ಪ್ರಸೇಶೋತ್ಸವವನ್ನು ನೆರವೇರಿಸಿದರು. ಇವರ ಪೂರ್ಣ ಸ್ವಾಗತಸಮಿತಿ ಅಧ್ಯಕ್ಷ ನಟ್ಟಿಂರವರು ಎಲ್ಲರನ್ನು ಸ್ವಾಗತಿಸಿದರು. ಶ್ರೀ ಕಾರಂತರು ನಾಟ್ಯಕಲಾಭಿವೃದ್ಧಿ ಯಮೇಲೆ ದೀರ್ಘ ಭಾಷಣವನ್ನು ಕೊಟ್ಟರು. ಪರಿಷತ್ತು ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಪ್ರತಿವರ್ಷವೂ ನಡೆಸುವುದೇಕೆಂಬುದನ್ನು ನಿರ್ಧರಿಸಲ್ಪಟ್ಟಿತು ಶ್ರೀ ವಾಮನರಾವ್ ಮೂಸ್ಕರ ತಿಪ್ಪಯ್ಯ ಪೆಂಕೋಬಾವ್ ಮತ್ತು ಎಸ್. ಗೋವಿಂದಾಚಾರಿಯವರ ನಿಧನಕ್ಕೆ ದುಃಖಸೂಚನೆಯೊಯಿತು. ಅ. ನ. ಕೃಷ್ಣರಾವ, ಶ್ರೀಕಂಠಯ್ಯ, ವೀ. ಕೀ. ಯವರು, ಕೆ ಶ್ರೀನಿವಾಸರಾಯರು ಕೆ. ಸಂಪದ್ಗಿರಿರಾಯರು ನಾಟಕದ ವಿವಿಧಾಂಗಗಳ ಮೇಲೆ ಮಾತಾಡಿದರು.

ಜಿನೇ ಮಧ್ಯಾಹ್ನತ್ತರ ಸಾಹಿತ್ಯ ಪರಿಷತ್ತಿನ ಉತ್ತರ ನಿರ್ಣಯಗಳು ಪಾಸಾದ ಮೇಲೆ ಶ್ರೀ ಮೂಳವಾಡಿಯವರು ರಾಘವಾಂಕಕವಿಯಮೇಲೂ, ಮುಳಿಯ ತಿಪ್ಪಯ್ಯನವರು ಯಕ್ಷಗಾನದ ಮೇಲೂ, ವೆಂಕಟ್ರಾಮಯ್ಯನವರು [ಸಾ. ಪ. ಕಾರ್ಯದರ್ಶಿ] ಗಿರಿಜಾಕಲ್ಯಾಣದ ಮೇಲೂ, ಶಿವಮೂರ್ತಿಶಾಸ್ತ್ರಿಗಳು ಸಾಹಿತ್ಯ ಸಾಮ್ರಾಜ್ಯದ ಸಾಹಿತಿಗಳು ಮೇಲೂ, ಚನ್ನಕೇಶವಯ್ಯಂಗಾರರು 'ಪಂಪ' ನ ಮೇಲೂ ಭಾಷಣಕೊಟ್ಟರು.

ಶ್ರೀ ಅಂಗಡಿಯವರು ಪರಿಷತ್ತನ್ನು ಬೆಳಗಾವಿಗೆ ಆಮಂತ್ರಿಸಿದರು. ಶ್ರೀ ಗಂಗಾಧರಯ್ಯನವರು ಪರಿಷತ್ತಿಗೆ ಸಹಾಯ ನೀಡಿದ ಸರ್ವರನ್ನೂ ವಂದಿಸಿದ ಮೇಲೆ ಸಭೆಯು ಮುಗಿಯಿತು.

ಬಳ್ಳಾರಿಯಲ್ಲಿ

ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ

ಆಯುರ್ವೇದ ಸಮ್ಮೇಳನ ಪ್ರಾರಂಭದ ಪೂರ್ವ ಶ್ರೀ ಧನ್ವಂತರಿ ಉತ್ಸವವು 24ನೇ ತಾ॥ ಸಾಯಂಕಾಲ ನೆರವೇರಿತು. 25ನೇ ಪ್ರಾ. ಮೈಸೂರು ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಈಡಿಗ ಹಾಸ್ಪಲ್ ಆವರಣದಲ್ಲಿ ಹಾಕಿದ ಸುಂದರ ಮಂಟಪದಲ್ಲಿ ಪ್ರಾರಂಭವಾಯಿತು. ವೈದ್ಯಶ್ರೇಷ್ಠ ತಿನಿಧಿಗಳನೇಕರು ಕರ್ನಾಟಕದ ಎಲ್ಲಾ ಭಾಗಗಳಿಂದಲೂ ದಯಮಾಡಿಸಿದ್ದರು. ಸ್ತ್ರೀ ವೈದ್ಯ ಪ್ರತಿನಿಧಿಗಳು ಕೂಡ ಸಭೆಗೆ ಬಂದದ್ದು ಒಂದು ವಿಶೇಷ.

ಸ್ವಾಗತ ಸಮಿತೀ ಅಧ್ಯಕ್ಷರಾದ ಡಾ॥ ನಾಗನಗೌಡರು ಆಯುರ್ವೇದದ ಮಹತ್ವವನ್ನು ಹೇಳಿ ಈ ವಿಜ್ಞಾನದಲ್ಲಿ ಸಂಶೋಧನೆಯೊಗಬೇಕೆಂದು ಅಭಿಪ್ರಾಯಪಟ್ಟು ಬಳ್ಳಾರಿಯ ಪರವಾಗಿ ಎಲ್ಲರನ್ನೂ ಸುಸ್ವಾಗತಿಸಿದರು. ಡಾ॥ ಸರೋವರರು ಸಭೆಯು ಯಶಸ್ವಿಗಾಗಿ ಬಂದ ಸಂದೇಶಗಳನ್ನು ಓದಿದರು.

ಅಧ್ಯಕ್ಷರ ಭಾಷಣದ ಸಾರಾಂಶ.

ಸಾರ್ವಜನಿಕರೂ, ವಿವಿಧ ಸರ್ಕಾರಗಳೂ ಆಯುರ್ವೇದಕ್ಕೆ ಸಾಕಾದಷ್ಟು ಪ್ರೋತ್ಸಾಹವನ್ನು ಕೊಟ್ಟಿಲ್ಲವಾದ ಕಾರಣ ಈ ಪರಿಸ್ಥಿತಿಯಿದೆ. ಸಾಕಾದಷ್ಟು ಶಿಕ್ಷಣ ಹೊಂದಿರುವ ಆಯುರ್ವೇದ ವೈದ್ಯರು ತಮ್ಮ ವೃತ್ತಿಯನ್ನು ಹೂಡಲವಕಾಶ ವಿರಬಾರದು ಆಯುರ್ವೇದದ ಪ್ರೋತ್ಸಾಹನಕ್ಕೆ ಕಾಯ್ದೆಯು ಅವಶ್ಯಕ. ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಶಿಕ್ಷಣ ಕೊಡುವಂತಹ ಆಯುರ್ವೇದ ಶಾಲೆಗಳು ಸ್ಥಾಪಿಸಲ್ಪಡಬೇಕು. ಮದ್ರಾಸ್ ಪ್ರಾಂತ್ಯದ ರಿಜಿಸ್ಟರ್ ವೈದ್ಯರನ್ನು ಎಷ್ಟು ಬಿ ತರಗತಿಗಳೆಂದು ವಿಭಾಗಿಸಿರುವುದನ್ನು ತಪ್ಪಿಸಬೇಕು. ಮದ್ರಾಸ್ ಪ್ರಾಂತ್ಯದಲ್ಲಿ ಕರ್ನಾಟಕಸ್ಥರ ಅನುಕೂಲಕ್ಕಾಗಿ ಒಂದು ಆಯುರ್ವೇದ ಕಾಲೇಜ್ ತೆಗೆಯಬೇಕು.

ವಿಷಯ ನಿಯಾಮಕ ಸಮಿತಿಯ ರಚನೆಯಾಯಿತು. ಮಧ್ಯಾನ್ಹಾತ್ತರ, ಸವಣೂರ ಕೃಷ್ಣಾಚಾರ್ಯರ ಸಂಗೀತವೂ ಅಮಿದಾಲ ವೆಂಕಟಸ್ವಾಮಿಯವರ ಜಲತರಂಗವೂ ಆಯಿತು. 5ರಿಂದ 7 ಘಂಟೆಯ ವರಗಾಗಿ ಆಯುರ್ವೇದ ಪ್ರದರ್ಶನದಲ್ಲಿ ಭಾಷಣವು ಶ್ರೀಗುರು ಭಾಸ್ಕರಾಚಾರ್ಯ ರಾಮಚಂದ್ರಸ್ವಾಮಿಯವರಿಂದ ನೆರವೇರಿತು. ಡಾ॥ ಸವಣೂರರವರು ಪ್ರಾರಂಭೋತ್ಸವನ್ನು ನೆರವೇರಿಸುತ್ತಾ ಪ್ರದರ್ಶನಗಳ ಮಹತ್ವವನ್ನೂ ಗಿಡ ಮೂಲಿಕೆಗಳ ಪ್ರಭಾವವನ್ನೂ, ಹೊಸ ಹೊಸದಾಗಿ ಹಬ್ಬುತ್ತಿರುವ ರೋಗಗಳಿಗೆ ಕಂಡು ಹಿಡಿಯಬೇಕಾದ ಔಷಧ ವಿಧಾನಗಳನ್ನೂ ಹೇಳಿದರು. 26ನೇ ತಾ॥ ಆದ್ಯ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ರಾಘವೇಂದ್ರಾಚಾರ್ಯ ಪಿ.ಯಸ್. ನಾರಾಯಣ. ಸೈಯದ್ ಬುಡನ್ ಪಾಷಾ ಶ್ರೀನಿವಾಸಾಚಾರ್, ರಾಮನಾಥಶಾಸ್ತ್ರಿಯವರು ಮಾತಾಡಿದರು. ಸ್ತ್ರೀಯರ ಸಭೆಯಲ್ಲಿ ಡಾ॥ ಸಾವಿತ್ರೀಬಾಯಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸುಶೀಲಾಬಾಯಿಯವರು

ಆಯುರ್ವೇದದ ಹುಟ್ಟಿನ ಮೇಲೆ ಪೇಪರ್ ಓದಿದರು. ಶ್ರೀಮತಿಯವರಾದ ವಿಶಾಲಾಕ್ಷಮ್ಮ, ಶಾಮಲಾಮ್ಮ (ಮೈಸೂರು) ಡಾ॥ ಈರಾಬಾಯಿ ಅದವಾನಿ ಇವರು ಆಯುರ್ವೇದ ಮಹತ್ವದ ಮೇಲೆ ಭಾಷಣ ಕೊಟ್ಟು ಸ್ತ್ರೀಯರಿಂದ ಆಗುವ ಸಹಾಯವನ್ನು ವಿವರಿಸಿದರು.

ನವಜೀವನ, ಮಲ್ಲಸಜ್ಜನ ವ್ಯಾಯಾಮಶಾಲೆಗಳ ಪ್ರದರ್ಶನಾನಂತರ ಸಮ್ಮೇಳನವು ಯಶಸ್ವಿಗೆ ಸಹಾಯ ಮಾಡಿದ ಸರ್ವರನ್ನೂ, ಡಾ॥ ನವಲಿಯವರು ಅಭಿನಂದಿಸಿದರು. ಈ ಸಮ್ಮೇಳನವು ಇಷ್ಟು ಯಶಸ್ವಿಯಾಗಿ ನಡೆಯಲು ಡಾ॥ ಸರೋವರ್, ಡಾ॥ ನವಲಿ, ಹಕೀಂ ರೂಪನಗುಡಿ ಸೈಯದ್ ಬುರ್ಹಾನ್ ಸಾಹೇಬರು ಮತ್ತೆರೆ ನಿರಂತರ ದುಡಿದರು.

ಸಾಹಿತ್ಯ ಸಮ್ಮೇಳನದ ಗೊತ್ತುವಳಿಗಳ ಸಾರಾಂಶ

(1) ಮೈಸೂರು ಶ್ರೀಮನ್ಮಹಾರಾಜರಿಗೆ ಭಕ್ತಿ ವಿಶ್ವಾಸಗಳನ್ನು ಸಮರ್ಪಿಸಿ ಸಾಹಿತ್ಯ ಪರಿಷತ್ತನ್ನು ಅಭಿಮಾನದಿಂದಲೂ ಔದಾರ್ಯದಿಂದಲೂ ಪರಿಪೋಷಿಸಲು ಬೇಡಿಕೆ.

[2] ಮೈಸೂರಿನ ಶ್ರೀ ಮದ್ಯಕ್ಷರಾಜರು, ಪರಿಷತ್ತಿನ ಆಧ್ಯಕ್ಷರಾಗಿ ಕನ್ನಡ ಕನ್ನಡಿಗರ ಏಳಿಗೆಗೆ ಕೃಷಿ ಮಾಡುವ ಆಸಕ್ತಿಕ್ಕೆ ಕೃತಜ್ಞತೆಯನ್ನು ಸೂಚಿಸುತ್ತಾ ಇದೀತಿಯ ಔದಾರ್ಯದಿಂದ ಆಶ್ರಯದಾತರಾಗಲು ಬೇಡಿಕೆ.

[3] ಸಂಡೂರು ಮಹಾರಾಜರು ಪರಿಷತ್ತಿನಾರಂಭೋತ್ಸವ ನೆರವೇರಿಸಿದುದಕ್ಕೆ ಕೃತಜ್ಞತಾಪೂರ್ವಕವಾದ ವಂದನೆ. ಸಂಸ್ಥಾನದಲ್ಲಿ ಕನ್ನಡದ ಪುರೋಭಿವೃದ್ಧಿಗೆ ಸಹಾಯ ಮಾಡಲು ಕೋರಿಕೆ.

[4] ಬೆಂಗಳೂರಿನ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಮತ್ತು ಶ್ರೀ ಟಿ. ಆಸ್ಥಾನಯ್ಯರು (ವಕೀಲರು) ರಾಯಚೂರು ಸುಸ್ಪಸಿದ್ಧ ಕನ್ನಡಿಗರಾದ ಶ್ರೀ ಕಿಕಸ್‌ರಾಯರು ಕರ್ನಾಟಕ ಕವಿರತ್ನ, ಹೊ. ಚಿದಂಬರಯ್ಯನವರು, ತಿರಹಟ್ಟಿ ನಾಟಕ ಮಾಲಿಕರಾದ ಶ್ರೀ ಹೆಚ್. ವೆಂಕೋಬಾಯರು, ಮೈಸೂರು ಮಹಾರಾಣಿ ಹೈಸ್ಕೂಲಿನ ಮುಖ್ಯೋಪಾಧ್ಯಾಯನಿಯರಾದ ಶ್ರೀಮತಿ ನಾಗಮ್ಮ **ಇವರು ಕಾಲಾಧೀನರಾಗಿರುವುದಕ್ಕೆ ಈ ಸಮ್ಮೇಳನವು ಅಪಾರ ದುಃಖವನ್ನು ವ್ಯಕ್ತಪಡಿಸುತ್ತದೆ.**

[5] "ಕೈನರೀಸ್" ಎಂಬ ಶಬ್ದಕ್ಕೆ ಬದಲಾಗಿ "ಕನ್ನಡ" ಎಂಬ ಶಬ್ದದ ಉಪಯೋಗವನ್ನಾಡಲು ಬೊಂಬಾಯಿ, ಮದ್ರಾಸ್, ಹೈದ್ರಾಬಾದ ಸರಕಾರಗಳಿಗೆ ಕೋರಿಕೆ.

[6] ಬೊಂಬಾಯಿ, ಹೈದರಾಬಾದ್ ಆಕಾಶವಾಣಿ ಕೇಂದ್ರಗಳಲ್ಲಿ ಕನ್ನಡದ ಸಂಗೀತ ವಾದನ ಭಾಷಣಗಳಿಗೆ ಸ್ಥಾನಕೊಡಬೇಕು

[7] ಕಾಲೇಜ್ ತರಗತಿಗಳಲ್ಲಿ ಕನ್ನಡೇತರಭಾಗಗಳನ್ನು ಕನ್ನಡದಲ್ಲಿ ಕಲಿಸಲು ಮೈಸೂರು ಎಸ್ಟ ವಿದ್ಯಾನಿಲಯದವರು ಏರ್ಪಡಿಸಬೇಕು.

[8] ಮೈಸೂರಿನ ಹೊಸ S. S. L. C. ವ್ಯವಸ್ಥೆಯಲ್ಲಿ - ಐಚ್ಛಿಕ ಭಾಷಾವರ್ಗದಲ್ಲಿ ಕನ್ನಡಕ್ಕೆ ಸ್ಥಾನಕೊಡಿರಿ.

[9] ಕನ್ನಡ ನಾಡು-ಸಂಸ್ಕೃತಿಗಳ ಅಭಿವೃದ್ಧಿಗೆ ಕಾರಣವಾದ ಕರ್ನಾಟಕ ಸ್ವಾತಂತ್ರೀಕರಣದ ತೀರ್ಮಾನಕ್ಕೆ ಮದ್ರಾಸ್ - ಬೊಂಬಾಯಿಗಳ ಸರಕಾರಕ್ಕೆ ಋಣಿ ಇದ್ದು ಅದನ್ನು ಕಾರ್ಯರೂಪದಲ್ಲಿ ತರಲು ಬೇಡಿಕೆ.

[10] ಬೊಂಬಾಯಿ ವಿಶ್ವ ವಿದ್ಯಾಲಯದವರು - ಸಂಸ್ಕೃತ ಪ್ರಶ್ನೆಗಳಿಗೆ ಉತ್ತರ ಬರೆಯಬೇಕಾದರೆ - ಕನ್ನಡ ಲಿಪಿಯಲ್ಲಿ ಬರೆಯಲು ಅಪ್ಪಣೆಕೊಡಬೇಕು.

[11] ಉತ್ತರ ಕರ್ನಾಟಕ ಸಂಸ್ಥಾನಗಳನ್ನು ಡೆಕ್ಕ್ ಭಾಗದಿಂದ ತಪ್ಪಿಸಿ ಕರ್ನಾಟಕ ಭಾಗದಲ್ಲಿ ಹಾಕಬೇಕು.

[12] ಹೈದರಾಬಾದಿನಲ್ಲಿ 16 ಲಕ್ಷ ಕನ್ನಡಿಗರ ಸಂಖ್ಯೆಇದೆ ನುಡಿ-ಸಂಸ್ಕೃತಿಗಳ ಅಭಿವೃದ್ಧಿಗೆ ಸೌಕರ್ಯವಿಲ್ಲವಾದಕಾರಣ ವೃತ್ತ ಪತ್ರಿಕೆ ಹೊರಡಿಸಲು ಅಪ್ಪಣೆ ಕೊಡಲು ಬೇಡಿಕೆ

[13] ನಿಜಾಮ ಸರಕಾರದವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಕನ್ನಡದಲ್ಲಿ ಕನ್ನಡ ಭಾಗಗಳಲ್ಲಿ ಕೊಡಲೇರ್ಪಡಿಸಬೇಕು. ಇತಿಹಾಸ ಸಂಶೋಧನೆಗೆ ಅವಕಾಶ ಕೊಡಬೇಕು.

[14] ಬೊಂಬಾಯಿ ಸರಕಾರದವರು ಬಿ. ಎ. ಹಾನರ್ಸ್‌ದಲ್ಲಿ ಕನ್ನಡಕ್ಕೆ ಸ್ಥಾನಕೊಡಬೇಕು. ಸಂಸ್ಕೃತಿಯ ಶೋಧನೆಗೆ ಕರ್ನಾಟಕ ಕಾಲೇಜಿಗೆ ಕೊಡುವ ದೇಣಿಗೆಯನ್ನು ಹೆಚ್ಚಿಸಬೇಕು

[15] ಕರ್ನಾಟಕದಲ್ಲಿ ನಿಯೋಜಿಸಲ್ಪಡುವ ಅಧಿಕಾರಿಗಳು ಕನ್ನಡದವರಿರಬೇಕು ಕನ್ನಡ ಪ್ರದೇಶದ ಕನ್ನಡೇತರ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಅಗತ್ಯವಾಗಿ ಕಲಿಸುವಭಾಗವನ್ನಾಗಿಡಬೇಕು.

[16] ಕನ್ನಡ ಶಿಕ್ಷಣಕ್ಕೇರ್ಪಡಿಸಿದ ಮುಧಹೋಳ್ ಸಂಸ್ಥಾನಾಧೀಶ್ವರರಿಗೆ ವಂದನೆ.

[17] ಬಳ್ಳಾರಿ ಪ್ರಾಂತ್ಯದಲ್ಲಿ ಕನ್ನಡ ಶಿಕ್ಷಕೆಯರಕಾಲೇಜ್ ತೆಗೆಯಬೇಕು. ಸಾಕಷ್ಟು ಸಂಖ್ಯೆ ದೊರೆಯುವವರೆಗೆ ಬೊಂಬಾಯಿಯವರನ್ನು ಮಾನ್ಯಮಾಡಲು ಏರ್ಪಡಿಸಬೇಕು.

(18) ಹೊಸಪೇಟೆಯ ಟ್ರೇನಿಂಗ್ ಶಾಲೆಯನ್ನು ಪ್ರಾಯಂ ಸೆಕಂಡರೀ ಗ್ರೇಡ್ ಟ್ರೇನಿಂಗ್ ಸ್ಕೂಲ್ ಆಗಿ ಮಾಡಬೇಕು.

(19) ಅಖಿಲ ಕರ್ನಾಟಕ ಶಿಕ್ಷಣ ಪರಿಷತ್ತಿನ ಸೂಚನೆಗಳಾದ ಪಠ್ಯಪುಸ್ತಕ ಶಿಕ್ಷಣ ಪ್ರಣಾಲಯ ವಗೈರೆಗಳಿಗೆ ಪರಿಷತ್ತು ಸಹಾಯ ಸಹಕಾರಗಳನ್ನೀಯುತ್ತದೆ.

(20) ಆದವಾನಿ, ಅಲೂರು, ರಾಯದುರ್ಗ ತಾಲೂಕುಗಳ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಕನ್ನಡ ದಸ್ತಾವೇಜುಗಳ ರಿಜಿಸ್ಟರಿಗೆ ಅವಕಾಶಕೊಡಿಸಲು ಮದ್ರಾಸ್ ಸರ್ಕಾರಕ್ಕೆ ಬೇಡಿಕೆ.

(21) ಮೇಲ್ಕಾಣಿಸಿದ ತಾಲೂಕುಗಳ ಹೈಸ್ಕೂಲ್ ಉಚ್ಚವರ್ಗಗಳಲ್ಲಿ ಕನ್ನಡ ಶಿಕ್ಷಣವಿಲ್ಲ. ಇದಕ್ಕೇರ್ಪಡಿಸಲು ಜಿಲ್ಲಾ ಬೋರ್ಡ್ ಪುರಸಭಾಗಳಲ್ಲಿ ಬೇಡಿಕೆ.

(22) ನಿಜಾಂ ಸರ್ಕಾರದ ವಿದ್ಯಾರ್ಥಿಗಳ ಸೌಕರ್ಯಕ್ಕೆ ವಿಶ್ವವಿದ್ಯಾಲಯದವರು ತಿಹೋಮಣಿ ವಿದ್ವತ್ ಪರೀಕ್ಷೆಗಳನ್ನು ಸ್ಥಾಪಿಸಬೇಕು.

(23) ಬಳ್ಳಾರಿ ಮುನಿಸಿಪಾಲಿಟಿಯವರು ತಮ್ಮ ಎಲ್ಲೆಯಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನೇ ತೆಗೆಯಬೇಕು. ಕನ್ನಡಿಗರ ಸಂಖ್ಯೆ ಹೆಚ್ಚು ಇದೆ.

[24] ಬಳ್ಳಾರಿ ಜಿಲ್ಲೆಯ ಕನ್ನಡ ಭಾಗಗಳಲ್ಲಾದರೂ, ಸರ್ಕಾರದ ರಿಕಾರ್ಡು ಉತ್ತರಗಳನ್ನು ಕನ್ನಡದಲ್ಲಿಡಬೇಕು.

[25] ಮದ್ರಾಸ್ ವಿಶ್ವವಿದ್ಯಾಲಯದವರು ಅನಂತಪುರದ ಕಾಲೇಜಿನ B. A. M. A. ತರಗತಿಗಳಲ್ಲಿ ಕನ್ನಡ ವಿಚ್ಛೇದಕ ಶಿಕ್ಷಣಕ್ಕೇರ್ಪಡಿಸಬೇಕು.

ಬಳ್ಳಾರಿ ಜಿಲ್ಲಾ

ಹರಿಜನ - ಕಾನ್ಫರೆನ್ಸ್

ಬಳ್ಳಾರಿ ಜಿಲ್ಲಾ ಹರಿಜನ ಮಹಾಸಭೆಯು ಆಲೂರಿನ ಹರಿಜನ ಹಾಸ್ಟೆಲ್ ಬಳಿ 13ನೇ ತಾ॥ ನಡೆಯುವುದು. ಮದ್ರಾಸ್ ಸರ್ಕಾರದ ಔದ್ಯೋಗಿಕ ಮಂತ್ರಿಗಳಾದ ಶ್ರೀ ವಿ. ವಿ. ಗಿರಿಯವರು ಪ್ರಾರಂಭೋತ್ಸವವನ್ನು ನೆರವೇರಿಸುವರು. ಹರಿಜನರ ಹಿತಕ್ಕೆ ಸಂಬಂಧಿಸಿದ ನಿರ್ಣಯಗಳಾಗುವುವು. ಎಲ್ಲರೂ ದಯವಾಡಿಸಲು ಕೋರಿಕೆ.

ಡಿ. ಗೋವಿಂದದಾಸ್, ಎಂ. ಎಲ್. ಎ.

ಸೂಚನೆ— ಆಲೂರು ಬಳ್ಳಾರಿಗೆ 27 ಮೈಲು ದೂರವಿದೆ ಬಸ್ಸುಗಳ ಸೌಕರ್ಯವಿದೆ.

ತುಂಗಭದ್ರಾ ಯೋಜನೆ ಮುನ್ನಡೆ

ತುಂಗಭದ್ರಾ ಯೋಜನೆಯ ವಿಷಯದಲ್ಲಿ ಮದ್ರಾಸು ಹೈದರಾಬಾದ್ ಸರ್ಕಾರದ ವಸ್ಪಂದಪಾಗಿರುವುದು ಸರಿಯಷ್ಟೆ ಎರಡು ಸರ್ಕಾರಗಳ ಚೀಫ್ ಎಂಜಿನಿಯರ್‌ರವರು, ನದ್ರಾಸವಲ್ಲಿ ಕಲೆತು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕೆಲ ವಿವರಗಳನ್ನು ಚರ್ಚಿಸಲಿರುವರು.

ಮಹಾತ್ಮ ಗಾಂಧಿಯವರು

ಬಾರ್ಡೋಲಿಗೆ ಪ್ರಯಾಣ ಬೆಳಿಸಿದರು.

ಪ್ರತಿನರ್ಷವೂ ಗುಜರಾತ್ ಭಾಗದಲ್ಲಿ ಒಂದು ಭಾಗದಲ್ಲಿ ಒಂದು ತಿಂಗಳವರೆಗೂ ಇರಬೇಕೆಂಬ ಸಂಕಲ್ಪದ ಪ್ರಕಾರ, ಮಹಾತ್ಮ ಗಾಂಧಿಯವರು ಸೂರತ್ ಜಿಲ್ಲೆಯ ಬಾರ್ಡೋಲಿ ಆಶ್ರಮಕ್ಕೆ ಕೆಲ ದಿನಗಳ ಕೆಳಗೆ ತೆರಳಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಮಾವೇಶವು ಈ ತಿಂಗಳು ಅಲ್ಲಿಯೇ ಕೂಡುವುದು.

ಸ್ವದೇಶ

—ನಾಗಪುರದ ಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರಾಗಿದ್ದ ದಿವಂಗತ ಆಭಯಂಕರ್‌ರವರ ಶಿಲಾಪ್ರತಿಮೆಯು ಅನಾವರಣವು ಶ್ರೀ ಎಂ. ಯಸ್. ಆಣೆಯವರಿಂದ ನರವೇರಿಸಲ್ಪಟ್ಟಿತು.

—ಬಿಹಾರದ ರಾಂಚಿ ಜಿಲ್ಲೆಯಲ್ಲಿ ಈ ವರ್ಷದಿಂದ ಪಾನ ನಿರೋಧ ಕಾರ್ಯಕ್ರಮವು ಜಾರಿಯಲ್ಲಿ ಬರುವುದು.

—ಸಾಬರಮತಿ ಸಂಸ್ಥಾನದಲ್ಲಿ ಸುಧಾರಣೆಗಳನ್ನು ಆಚರಣೆಗೆ ತರುವ ಉದ್ದೇಶ್ಯದಿಂದ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿರುವರು.

೨೦೪೯ ಮಂದಿ ಸೆರೆಮನೆಯಲ್ಲಿದ್ದಾರೆ.

ಜೈರೂಸೇಲಂ 3

ಈಗ 2049 ಮಂದಿ ಅರಬರನ್ನು ಸೆರೆಮನೆಗಳಲ್ಲಿಡಲಾಗಿದೆಯೆಂದು ಅಧಿಕಾರಯುಕ್ತವಾಗಿ ತಿಳಿಸಲಾಗಿದೆ.

PRABHAKR SNOW.

ಪ್ರಭಾಕರ ಸ್ನೋ



ಮುಖದ ಕಾಂತಿ, ವರ್ಚಸ್ಸು ಗಳಿಗೂ, ಚರ್ಮದ ಮೃದುತ್ವಕ್ಕೂ ಉಪಯೋಗಿಸಿರಿ. ಸ್ವದೇಶಿ ಸ್ನೋ ಗಳಿಗೆ ಪ್ರೋತ್ಸಾಹ ಕೊಡಿರಿ.

K V. & Sons, BELLARY.

ಎಸ್. ವಿ. ಶೆಟ್ಟಿ ಅಂಡ ಬ್ರದರ್ಸು, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನುಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.
ವೆಸ್ಟ್‌ಎಂಡ್ ವಸ್ತುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಮಿನಾಕ್ಷಿ ಭವನ ಕಾಫೀಕ್ಲಬ್

(ರಿಜಿಸ್ಟರ್ಡ್)

ಶಾಖೆಗಳು ಕಾಫಿ ಕ್ಲಬ್ ಬೆಂಗಳೂರು ರೋಡ್

ಊಟ ಮತ್ತು ವಸತಿಗೃಹ ಬಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಪಾದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ ಒಂದು ಸಲ ಬಂದು ಪರೀಕ್ಷಿಸಿರಿ.

ಅಂಗ್ಲೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿಂ ಚಟ್ಟು ಸುಟ್ಟು ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾದವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣ ತಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಆಗತ್ಯವಾಗಿ ಸಂಗ್ರಹಿಸತಕ್ಕದ್ದು.
ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.
ಜೀವನ ಸುಧಾ ಫಾರ್ಮಸಿ.
ಸೋಲ್ ಏಜಂಟರು:—ಸರೋವರ ಬ್ರದರ್ಸು, ಬಳ್ಳಾರಿ.

ಮಲಬಾರ್ ಜಿಲ್ಲಾ ದೇವಾಲಯ ಪ್ರವೇಶಕಾಯ್ದೆ

ಮದರಾಸ್ ಅಸೆಂಬ್ಲಿಯಲ್ಲಿ ಡಿ. ಗೋವಿಂದದಾಸರ ಭಾಷಣ

ಒಳ್ಳಾರಿ ಜಿಲ್ಲಾ ಹರಿಜನ ಪ್ರತಿನಿಧಿಗಳಾದ ಶ್ರೀ ಡಿ ಗೋವಿಂದದಾಸರು (ಕಾಂಗ್ರೆಸ್) ಮದ್ರಾಸ್ ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು ಮಲಬಾರ್ ದೇವಾಲಯ ಪ್ರವೇಶ ಕಾಯ್ದೆಯನ್ನಿಟ್ಟಾಗ ಈ ಪ್ರಕಾರ ಭಾಷಣ ಮಾಡಿದರು.

'ಹರಿಜನರನ್ನು ಕ್ರೈಸ್ತರು ಮುಸಲ್ಮಾನರು ತಮ್ಮ ಮತಗಳಲ್ಲಿ ಸೇರಿಕೊಳ್ಳಲು ಪ್ರಯತ್ನಗಳನ್ನು ಮಾಡಿದ ಈ ಸಂದರ್ಭ-ವಲ್ಲಿ ಇಂಥಾ ಕಾಯ್ದೆಗಳನ್ನು ಮಾತಾಡುವುದು ಹಿಂದೂಮತ ಪ್ರತಿಷ್ಠೆಗೆ ಲಾಭಕರವಾದದ್ದು. ಮಹಾತ್ಮ ಗಾಂಧಿಯವರ ಉದಯದಿಂದ ಹರಿಜನೋದ್ಧಾರಕ್ಕೂ, ಮೇಲಾಗಿ ಹಿಂದೂ ಧರ್ಮಕ್ಕೂ ಘನಸೇವೆಯಾಗುತ್ತಲಿದೆ. ಪ್ರಾಂತವೆಲ್ಲವೂ ಇದಕ್ಕೆ ಅನುಕೂಲವಿಲ್ಲದ ಕಾರಣ ಸ್ವಲ್ಪ ಸ್ವಲ್ಪ ಭಾಗಗಳಲ್ಲಿ ಕಾಯ್ದೆಯ ಪ್ರವೇಶವು ಅಗತ್ಯವಾಗಿದೆ. ದೇವಾಲಯ ಪ್ರವೇಶದಿಂದ ಹರಿಜನರಿಗೆ ಅನ್ಯೋನ್ಯತೆಯು ಕಳಂಕತ್ಯಜಿಸೋಗಿ ಉಚ್ಚವರ್ಗದ ಹಿಂದೂಗಳ ಮನೆಗಳಲ್ಲಿ ಕೆಲಸಮಾಡಲಿಕ್ಕೂ, ಪ್ರವೇಶಕ್ಕೂ, ಸ್ವತಂತ್ರ ವ್ಯವಹಾರಕ್ಕೂ ಅವಕಾಶ ದೊರೆಯುತ್ತದೆ. ಬಂದೇಸಲ ದೇಶದಲ್ಲೆಲ್ಲಾ ಪ್ರವೇಶ ವಿಷಯವು ಜಯಪ್ರದವಾಗಿ ಅಂದು ಜಿಲ್ಲೆಯಲ್ಲಿ ಅಚರಣೆಗೆ ತರುವುದು ಜಯಶಾಲಿಯಾಗುವುದರಲ್ಲಿ ಸಂದೇಹ ವಿಲ್ಲ. ಈ ಬಿಲ್ಲಿಗೆ ನಾನು ನನ್ನ ಸಂಪೂರ್ಣ ಸಮ್ಮತಿಯನ್ನು ಕೊಡುತ್ತೇನೆ.

ಸ್ವದೇಶ.

ರಾಜಕೋಟೆ (ಗುಜರಾತ್) ಸತ್ಯಾಗ್ರಹವು ಕೊನೆಗಂಡಿತು. ಸರ್ದಾರ್ ವಲ್ಲಭಭಾಯಿ ಪಟೇಲರವರು ಥಾಕೂರ್ ಸಾಹೇಬರೊಡನೆ ಚರ್ಚಿಸಿದ ಮೇಲೆ ಕಾಂಗ್ರೆಸ್ ಮತ್ತು ರಾಜಪಕ್ಷದಲ್ಲಿ ರಾಜಿ ಕುದಿರಿತು. ಜವಾಬ್ದಾರಿ ಸರ್ಕಾರದ ವಿಷಯ ಚರ್ಚಿಸಲು ಒಂದು ಪ್ರಜಾಮಂಡಲವು ಏರ್ಪಡಿಸಲಾಗಿದೆ. ಒಂದು ತಿಂಗಳು ಅವಧಿ ಇದೆ.

ಡಿಸೆಂಬರ್ ಕೊನೆಯವಾರದಲ್ಲಿ ವರ್ಕಿಂಗ್ ಸಭೆಯು ಪಾಟ್ನಾದಲ್ಲಿ ಕೂಡಿ, ತಮ್ಮ ಮತಸಂಘಟನೆಯ ನಿರ್ಣಯಗಳನ್ನು ಮಾಡಿತು. ಕಾಂಗ್ರೆಸ್ ಸಂಸ್ಥೆಯ, ಸರ್ಕಾರಗಳ ಕಡುತರವಾದ ಟೀಕೆಯಾಯಿತು.

ಮದ್ರಾಸ್ ಹಿಂದೀ ಪ್ರಚಾರಣ ಪತ್ರ ವಿತರಣೋತ್ಸವವು ಡಾ॥ ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಮತಿ ಸರೋಜಿನೀ ದೇವಿಯವರು ವಿದ್ಯಾರ್ಥಿಗಳಿಗೆ ಪದಪ್ರದೇಶ ಮಾಡುತ್ತ ಹಿಂದೀಯು ಮಹತ್ವವನ್ನರುಹಿದರು.

ಮಹಾತ್ಮಗಾಂಧಿಯವರ ಸಲಹೆ ಪ್ರಕಾರ ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸಿನವರು ದಿವಾನರ ಮೇಲಣ ಆಸಾಪನೆಗಳನ್ನು ಹಿಂದೆಗೆದುಕೊಂಡರು. ಆದರೆ ಸರ್ಕಾರದವರು ಸ್ಟೇಟ್ ಕಾಂಗ್ರೆಸ್ ಸದಸ್ಯರ ಮೇಲೆ ಚಾರ್ಜಿ ತೆಗೆದುಕೊಳ್ಳುವುದನ್ನು ಬಿಟ್ಟಿಲ್ಲ

ಬಡವರಿಗೂ, ಭಾಗ್ಯವಂತರಿಗೂ = ವಿಮೆಮಾಡಲು
ಹೆಚ್ಚಿನ ಸೌಕರ್ಯಗಳುಂಟು.
ಪದ್ಧತಿಗಳಲ್ಲಿ ನಾವೀನ್ಯತೆ ಸುಲಭದರದ ಕಂತುಗಳವಿಶೇಷತೆ,
ಯುಳ್ಳ
ಅತ್ಯುತ್ತಮ ಸಂಸ್ಥೆ
ದಿ
ಏಶಿಯನ್ ಅಶೂರೆನ್ಸ್ ಕಂಪನಿ,
ಲಿಮಿಟೆಡ್.
[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]
ಹೆಡ್ ಆಫೀಸ್— ಬಾಲಾರ್ಡ್ ಎಸ್ಟೇಟ್ ಪೋರ್ಟ್, ಮುಂಬೈ.
ಅಪಾಯವು ಬರಿಗಿವ ಕಾಲದಲ್ಲಿ, ಸಂಪಾದಿಸಬಾಗದ ಪರಿಸ್ಥಿತಿಯಲ್ಲಿ, ವೃದ್ಧಾಪ್ಯದಲ್ಲಿ ನಿನಗೆ ಸಹಾಯ ಬೇಕಲ್ಲವೇ? ಹಾಗಾದರೆ, ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ 'ಪಾಲಿಸಿ' ಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆ ಪಡಬಹುದುದಾದ, ಬಲವತ್ತರವಾದ ಆರ್ಥಿಕ ಭದ್ರತೆಯುಳ್ಳ ವಿಮಾಸಂಸ್ಥೆ. ವಿವರಗಳಿಗೆ ಬರೆಯಿರಿ.
ಬ್ರಾಹ್ಮಣರ ಬೀದಿ — ಎ. ಪಾರ್ಥಸಾರಥಿ, ಬಿ. ಎ.
ಬಳ್ಳಾರಿ. — ಚೀಫ್-ಅಗರ್ನೈಜರ್.

ರಾಷ್ಟ್ರ ಭಾಷೆಯಾದ
ಹಿಂದಿಯನ್ನು ಕಲಿಯಿರಿ.
ಹಿಂದೂಸ್ಥಾನದಲ್ಲಿ ೩೫ ಕೋಟಿ ಜನಗಳಿಗೆ ತಿಳಿಯುವ ಭಾಷೆ

ಹಿಂದೀ ಬಾಲಬೋಧಿನಿ (ಕನ್ನಡ-ತೆಲುಗು)	0 2 6
,, ಪಹಲೀ ಪುಸ್ತಕ (ಉರ್ದು ಸಹಿತ)	0 5 0
,, ಮಾಸರಿ ಪುಸ್ತಕ (,,)	0 6 0
,, ಮೋತಿಯೋಂಕಾಹಾರ	0 6 0
,, ಅನುವಾದ 1 (ಕನ್ನಡ-ತೆಲುಗು	0 4 0
,, ಬಾಕ್ಸ್‌ಚೀಪ್	0 3 0
Hindi-English self Instructor	1 0 0
Guide to Hindusthani	1 0 0
ಹಿಂದೀ-ತೆಲುಗು-ಯೂ-ಕನ್ನಡ-ಸ್ವಬೋಧಿನಿ	0 12 0

ಅಡ್ವಾನ್ಸಿಲ್ಲವೆ ಪುಸ್ತಕಗಳನ್ನು ವಿ. ಪಿ. ಮೇಲೆ ಕಳುಹಿಸಲಾಗುವುದಿಲ್ಲ. ಪರೀಕ್ಷೆಗಳಿಗೆ ಕೂಡಬೇಕೆನ್ನುವವರು ಸಮಕ್ಷಮ ಬಂದು ಎಲ್ಲಾ ಸೂಚಿತಿ ತಿಳಿಯಬೇಕು. ಬೇಡಿದರೆ ಮನೆಗೆ ಬಂದು ಹಿಂದೀ ಶಿಕ್ಷಣ ಕೊಡಲಿಕ್ಕೆ ಏರ್ಪಡಿಗಲಾಗುವುದು.
ಕಾರ್ಯದರ್ಶಿ
ಜಿಲ್ಲಾ ಹಿಂದೀ ಪ್ರೇಮೀ ಮಂಡಲ
ಬ್ರಾಹ್ಮಣ ಬೀದಿ. ಬಳ್ಳಾರಿ

ವಿಠ್ಠಲ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಟಿ. ಬಿ. ಕೇಶವರಾಯರಿಂದ ಪ್ರಕಟಿಸಲ್ಪಟ್ಟಿತು

REG NO. M. 3937

'ವಂದೇಮಾತರಂ'

THE Congress Bulletin
ಕಾಂಗ್ರೆಸ್ ಬುಲೆಟಿನ್

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.

ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ.— ಟಿ. ಪಿ. ಕೇಶವರಾವ್.

ವಾರ್ಷಿಕ ಚಂದಾ

ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ ! ಜಾಗ್ರತ !! ಪ್ರಾವರಾನ್ನಿ ಬೋಧತ.

ಸಂಚಿಕೆ ೧ ಬಳ್ಳಾರಿ, ಜನವರಿ 14 ನೇ ಶನಿವಾರ 1939. ಪ್ರತಿ ೩½

ಬಳ್ಳಾರಿ

ತ್ರಿಪುರೀ ಕಾಂಗ್ರೆಸ್ ಪ್ರತಿನಿಧಿಗಳು

ಶ್ರೀ ಡಿ. ಹೆಚ್. ವೆಂಕೋಬರಾವ್— ಬಳ್ಳಾರಿನಗರ
,, ಬೆಲ್ಲದ ಚೆನ್ನಪ್ಪ— ಹೊಸಪೇಟೆ.
,, ಗುರುಬಸವರಾಜ— ಹಡಗಲಿ
,, ವಿ. ಯಂ. ಗಿರಿ— ಆರಪನಹಳ್ಳಿ
,, ಹೆಚ್. ಬಸವನಗೌಡ— { ಕೊಟ್ಟೂರು, ಹೊಸಪೇಟೆ ಬಳ್ಳಾರಿ (ಹಳ್ಳಿಭಾಗ)

ಈ ಪ್ರಕಾರ ಆರಿಸಿ ಬಂದಿರುವರು.

ಅಖಿಲ ಭಾರತ ಚರಖಾ ಸಂಘ

ಕರ್ನಾಟಕ ಶಾಖೆ ಬ್ರಾಹ್ಮಣ ಬೀದಿ ಬಳ್ಳಾರಿ.

ನಮ್ಮಲ್ಲಿ ಸ್ವದೇಶಿತ ಮತ್ತು ಶುದ್ಧವಾದ ಕೈ ನೂಲಿನ ಖಾದಿ ಲಂಬರೆ ಧೋತ್ರ, ಶರ್ಟಿಂಗ್, ಕೋಟಿಂಗ್, ವಿಧ ವಿಧವಾದ ಶಾಲುಗಳು, ಸಿಲ್ಕ್, ಕುಪ್ಪಸದ ಬಟ್ಟೆ, ಇನ್ನೂ ಅನೇಕ ವಿಧವಾದ ವಸ್ತ್ರಗಳು ಒಡವರಿಗೂ ಶ್ರೀಮಂತರಿಗೂ ಅನುಕೂಲಿಸುವ ದರದಲ್ಲಿ ಮಾರಿಯುತ್ತಿದೆ. ಕಾಂಗ್ರೆಸ್ ಜನರೂ, ಖದೀಯ ಹಿತೈಷಿಗಳೂ, **ಸ್ವದೇಶಿತ ಖಾದಿಯನ್ನೇ** ಪರಿಶೋಧಿಸಿ, ದೇಶದ ಆರ್ಥಿಕ ಹಿತವನ್ನು ಬಯಸಲು ಬೇಡಿಕೆ.

ಆರ್. ಹನುಮಂತರಾವ್,
ಮ್ಯಾನೇಜರ್.

ರಾಷ್ಟ್ರ ಭಾಷೆಯಾದ

ಹಿಂದಿಯನ್ನು ಕಲಿಯಿರಿ.

ಹಿಂದೂಸ್ಥಾನದಲ್ಲಿ ೩೮ ಕೋಟಿ ಜನಗಳಿಗೆ ತಿಳಿಯುವ ಭಾಷೆ

ಹಿಂದೀ ಬಾಲಬೋಧಿನಿ (ಕನ್ನಡ ತೆಲುಗು)	0 2 6
,, ಪಹಲೀ ಪುಸ್ತಕ (ಅರ್ಥ ಸಹಿತ)	0 5 0
,, ಮಾಸರಿ ಪುಸ್ತಕ (,,)	0 6 0
,, ನೋತಿಯೋಂಕಾಹಾರ	0 6 0
,, ಅನುವಾದ 1 (ಕನ್ನಡ-ತೆಲುಗು	0 4 0
,, ಬಾತ್‌ಚೀತ್	0 3 0
Hindi English self Instructor	1 0 0
Guide to Hindusthani	1 0 0
ಹಿಂದೀ-ತೆಲುಗು ಯೂ-ಕನ್ನಡ-ಸ್ವಬೋಧಿನಿ	0 12 0

ಅಡ್ವಾನ್ಸಿಲ್ಲದೆ ಪುಸ್ತಕಗಳನ್ನು ವಿ. ಪಿ. ಮೇಲೆ ಕಳುಹಿಸಲಾಗುವುದಿಲ್ಲ. ಪರೀಕ್ಷೆಗಳಿಗೆ ಕೂಡಬೇಕೆನ್ನುವವರು ಸಮಕ್ಷಮ ಒಂದು ಎಲ್ಲಾ ಮಾಹಿತಿ ತಿಳಿಯಬೇಕು. ಬೇಡಿದರೆ ಮನೆಗೆ ಬಂದು ಹಿಂದೀ ಶಿಕ್ಷಣ ಕೊಡಲಿಕ್ಕೆ ಏರ್ಪಡಿಸಲಾಗುವುದು.

ಕಾರ್ಯದರ್ಶಿ
ಜಿಲ್ಲಾ ಹಿಂದೀ ಪ್ರೇಮೀ ಮಂಡಲ
ಬ್ರಾಹ್ಮಣ ಬೀದಿ. ಬಳ್ಳಾರಿ

CONGRESS BULLETIN
ಕಾಂಗ್ರೆಸ್ ಬುಲೆಟಿನ್
ಸಂಪಾದಕರು-ಟ್ರಿಪ್ಲಿಕೇನ್ ವಿಜಯರಾಘವಾಚಾರಿಯರ್

ಶನಿವಾರ, ಜನವರಿ 14, 1939

ಬಳ್ಳಾರಿ ಜಿಲ್ಲಾ
ಹರಿಜನ - ಮಹಾಸಭೆ.

ಆಲೂರಿನಲ್ಲಿ 13ನೇ ತಾ॥ ಜಿಲ್ಲಾ ಹರಿಜನ ಸಭೆಯೂ, ಅದೇ ಕಾಲಕ್ಕೆ ಹರಿಜನ ವಿದ್ಯಾರ್ಥಿ ನಿಲಯದ ಪಂಚಮ ವಾರ್ಷಿಕೋತ್ಸವವೂ ನಡೆದವು. ಹರಿಜನ-ಮುಖಂಡರಲ್ಲೊಬ್ಬರಾದ ಶ್ರೀ ವೇ. ಕೂರ್ಮಯ್ಯನವರು ಮಹಾಸಭೆಗೂ, ಮದ್ರಾಸ್ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಾಪಿನೀಡುವನರು ವಾರ್ಷಿಕೋತ್ಸವಕ್ಕೂ ಅಧ್ಯಕ್ಷರಾಗಿ ಹರಿಜನೋದ್ಧಾರದ ಬಗ್ಗೆ ಶ್ರೇಷ್ಠ ಸಲಹೆಗಳನ್ನಿತ್ತರು. ಔದ್ಯೋಗಿಕ ಶಾಖೆಯ ಮಂತ್ರಿಗಳಾದ ಶ್ರೀ ವಿ. ವಿ. ಗಿರಿಯವರು ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಕಾಂಗ್ರೆಸ್ ಸರ್ಕಾರವು ಹರಿಜನರ ಅಭಿವೃದ್ಧಿಗೆ ಮಾಡುತ್ತಿರುವ ಕೆಲಸಗಳನ್ನು ವಿವರಿಸಿದರು. ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಬಿ. ಯಸ್. ಮೂರ್ತಿಯವರೂ, ಭಾರತ ಸೇವಕ ಸಂಘದ ಸೂರ್ಯನಾರಾಯಣರೂ, ತಮ್ಮ ಸಲಹೆಗಳನ್ನು ಕೊಟ್ಟು ಸದುಪದೇಶ ಮಾಡಿದರು

ಹರಿಜನ ವಿದ್ಯಾರ್ಥಿ ನಿಲಯವು 1933ನೆಯ ವರ್ಷದ ಜೂನ್ ತಿಂಗಳಲ್ಲಿ ಸ್ಥಾಪಿತವಾಯಿತು. ಈಗ ಶಾಸನ ಸಭೆಯ ಪ್ರತಿನಿಧಿಗಳಾದ ಶ್ರೀ ಡಿ. ಗೋವಿಂದ ದಾಸರೇ ಆದಕ್ಕೆ ಜೀವವಾಸ ಮಾಡಿದರು. ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಟೀ ಕೂರು ಕೃಷ್ಣಮೂರ್ತಿಯವರು ಹಾಸ್ಟೆಲ್‌ನ ಮುಖ್ಯಸ್ತಂಭಗಳಲ್ಲೊಬ್ಬರಾಗಿ ಪರಿಣಮಿಸಿದರು. ಹರಿಜನ ಸೇವಕಸಂಘವು ಕಾಲಕಾಲಕ್ಕೆ ಸಹಾಯನನ್ನೊದಗಿಸಿತು. ಆದರೂ ಕ್ಷಾಮಬಾಧೆಯಿಂದ ಸಾರ್ವಜನಿಕರ ಸಹಾಯವು ಪೂರ್ಣರೂಪದಲ್ಲಿ ಬರುವುದು ಕಷ್ಟವಾಯಿತು. ಹಿಂದಿನ ಸರ್ಕಾರವು ಸಹಾಯ ಹಸ್ತನನ್ನು ನೀಡಲಿಲ್ಲ. ಕಾಂಗ್ರೆಸ್ ಸರ್ಕಾರವು ಬಂದಮೇಲೆ ಆಶೆಯ ಕಿರಣಗಳು ಮೂಡಿದವು. ಶ್ರೀ ಡಿ. ಗೋವಿಂದದಾಸರು, ಕಾಂಗ್ರೆಸ್ಸಿನ ಪರವಾಗಿ ಜಿಲ್ಲೆಯ ಹರಿಜನ ಪ್ರತಿನಿಧಿಗಳಾದರು. ಈ ವರ್ಷ ಮಾತ್ರ 450 ಗ್ರಾಂಟು ದೊರಕಿದೆ. ವಿದ್ಯಾರ್ಥಿಗಳ ಸಂಖ್ಯೆಯು 10 ಇದ್ದದ್ದು, ಈಗ 28ಕ್ಕೆ ಏರಿದೆ. ಪ್ರತಿ ತಿಂಗಳೂ, 100ಗಳ ಮೇಲೆ ಖರ್ಚಿದೆ. ಅಲ್ಲದೆ ಹರಿಜನ ಸೇವಕ ಸಂಘವು ಸರ್ಕಾರದವರು ಗ್ರಾಂಟು ಕೊಡುತ್ತಿರುವರೆಂಬ ಕಾರಣ ತಾನುಕೊಡುತ್ತಿದ್ದ ಖರ್ಚಿನ ಮೂರರ್ಲೊಂದು ಭಾಗದ ಗ್ರಾಂಟನ್ನು ನಿಲ್ಲಿಸಿಬಿಟ್ಟಿದೆ. ಈ ಕಾರಣ ಕಾಂಗ್ರೆಸ್ ಸರ್ಕಾರವು ತಾನು ಕೊಡುತ್ತಿರುವ ಗ್ರಾಂಟನ್ನು ಹೆಚ್ಚಿಸದೆ ಗತ್ಯಂತರವಿರಲ್ಲ. ಶ್ರೀ ವಿ. ವಿ. ಗಿರಿಯನರೂ, ಬಾಪಿನೀಡುಯವರೂ, ಹಾಸ್ಟಲ್‌ಗೆ ಪೂರ್ಣ ರೀತಿಯಿಂದ ಸಹಾಯ ಮಾಡುವರೆಂದೇ ನಂಬಿರುತ್ತೇವೆ. ಅಲ್ಲದೆ ಕಂಪ್ಲಿ, ಕೊಟ್ಟೂರು ಹಾಸ್ಟಲ್‌ಗಳಲ್ಲಿರುವ ಹರಿಜನ ವಿದ್ಯಾರ್ಥಿಗಳಿಗೂ ಕೂಡ **ಬೋರ್ಡಿಂಗ್ ಗ್ರಾಂಟು** ಕೊಡಬೇಕೆಂದು ಸೂಚಿಸುತ್ತೇವೆ.

ಜಿಲ್ಲಾ ಹರಿಜನ ಕಾನ್ಫರೆನ್ಸ್ ನಲ್ಲಿ ಬಳ್ಳಾರಿ ಜಿಲ್ಲೆಯ ಹರಿಜನರಿಗೆ ಸಂಬಂಧಿಸಿದ ಮುಖ್ಯ ವಿಷಯಗಳು ಚರ್ಚಿಸಲ್ಪಟ್ಟು ನಿರ್ಣಯಗಳಾದವು. ಹೈಸ್ಕೂಲ್‌ಗಳಲ್ಲಿ ಉಚಿತ ವಿದ್ಯಾಭ್ಯಾಸ, ವಿದ್ಯಾರ್ಥಿ ವೇತನಗಳು, ಮನೆಗಳನ್ನು ಕಟ್ಟಿಸಿಕೊಳ್ಳಲು ಉಚಿತವಾದ ನಿವೇಶನಗಳು, ಸಾಲ ತೀರಿಸಲು ಮತ್ತು ಸಾಲಗಾರರ ಬಾಧೆಯನ್ನು ತಪ್ಪಿಸಲು ಉಪಾಯಗಳು ಕುಡಿಯುವ ನೀರಿನ ಭಾವಿಗಳ ವಸತಿ, ವಿದ್ಯಾನಂತರದ ಹರಿಜನರಿಗೆ ಉದ್ಯೋಗಗಳು ಹರಿಜನರ ಜಮೀನುಗಳು ಇತರರಿಂದ ಆಕ್ರಮಿಸಲ್ಪಟ್ಟಿದ್ದನ್ನು ಬಿಡಿಸುವ ವಿಷಯ ವಗೈರೆ ಅನೇಕ ಅಂಶಗಳು ಸಭೆಯ ಗಮನಕ್ಕೆ ಬಂದವು

ಈ ಜನ ಜಾಗೃತಿಯ ಕಾಲದಲ್ಲಿ ಹಳ್ಳಿಗಳೂ ಕೂಡ ಹರಿಜನರ ಹಕ್ಕುಗಳ ಹೋರಾಟವನ್ನು ಮನ್ನಿಸಿವೆ. ಅಸ್ಪೃಶ್ಯತಾ ಭೂತವು ಹಿಡಿತವು ಕಡಮೆಯಾಗುತ್ತಾ ನಡೆದಿದೆ. ಆದರೆ ಸವರ್ಣ ಹಿಂದೂಗಳ ಮನೋಪರಿವರ್ತನೆಯು ಆಗಬೇಕಾದಷ್ಟು ಆಗಿಲ್ಲವೆಂದು ತಿಳಿಸಲು ವಿಷಾದಿಸಬೇಕಾಗಿದೆ. "ಇವರು ನಮ್ಮವರು, ನಮ್ಮ ಧರ್ಮದವರು, ನಮ್ಮ ಅನ್ನಾನ, ಪಶನಕ್ಕೆ ಆಧಾರ ಭೂತರು" ಎಂಬ ಭಾವನೆಯು ನಮ್ಮ ಹಿಂದೂ ಸೋದರರಲ್ಲಿ ಎಂದು ಪೂರ್ಣರೂಪವಾಗಿ ಒಡಮೂಡುವುದೋ ಅಂದೇ ಹರಿಜನರ ಉದ್ಧಾರವಾಗುವುದೆಂದು ಹೇಳಬಹುದು. ಜನತೆಯ ಸಹಾಯ ಸಹಕಾರವಿಲ್ಲದೆ ಯಾವ ಸುಧಾರಿಸಿದ ಸರ್ಕಾರವಾಗಲಿ, ಏನು ಮಾಡಬಲ್ಲುದು? ಉದಾಹರಣಾರ್ಥವಾಗಿ ಸಾರ್ವಜನಿಕ ಭಾವಿ ಕೆರೆ ಮತ್ತು ಶಾಲೆಗಳಲ್ಲಿ "ಹರಿಜನರು ಪ್ರವೇಶಿಸಬಹುದೆಂದು ಸರ್ಕಾರದ ಆಜ್ಞೆಯು ಸುಮಾರು 12 ವರ್ಷಗಳಿಂದಲೂ ಚಾರಿಯಲ್ಲಿದೆ ಎಷ್ಟು ಹಳ್ಳಿಗಳಲ್ಲಿ ಹರಿಜನರ ಪ್ರವೇಶಕ್ಕೆ ಅವಕಾಶವಿದೆ?

ಸರ್ಕಾರದ ಸುಧಾರಣೆಗಳು ಜನರ ಬೆಂಬಲದಿಂದ ಅಚರಣೆಗೆ ಬರಬೇಕು. ಜನರ ಬೆಂಬಲದಿಂದಲೇ ಕಾಯ್ದೆಗಳಾಗಬೇಕು. ಇಷ್ಟು ದಿವಸ ನಮ್ಮವರನ್ನು ಹೀನಾಯದಿಂದ ನೋಡಿ ಕಾರ್ಯದಿಂದ ಕಾಡಿದ ಪಾಪವನ್ನು ನಮ್ಮವರು ಇನ್ನು ಮೇಲಾದರೂ ಪಶ್ಚಾತ್ತಾಪ ಬುದ್ಧಿಯಿಂದ ಕಡಿಮೆ ಮಾಡಿಕೊಳ್ಳಲೆಂದು ಆಶಿಸುತ್ತೇವೆ.

ಬಳ್ಳಾರಿ ಸಮಾಚಾರ

'ಸಂಯುಕ್ತ ರಾಜ್ಯಘಟನೆ ಮತ್ತು ಕಾಂಗ್ರೆಸ್' ಈ ವಿಷಯದಲ್ಲಿ ಶ್ರೀ. ಆರ್. ಆರ್ ನಿವಾಣಿಯವರು ಉಪನ್ಯಾಸಿಸಿ ಕೆಲ ಸಂಸ್ಥಾನಗಳಲ್ಲಿನ ಆಸಾಯಕತ್ವವನ್ನು ಖಂಡಿಸಿದರು. ಸಭೆಯು ಶ್ರೀ. ಕೇಶವರಾಯರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರೇಮಿ ಮಂಡಲದ ಕಛೇರಿಯೊಳಗೆ 8 1-39ನೇ ಸಾಯಂಕಾಲ ಕೂಡಿದ್ದಿತು. ಅಧ್ಯಕ್ಷರು ಕಾಂಗ್ರೆಸ್ ಸರ್ಕಾರಗಳನ್ನು ವೃಥಾ ಟೀಕಿಸಿಬಾರದೆಂದೂ ಸಲಹೆಗಳನ್ನು ಕೊಡುವುದು ಸೂಕ್ತವೆಂದರು, ಸಂಯುಕ್ತ ರಾಜ್ಯಘಟನೆಯಲ್ಲಿ ಕೆಲಬದಲಾವಣೆಗಳಾದರೆ ಕಾಂಗ್ರೆಸ್‌ಅಗನ್ನು ಸ್ವೀಕರಿಸಬಹುದೆಂದೂ ಅಭಿಪ್ರಾಯ ಪಟ್ಟರು.

ಶ್ರೀ ಡಿ. ಹೆಚ್. ವಿ. ರಾಯರು, ತಮ್ಮನ್ನು ಪ್ರತಿನಿಧಿಯಾಗಿ ಆರಿಸಿದ್ದಕ್ಕೆ ಎಲ್ಲರನ್ನೂ ವಂದಿಸಿ, ಯುವಕರು ಆಗಾಗ್ಯೆ ಹೀಗೆ ಕೂಡಿ ಸುಧಾರಿಸಿದ ಅಭಿಪ್ರಾಯಗಳನ್ನು ಪಟ್ಟಿ ಮಾಡಿಕೊಳ್ಳಲು ಸೂಚಿಸಿದರು. ಶ್ರೀ ರಾಜಗೋಪಾಲಶೆಟ್ಟಿಯವರು ಎಲ್ಲರನ್ನೂ ವಂದಿಸಿದರು.

ಪುರಸಭೆ

ಪುರಸಭೆಯು ಜನಾಬ್ ರಾವ್ಸ್ ಸಾಹೇಬರ ಅಧ್ಯಕ್ಷತೆಯಲ್ಲಿ 11ನೇ ತಾ॥ ಸಾಯಂಕಾಲ ಕೂಡಿದ್ದಿತು. ಮಧ್ಯಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವುದ ಬಳ್ಳಾರಿಯಲ್ಲಿ ಕಷ್ಟವೆಂದು ವ್ಯಕ್ತವಾಗಿ ಅಧ್ಯಕ್ಷರು ವಿದ್ಯಾಧಿಕಾರಿಗಳನ್ನು ನೋಡಬೇಕೆಂದಾಯಿತು ಪವರ್ ಹೌಸ್‌ಗೆ ಹೊಸ ಎಂಜಿನ್ನುಗಳನ್ನೇ ಕೊಳ್ಳಲು ನಿಶ್ಚಿತವಾಯಿತು.

ಬಾಡೋಲಿಯಲ್ಲಿ ವರ್ಕಿಂಗ್ ಕಮಿಟೀ ಸಭೆ

ಹದಿನೆಂಟು ವರ್ಷಗಳನಂತರ ಪುನಃ ಬಾಡೋಲೀ ಆಶ್ರಮದಲ್ಲಿ ವರ್ಕಿಂಗ್ ಕಮಿಟೀ ಸಭೆಯು 11ನೇ ತಾ॥ ಮಧ್ಯಾನ್ಹ 1ಕ್ಕೆ ಪ್ರಾರಂಭವಾಯಿತು. ಸುಭಾಸ ಚಂದ್ರಬೋಸರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಭೆಗೆ ಸರ್ದಾರ ವಲ್ಲಭಭಾಯಿ, ಬಾಬೂರಾಜೇಂದ್ರ ಪ್ರಸಾದ, ಮೌಲಾನಾ ಅಬುಲ್‌ಕಲಾಂ ಆಜಾದ, ಪ. ಜವಹರಲಾಲ, ಆಚಾರಕೃಪಲಾನಿ, ಡಾ॥ ಪಟ್ಟಾಭಿ ಮುಂತಾದ ಸದಸ್ಯರು ಹಾಜರಿದ್ದರು. ಮಹಾತ್ಮ ಗಾಂಧಿಯವರೂ ಕೂಡ ದಯಮಾಡಿಸಿದ್ದರು

19 ವರ್ಷಗಳ ಹಿಂದೆ ಇಲ್ಲಿ ಕೂಡಿದ ಸಭೆಯಲ್ಲೇ ಮಹಾತ್ಮ ಗಾಂಧಿಯವರು, ಅಸಹಕಾರ ಚಳವಳಿಯನ್ನು ನಿಲ್ಲಿಸಲು ವರ್ಕಿಂಗ್ ಕಮಿಟಿಗೆ ಸೂಚಿಸಿದರು. ಈಗಲೂ ಆ ಧ್ಯೇಯದೊಂದು ಮಹತ್ವದ ವಿಷಯವು ಚರ್ಚೆಗೆ ಬರಲಿದೆ. ಅದು ಯಾವುದೆಂದರೆ ಹಿಂದೂ ಮುಸಲ್ಮಾನ್ ಜಾತೀ ಸಮಸ್ಯೆ. ಮಹಾತ್ಮರು ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ಕುರಿತು ಒಂದು ಯೋಜನೆಯನ್ನು ಸಿದ್ಧಪಡಿಸಿರುವರು.

ಇನ್ನು 3-4 ತಿಂಗಳಲ್ಲಿ ಘೋರ ಯುದ್ಧ

ಅಮೇರಿಕಾ ದೇಶದ ಎರಡು ಶಾಸನ ಸಭೆಗಳ ಸದಸ್ಯರಿಂದ ಕೂಡಿದ ಸೈನ್ಯ ಸಮಿತಿಯು ಮುಂದೆ ಐರೋಪ್ಯ ಪರಿಸ್ಥಿತಿಯ ವಿಷಯವಾಗಿ ಬ್ರಿಟನ್ನಿನಲ್ಲಿ ರಾಯಭಾವಿಗಳಾಗಿರುವ ಶ್ರೀ ಕೆನ್ನಡಿಯವರು ಹೇಳಿಕೆ ಕೊಡುತ್ತ 'ಬರುವ ವಸಂತ ಋತುವಲ್ಲಿ ವಿಶ್ವದಲ್ಲಿ ಘೋರ ಸಂಗ್ರಾಮವು ಆರಂಭವಾಗಬಹುದು' ಎಂಬುದಾಗಿ ಹೇಳಿಕೆಯನ್ನಿತ್ತಿರುವರೆಂದು ಆ ಸಮಿತಿಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಫ್ರಾನ್ಸು ದೇಶದಲ್ಲಿ ರಾಯಭಾರಿಗಳಾಗಿರುವ ಶ್ರೀ ಬ್ಯುಲಿಟ್ ರವರು ಈ ಅಭಿಪ್ರಾಯವನ್ನು ಸಮರ್ಥಿಸಿರುವರೆಂದು ತಿಳಿದುಬರುವುದು.

ಜರ್ಮನಿಯು ಉಕ್ರೇನ್ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುವುದಾಗಲೀ, ಇಲ್ಲವೇ ಇಟಲಿಯು ಟ್ಯೂನಿಸ್ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುವುದಾಗಲೀ ಘೋರ ಸಂಗ್ರಾಮಕ್ಕೆ ಕಾರಣವಾಗಬಹುದೆಂದು ಶ್ರೀ ಕೆನ್ನಡಿಯವರು ಅಭಿಪ್ರಾಯ ಪಟ್ಟಿರುತ್ತಾರೆ.

ಅರಬ್ಬೀ ನಾಯಕರು

ಕೈರೋ 13

ಲಂಡನ್ ನಗರದಲ್ಲಿ ನಡೆಯಲಿರುವ ಪ್ಯಾಲಿಸ್ತೈನ್ ಸಮ್ಮೇಳನಕ್ಕೆ ಹೋಗಲು ಅನುಕೂಲಿಸುವಂತೆ ಬಿಡುಗಡೆ ಮಾಡಲ್ಪಟ್ಟಿರುವ ಅರಬ್ಬಿ ನಾಯಕರು ನಾಳೆಯ ದಿನ ವಿಮಾನದಲ್ಲಿ ಬೀರುಟ್ ಎಂಬಲ್ಲಿಗೆ ಹೋಗಿ, ಪ್ಯಾಲಿಸ್ತೈನಿನ ಮುಫ್ತಿಯನ್ನು ಭೇಟಿಮಾಡುವರು. ಸಿರಿಯಾ ದೇಶದಲ್ಲಿರುವ ಫ್ರೆಂಚ್ ಅಧಿಕಾರಿಗಳು ಈ ಅರಬ್ಬೀ ನಾಯಕರು ಬರುವುದಕ್ಕೆ ಇದ್ದ ಪ್ರತಿಬಂಧಗಳೆಲ್ಲವನ್ನೂ ತೆಗೆದು ಹಾಕಿದ್ದಾರೆ.



ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಗಣ್ಣಿನ್ನೂ ಬಿಸಿಲಿನ ಝಳದಿಂದ ಕಣ್ಣುಗಳನ್ನೂ ಕಾಪಾಡಿ ತಂಪಾಗಿಡಲು ಅನುಪಾಯುನ ತಂಪು ಕನ್ನಡಕಗಳನ್ನೂ, ಸುಲಭವಂದಲ್ಲ ನಮ್ಮಲ್ಲಿವೆ. ಗ್ಯಾರಂಟಿಯೊಡನೆ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ಘೋರೆಸುತ್ತವೆ. ಬಡವನಿಗೂ, ಶ್ರೀಮಂತನಿಗೂ ಅನುಕೂಲಿಸುವ ಆಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಆನಂದ ಸನ್ಸ್:
ಬೆಂಗಳೂರು ರೋಡ್ ಬಳ್ಳಾರಿ-

ರಾಜಕೋಟ ವಿಜಯವು ಉಳಿದವರಿಗೆ ಆದರ್ಶವಾಗಲಿ

ಲೇ:— ಮಹಾತ್ಮಗಾಂಧಿ (ಹರಿಜನ ೭-೧-೩೯)

ರಾಜಕೋಟ ಸತ್ಯಾಗ್ರಹವು ಒಳ್ಳೆ ಸಂಭ್ರಮದಿಂದ ಪ್ರಾರಂಭವಾಗಿ ಯಶಸ್ಸಿಯಾಗಿ ಕೊನೆಗೊಂಡಿತು ಆದರೆ ಆ ಸತ್ಯಾಗ್ರಹದ ಬಗ್ಗೆ ನಾನಿನ್ನೂ ನನಗೆ ಏನನ್ನೂ ಒರೆದಿಲ್ಲ ಇದರಿಂದ ರಾಜಕೋಟದ ಬಗ್ಗೆ ನನಗೆ ಒಜ್ಜೊಂದು ಉತ್ಸಾಹವಿಲ್ಲೆಂದು ಮಾತ್ರ ಯಾರೂ ತಿಳಿಯಬಾರದು. ರಾಜಕೋಟದೊಡನೆ ನನ್ನ ಚಿರಸಂಬಂಧವಿನ್ನುವರಿಂದ ಹಾಗೆ ಮಾಡುವದು ನನಗೆ ಶಕ್ಯನೇ ಇಲ್ಲ. ನನ್ನ ತಂದೆಯವರು ರಾಜಕೋಟ ದಿವಾಣರಿದ್ದರು ಇಷ್ಟೇ ಅಲ್ಲ ಹಿಂದಿನ ರಾಕೋರ ಸಾಹೇಬರು ನನ್ನನ್ನು ತಂದೆಯಂತೆ ಭಾವಿಸುತ್ತಿದ್ದರು ಸರದಾರ ವಲ್ಲಭಭಾಯಿಯವರು ಈ ಸತ್ಯಾಗ್ರಹದ ಪ್ರಾಣರಾಗಿದ್ದು ದರಿಂದ ನಾನು ನನ್ನವನನ್ನು ತಳೆದಿದ್ದೇನು. ಅವರನ್ನು ಇಲ್ಲವೆ ಅವರ ಕಾರ್ಯವನ್ನು ಪ್ರಶಂಸಿಸುವುದೆಂದರೆ ಆತ್ಮಶ್ಲಾಘನೆ ಮಾಡಿಕೊಂಡಂತಾಗುವ ಸರಿ

ಜನರು ಸಾಕಷ್ಟು ಸಹಾಯ ಸಹಕಾರಗಳನ್ನು ನೀಡಿದರೆ ಅಹಿಂಸಾತ್ಮಕ ಅಸಹಕಾರವು ಯಾವ ಬಗೆಯ ಯಶಸ್ಸನ್ನು ಪ್ರಾಪ್ತ ಮಾಡಿಕೊಡಬಲ್ಲುದೆಂಬುವನ್ನು ಈ ಹೋರಾಟವು ಸಿದ್ಧ ಮಾಡಿ ತೋರಿಸಿತು ರಾಜಕೋಟ ಪ್ರಜೆಗಳಲ್ಲಿ ಇಷ್ಟೊಂದು ಐಕ್ಯ, ಮನೋಧೈರ್ಯ, ಸ್ವಾರ್ಥತ್ಯಾಗ, ಸಿದ್ಧತೆ ಇದ್ದಿತೆಂಬುದು ನಾ ಮಾತ್ರ ನಾನು ತಿಳಿದಿರಲಿಲ್ಲ ತಮ್ಮ ಅರಸರಿಗಿಂತ ತಾವು ಶ್ರೀಷ್ಠರಿರುವರೆಂದು ಪ್ರಜೆಗಳು ಸಿದ್ಧ ಮಾಡಿ ತೋರಿಸಿದರಲ್ಲವೆ ಐಕ್ಯದಿಂದ ಅಹಿಂಸಾತ್ಮಕ ಹೋರಾಟ ನಡೆಸಿದ ಜನತೆಯ ಮುಂದೆ ಇಂಗ್ಲೀಷ್ ದಿವಾಣರ ಶಕ್ತಿಯೂ ಕುಂಠಿತವಾಯಿತು.

ರಾಕೋರ ಸಾಹೇಬರು ಅಧಿಕಾರ ಸೂತ್ರಗಳನ್ನೆಲ್ಲ ತಮ್ಮ ಕೈಯಲ್ಲಿ ತೆಗೆದುಕೊಂಡು ಇಂಗ್ಲೀಷ್ ದಿವಾನರ ಸಲಹೆಯನ್ನು ತಿರಸ್ಕರಿಸಿ ರೆಸಿಡೆಂಟರ ಮನವಿಕೆಯನ್ನು ಅಲ್ಲಗಳೆದು ಕಾರ್ಯ ಮಾಡಿದುದಕ್ಕಾಗಿ ಧನ್ಯವಾದಗಳಿಗೆ ಪಾತ್ರರಿರುವರು.

ರೆಸಿಡೆಂಟರ ಜೊಂಬಲವಿತ್ತೆಂದು ತಿಳಿದು ಸರ್ ಪೆಥ್ರಿಕ್ ರು ರಾಕೋರ ಸಾಹೇಬರ ಸೇವಕರು ತಾನೆಂಬುವನ್ನು ಕೂಡ ಮರೆತರು. ತಾವೇ ಯಜಮಾನರಂತೆ ಅವರು ಕೆಲಸ ನಡೆಸಿದರು. ತಾವು ಸಾಮ್ರಾಜ್ಯ ಸರ್ಕಾರದ ಒನಾಂಗದವರೆಂದು ಭಾವಿಸಿ ತನ್ನನ್ನು ನೀವಿಸಲು ಮಧ್ಯವರ್ತಿ ಸರ್ಕಾರದ ಅಸ್ಪಷ್ಟ ಅನಸ್ಯವೆಂದು ನೆನೆದು ತಮ್ಮ ಮನಸ್ಸಿಗೆ ಸರಿತೋರಿದಂತೆ ಕಾರ್ಯಮಾಡಬಲ್ಲೆನೆಂದು ತಿಳಿದುಕೊಂಡರು. ನನ್ನ ಕಡೆಗೆ ಬಂದ ಕಾಗದಪತ್ರಗಳ ಮೇಲಿಂದ ನಾನು ಈ ರೀತಿ ಹೇಳಬಲ್ಲೆನು. ಅವರು ಜಾಣತನದಿಂದ ತಾವಾಗಿಯೇ ಪೆಸರನು ಮೇಲೆ ಹೋದರೋ ಇಲ್ಲವೆ ಯಾವ ಸ್ಥಿತಿಯುಂಟಾಗಿದೆಯೆಂ, ಎಂಬುದು ಈ ಲೇಖ ಬರೆಯಾಗ ನಮಗೆ ತಿಳಿದಿಲ್ಲ. ಯುರೋಪಿಯನ್ನರನ್ನು ತಮ್ಮ ದಿವಾನರನ್ನಾಗಿ ನೇಮಿಸಿಕೊಳ್ಳುವದು ಜಾಣತನವಾಗುವದೋ ಎಂಬ ಬಗ್ಗೆ ರಾಜರು ಗುಂಪಿರ ರೀತಿಯಿಂದ ವಿಕಾರವಾಡತ್ತಿರುವೆನೆಂದು ನನ್ನಲಿದ್ದ ಕಾಗದಪತ್ರಗಳಿಂದ ಗೊತ್ತಾಗುತ್ತದೆ. ತಮ್ಮ ಕರಾರು ಮುಂತಾದವುಗಳು ಸೌಗ್ಯರೀತಿಯಿಂದ ಪಾಲಿಸಲ್ಪಡುವವೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಮಧ್ಯವರ್ತಿ ಸರ್ಕಾರದವರು ರೆಸಿಡೆಂಟರನ್ನು ನಲಂಬಿಸಬೇಕಾಗುತ್ತದೆ.

ತಾವು ಸನ್ಮಾರ್ಗಾವಲಂಬಿಗಳಾಗಿದ್ದರೆ ಮತ್ತು ಜನತೆಯ ಬೆಂಬಲವು ಅವರಿಗಿದ್ದರೂ ರೆಸಿಡೆಂಟರ ಒಗ್ಗೆ ಅವರು ಯಾವರೀತಿಯಿಂದಲೂ ಭಯಭೀತರಾಗುವ ಕಾರಣವಿಲ್ಲೆಂಬುದನ್ನು ರಾಜಕೋಟದ ಘಟನೆಗಳ ನೆರಿಂದ ಎಲ್ಲ ಸಂಸ್ಥಾನಿಕರಿಗೆ ಮನವರಿಕೆಯಾಗಬಹುದಾಗಿದೆ. ಸಾಮ್ರಾಜ್ಯಶಕ್ತಿಯು ಸಿಮಲಾದಲ್ಲಿರುವದಿಲ್ಲ. ಇಲ್ಲವೆ ಇಂಗ್ಲೆಂಡದಲ್ಲಿ ನೆಲೆಸುವದಿಲ್ಲ. ಆದರೆತಮ್ಮ ಪ್ರಜೆಗಳಲ್ಲಿಯೇ ಆ ಅಧಿಕಾರವಿದೆಂಬುದಾಗಿ ಅವರು ತಿಳಿಯಬೇಕು. ಅಹಿಂಸಾತ್ಮಕ ಬಲವನ್ನ ವಲಬಿಸುವ ಎಚ್ಚೆತ್ತ ಪ್ರಜೆಗಳು ಬೇಕಾದಂತಹ ಶಸ್ತ್ರಾಸ್ತ್ರಸನ್ನದ್ಧ ಸರ್ಕಾರದಿಂದ ಸ್ವತಂತ್ರರಿರುವರು. ರಾಜಕೋಟ ಪ್ರಜೆಗಳು ತೋರ್ಪಡಿಸಿದ ಧೈರ್ಯ, ಸ್ವಾರ್ಥತ್ಯಾಗ ಐಕ್ಯ ಸಂಘಟನೆಗಳನ್ನು ಉಳಿದ ಪ್ರಜೆಗಳೂ ವ್ಯಕ್ತಪಡಿಸಿದರೆ ರಾಜಕೋಟ ಸಂಸ್ಥಾನವು ಮೂರು ತಿಂಗಳಲ್ಲಿ ಕೊಟ್ಟದ್ದನ್ನು ಉಳಿದ ಸಂಸ್ಥಾನ ಸರ್ಕಾರಗಳು ಕೊಡಬಲ್ಲವೆಂದು ನಾನು ಹೇಳುವೆ.

ಬೇಕಾದಂತಹ ಅಡ್ಡಿ ಆಡಚಣೆಗಳು ಬಂದರೂ ಅವುಗಳನ್ನೆದುರಿಸಲು ಶಕ್ತವಾಗುವಂತಹ, ಯಾರಲ್ಲಿಯೂ ಕಂಡುಬಾರದಂತಹ ಅಹಿಂಸಾ ಗುಣವನ್ನು ರಾಜಕೋಟ ಜನರು ತೋರ್ಪಡಿಸಿದರೆಂದು ಮಾತ್ರ ನಾನು ಹೇಳಿಲಾರೆ. ಆದರೆ ಯಾವದೊಂದು ಸಂಸ್ಥೆಯಲ್ಲಿಯು ಎಲ್ಲ ಜನರು ಅವಶ್ಯವಾಗಿ ತೋರಿಸುವ ಸರ್ವಸಾಧಾರಣ ಅಹಿಂಸೆಯನ್ನು ತೋರಿಸಿದರೆಂದು ಮಾತ್ರ ನಾನು ಸ್ಪಷ್ಟವಾಗಿ ಹೇಳಬಲ್ಲೆ.

ರಾಜಕೋಟ ಜನತೆಯು ಈ ವರೆಗೆ ನಡಾಡಿದ ಕಾರ್ಯವು ಪ್ರಶಂಸಾರ್ಹವಾಗಿದ್ದರೂ ನಿಜವಾದ ಸತ್ಯಾಗ್ರಹಿಗಳ ಪರೀಕ್ಷೆಯ ಕಾಲವು ಇನ್ನು ಮುಂದಿದೆ. ವಿಜಯ ಸಂಪಾದಿಸುವಾಗ ಅವರು ತೋರಿಸಿದ ಸದ್ಗುಣಗಳನ್ನು ಮುಂದೆಯೂ ಶಾಶ್ವತವಾಗಿ ಇಟ್ಟುಕೊಳ್ಳದಿದ್ದರೆ ಒಜ್ಜೆ ನೂತದ್ದೆಲ್ಲ ಮೊಮ್ಮಗನ ಉಡುದಾರಕ್ಕೆ ಹೋಯಿತೆಂಬಂತೆ ಎಲ್ಲವೂ ನಿರರ್ಥಕವೆಂದು ಸಿದ್ಧವಾಗಬಹುದು. ಕಾಂಗ್ರೆಸ್ಸಿಗರು ಹಲವು ದಿನಗಳ ಶಿಕ್ಷಣದಿಂದ ಸವಿನಯ ಕಾಯದೆಭಂಗ ಮಾಡಲು ತಮ್ಮ ಯೋಗ್ಯತೆಯನ್ನು ಸಿದ್ಧ ಮಾಡಿ ತೋರಿಸಿರುವರು. ಅದರೆ ನಿಷ್ಕಾಯಕ ಅಹಿಂಸೆಯನ್ನಾಚರಿಸುವಲ್ಲಿಯೂ ತಾವು ಶಕ್ತ ಸಂಪನ್ನರಿರುವರೆಂಬದನ್ನು ಇನ್ನೂ ಸಿದ್ಧ ಮಾಡಿ ತೋರಿಸಿಲ್ಲ. ಸವಿನಯ ಕಾಯದೇ ಭಂಗದಲ್ಲಿ ಕೆಲವುಬ್ಬಿಗೆ ಹಿಂಸೆಯೂದರೂ ಸಾಗಬಹುದು. ಆದರೆ ನಿಷ್ಕಾಯಕ ಕಾರ್ಯವು ಮಾತ್ರ ಬಹಳ ಕಠಿಣ. ಅದರಲ್ಲಿ ಹಿಂಸೆಯಾದರೆ ಒಲು ಜಿಗ ಕತ್ತೆಯಾಗುವದು. ಮತ್ತು ಸಂಪಾದಿತವಾದ ವಿಜಯವೂ ಈ ಹಿಂಸೆಯಿಂದ ಬಲಿಯಾಗಿ ಪರಿಣಮಿಸಿ ಒಳ್ಳೇ ಮೋಸಗೊಳಿಸುವದು. ಅಂಧ ಸ್ವಾರ್ಥತ್ಯಾಗ ಮತ್ತು ನಿರಪೇಕ್ಷ ಮನೋವೃತ್ತಿಯನ್ನು ಜನರು ತೋರಿಸುವರೋ? ತಾವು ಮತ್ತು ತನ್ನ ಹಿತಸಂಬಂಧಗಳ ಸೇವೆ ಮಾಡಬೇಕೆಂಬ ಮೋಹವನ್ನು ಅವರು ಕಡೆಮಾಡಿಯಾರೋ?

ಕೇವಲ ಅಧಿಕಾರ ಲಾಲಸೆಯಿಂದ ಕೆಲಸ ಮಾಡಹತ್ತಿದರೆ ಜನಸಾಮಾನ್ಯರಿಗೆ ಸಿಕ್ಕತಕ್ಕ ಲಾಭ ದೊರೆಯಲಾರದು. ಅಜ್ಞಾಧಾರಕರಾದ ಅನುಯಾಯಿಗಳುಳ್ಳ ಜಾಣ ಮತ್ತು ದೃಢನಿಶ್ಚಯಿಗಳಾದ ಮುಖಂಡರು ಯಾವದೊಂದು ಕಾರ್ಯವನ್ನು ಕೈಕೊಂಡಿತೆ ಜನಸಾಮಾನ್ಯರಿಗೆ ಹೆಚ್ಚು ಲಾಭದೊರೆಯವದು. ಕಾಠೇವಾಡದಲ್ಲಿ ಜಗಳ

ಬಹಳೆಂದು ಪ್ರಸಿದ್ಧಿಯಿದೆ. ಸ್ವಪ್ರತಿಷ್ಠೆಯನ್ನೆ ಧೇಯವಾಗಿಟ್ಟುಕೊಂಡ ರಾಜಕೀಯ ಜನರಗುಂಪು ಇಲ್ಲದಿದ್ದರೆ ಶೂರರನ್ನು ಸಿದ್ದಪಡಿಸುವ ಶಕ್ತಿಯುಳ್ಳ ಜನರೂ ಇಲ್ಲಿರುವರು ರಾಜಕೀಯರು ಮೇಲುಗೈಯನ್ನು ಪಡೆವರೆ ರಾಜಕೋಟದಲ್ಲಿ ರಾಮರಾಜ್ಯವು ಸ್ಥಾಪಿಸಲ್ಪಡಲಾರದು. ರಾಮರಾಜ್ಯವೆಂದರೆ ಸರ್ವಾರ್ಪಣವು. ರಾಮರಾಜ್ಯದಲ್ಲಿ ಜನರು ತಾವಾಗಿಯೇ ತಿಸ್ತು ಪೊಲಿಸರು ನಿಷ್ಪ್ರಯೋಜಕರಾಗುವರು. ವಿಧಾಯಕ ಅಹಿಂಸಾವೃತ್ತಿಯನ್ನು ಜನರು ತಳೆದರೆ ಉಳಿದ ಸಂಸ್ಥಾನಗಳಿಗೆ ಮಾದರಿಯಾಗಿ ತನ್ನ ಜೋತಿ ಕಿರಣಗಳನ್ನು ಎರಡನೇ ಕಂಸ್ಥಾನಗಳಲ್ಲಿ ಹಬ್ಬಿಸಲು ಅದು ಶಕ್ತವಾಗಬಹುದು

ಆದುದರಿಂದ ರಾಜಕೋಟ ಪ್ರಜೆಗಳು ವಿಜಯೋನ್ಮತ್ತರಾಗಿ ಆತ್ಮಸಮಾಧಾನ ಹೊಂದಿ ಸ್ವಸ್ಥಾನ ಕೂಡ್ರದೆ ದೇವರಲ್ಲಿ ಶರಣು ಹೋಗಿ ಆತ್ಮನಿರೀಕ್ಷಣೆ ಮಾಡಿಕೊಂಡು ಕಾರ್ಯಮಾಡಹತ್ತಬೇಕು. ರಾಜಕೋಟ ಜನರು ಯಾವ ಮಾರ್ಗವನ್ನು ಅನುಸರಿಸುವರೆಂಬದನ್ನು ನಾನು ನಿರೀಕ್ಷಿಸುವೆನು. [ಭಾರಡೊಲಿಗೆ ಹೊ.ಗುವಾಗ ಗಾಡಿಯಲ್ಲಿ ಒರೆದುದು. ತಾ|| ೨೧ ಇ]

ಕಾಂಗ್ರೆಸ್ ಅಧ್ಯಕ್ಷ ಪೀಠವು ಯಾರಿಗೆ?

ಗಡಿನಾಡಿನ ಗಾಂಧಿಗಳು [ಗಫರ್‌ಖಾನ್] ಭೇಡೆಂದರು.

ತಮಗೆ ಅಧ್ಯಕ್ಷಸ್ಥಾನವು ಬೇಡೆಂದು ಗಡಿನಾಡಿನ ಗಫರ್ ಖಾನ್‌ರವರು ತಮ್ಮ ನಿಶ್ಚಿತ ಅಭಿಪ್ರಾಯವನ್ನು ಹೇಳಿರುವ ಕಾರಣ ಗಯೆನಾಮ ಕಾಂಗ್ರೆಸ್ ಸಂಸ್ಥೆಯು ಮೌಲಾನಾ ಅಬುಲ್ ಕಲಾಂ ಆಜಾದ್‌ರ ಹೆಸರನ್ನು ಸೂಚಿಸಲಿವೆ.

ಬಂಗಾಳದಲ್ಲಿ ಖಂಡೂ ಸುಭಾಷಚಂದ್ರರನ್ನೇ ಪುನಃ ಆರಿಸಬೇಕೆಂದು ಅಭಿಪ್ರಾಯವು ವ್ಯಕ್ತವಾಗುತ್ತಿದೆ. ಮಹಾತ್ಮ ಗಾಂಧಿಯವರು ಈ ವಿಷಯದಲ್ಲಿ ಇನ್ನೂ ಏನೂ ಉಸಿರಿಲ್ಲ. ಬಾರ್ಡೋಲಿಯಲ್ಲಿ ಈ ವಾರ ಕೂಡುವ ವರ್ಕಿಂಗ್ ಕಮಿಟೀಯಲ್ಲಿ ಈ ವಿಷಯದ ಬಗ್ಗೆ ಪ್ರಕಾಶವು ಬೀಳಬಹುದು.

ಒರಿಸ್ಸಾದೇಶದ

ರಾಣಪುರ ಸಂಸ್ಥಾನದಲ್ಲಿ ಭಯಂಕರ ಕೊಲೆ

ಒರಿಸ್ಸಾ ಸಂಸ್ಥಾನಗಳಲ್ಲೊಂದಾದ ರಾಣಪುರದಲ್ಲಿ ಪ್ರಜಾಮಂಡಲದವರು ಜವಾಬ್ದಾರೀ ಸರ್ಕಾರದ ಚಳುವಳಿ ಹೂಡಿದ್ದರು. ಕಳೆದ ಗುರುವಾರ (5-1-39) ಪ್ರಜೆಗಳು ಪ್ರಕ್ಷುಬ್ಧರಾಗಿರುವರೆಂದೂ, ಪರಿಸ್ಥಿತಿಯು ಭಯಂಕರವಾಗಿರುವದೆಂದೂ ತಿಳಿದುಬಂದ ಕಾರಣ ಅಲ್ಲಿನ ಸಂಸ್ಥಾನಗಳ ಮೇಲಧಿಕಾರಿ ಸೇಜರ್ ಬ್ಯಾಲ್‌ಗೆಟ್ಟೈಯವರು ಹೋದರು. ಪ್ರಜೆಗಳಮೇಲೆ ಗುಂಡು ಹಾರಿಸಲಾಯಿತೆಂದೂ, ಅದರಿಂದ ಕೂಡಲೇ 2 ಸತ್ತರೆಂದೂ, ಈ ಕಾರಣ ಪ್ರಜೆಗಳಲ್ಲಿನ ಹಿಂಸಾವೃತ್ತಿಯ ಜನರು ಏಜಂಟರನ್ನು ಮುತ್ತಿ ಲಾಠೀ ಪ್ರಹಾರದಿಂದ ಸಂಹರಿಸಿದರೆಂದೂ, ತಿಳಿದುಬಂದಿದೆ. ಈ ಬೆಗೆ ಬಂದ ಮುತ್ತೊಂದು ಸುದ್ದಿಯಿಂದ ಆದಿನ ನಡೆದ ಗಲಭೆಗಳಿಂದ 19 ಜನರು ಮರಣಿಸಿದರೆಂದು ತಿಳಿದುಬಂದಿದೆ.

ಈ ಕೃತ್ಯದ ಖಂಡನೆ

ಈ ಭಯಂಕರ ಕೃತ್ಯವನ್ನು ಖಂಡಿಸುತ್ತಾ ಮಹಾತ್ಮ ಗಾಂಧಿ, ಪಂ. ಜವಾಹರಲಾಲ ಮುಂತಾದ ದೇಶನಾಯಕರು ಪ್ರಕಟನೆಗಳನ್ನು ಹೊರಡಿಸಿದರು. ಅಲ್ಲದೆ ಒರಿಸ್ಸಾ ಪ್ರಧಾನ ಮಂತ್ರಿಗಳು ಮೇಜರ್‌ರ ಅಂತ್ಯಕ್ರಿಯೆಗಳಿಗೆ ಏರ್ಪಡಿಸಿ ಎಲ್ಲಾ ಸಹಾಯವನ್ನೊದಗಿಸಿದರು.

ಪರದೇಶ

ಸ್ಪಾಲಿಸ್ತಾಯಿ ದೇಶದಲ್ಲಿ 1938ರ ಗಲಭೆಗಳಲ್ಲಿ 2000 ಜನರು ಸತ್ತಿರುವರೆಂದೂ, 1700 ಜನರು ಘಾಯಗೊಂಡಿರುವರೆಂದೂ ತಿಳಿದುಬಂದಿದೆ. ಅವರಲ್ಲಿ ಮುಕ್ಕಾಲುಪಾಲು ಒನರು ಅರಬರೇ ಇರುವರು.

ಸ್ಪೈನ್ ದೇಶದಲ್ಲಿ ದಂಗೆಕೋರ ಫ್ರಾಂಕೋವಿಗೆ ಈ ವಾರ ಬಹುಭಾಗಗಳಲ್ಲಿ ಜಯವು ದೊರಕಿದೆ. ಬಾಂಬುಗಳಿಂದ ಜನತೆಯ ವೃಥಾ ಸಂಹಾರವು ನಡೆದಿದೆಯೆಂದು ಇದಕ್ಕೆಗಿ ಏರ್ಪಟ್ಟ ಸಮಿತಿಯ ಅಭಿಪ್ರಾಯವಿದೆ.

ಜೆಕೋಸ್ಲೋವೇಕಿಯಾ-ಹಂಗೇರಿ ಸರಹದ್ದಿನಲ್ಲಿ ಎರಡು ದೇಶಗಳ ಸರಹದ್ದ ಸೈನಿಕರಲ್ಲಿ ಬಡಿದಾಟವಾಯಿತು. ಹಂಗೇರಿಯವರಲ್ಲಿ 9 ಜನರೂ, ಜೆಕರಲ್ಲಿ 5 ಜನರೂ ಸತ್ತಂತೆ ಸುದ್ದಿ ಬಂದಿದೆ. ಸರಹದ್ ಪ್ರದೇಶವ ಕೆಲಭಾಗಗಳ ಅಧಿಕಾರ ವಿಷಯದಲ್ಲಿ ಭಿನ್ನಾಭಿಪ್ರಾಯವಾಗಿದೆ.

ತುರ್ಕಿ ಸರ್ಕಾರದ ಸಹಿನೂಡಿ 50 ವಿಮಾನಗಳನ್ನು ಕೊಂಡು ಸ್ಪೈನ್ ಸರ್ಕಾರಕ್ಕೆ ಮಾರಿದ ವಿಷಯವು ಈಗ ಬಯಲಿಗೆ ಬಿದ್ದಿದೆ. ಅಂಕಾರದಲ್ಲಿ ಕೆಲವರ ದಸ್ತಗಿರಿಯಾಗಿದೆ

ಜಪಾನ್ ಮಂತ್ರಿಮಂಡಲದ 7 ಜನ ಸದಸ್ಯರು ರಾಜೀನಾಮೆ ಕೊಟ್ಟರುವರು. ಮುಖ್ಯಮಂತ್ರಿಗಳು 'ಪುನರ್ವಿಮರ್ಶೆ' ಮಾಡಲು ಕೇಳಿಕೊಂಡಿರುವರಂತೆ ತಿಳಿದುಬಂದಿದೆ.

ಅಂಬಾ ಭವನ ಕಾಫೀ ಕ್ಲಬ್ (ರಿಜಿಸ್ಟರ್ಡ್)

ಮತ್ತು

ಶ-ಜೆ — **ಊಟದ-ಹೋಟೆಲ್.** ◆ ◆

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿವೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ - ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆಮಾಡುವೆವು.

ಪ್ರೊಪ್ರಯಟರ್ಸು— ಶಿ. ಕೆಷ್ಣಯ್ಯ, ಹೆಚ್. ಕರಿಬಸಪ್ಪ.

15a

ಆಲೂರಿನಲ್ಲಿ ಹಾಸ್ಟಲಿನ ವಾರ್ಷಿಕೋತ್ಸವ
ಬಳ್ಳಾರಿ ಜಿಲ್ಲಾ ಹರಿಜನ ಮಹಾಸಭೆ

ಆಲೂರಿನಲ್ಲಿ ಹರಿಜನ ವಿದ್ಯಾರ್ಥಿನಿಲಯದ ಪಂಚಮ ವಾರ್ಷಿಕೋತ್ಸವವೂ, ಜಿಲ್ಲಾ ಹರಿಜನ ಮಹಾಸಭೆಯೂ ಶ್ರೀ ವಿ. ಎಂ. ಗಿರಿಯನವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಸುಮಾರು 500 ಜನ ಪ್ರತಿನಿಧಿಗಳು ದಯಮಾಡಿಸಿದ್ದರು. ಮದ್ರಾಸಿನಿಂದ ಮಂತ್ರಿಗಳಾದ ಶ್ರೀ. ವಿ, ವಿ, ಗಿರಿಯನವರು ಭಾರತ ಸೇವಾಸಂಘದ ಸೂರ್ಯನಾರಾಯಣರು ಬಂದಿದ್ದರು. ಬಳ್ಳಾರಿಯಿಂದ ಜಿಲ್ಲಾ ಬೋರ್ಡು ಅಧ್ಯರೂ, ಉಪಾಧ್ಯಕ್ಷರು ಶ್ರೀ. ಬಿ. ಭೀಮರಾವ್ ಗುರುರಾಜರಾವ್, ವೀರಾಸ್ವಾಮಿ ನರಸಿಂಹಶಾಸ್ತ್ರಿ, ವೆಂಕೋಬರಾವು ಮಗೈರೆ ಮಹಾಶಯರು ಬಂದಿದ್ದರು. ಹಾಸ್ಟಲ್ ಯೆದುರಿನ ಭೂಮಿಯಲ್ಲಿ ವಿಶಾಲವಾದ ಮತ್ತು ಸುಂದರವಾದ ಮಂಟಪವು ಹಾಕಲ್ಪಟ್ಟಿತ್ತು. ಹರಿಜನೋದ್ಧಾರದ ಬಗ್ಗೆ ವಚನಗಳನ್ನುಳ್ಳ ಪಟಗಳು ಅಲ್ಲಲ್ಲಿ ಹಾಕಲ್ಪಟ್ಟಿದ್ದವು

ವಂದೇಮಾತರಂ ಗೀತೆಯಾದನಂತರ ಸಭಾಕಾರ್ಯಗಳು ಪ್ರಾರಂಭವಾಗಿ ಹಾಸ್ಟೆಲ್ ರಿಪೋರ್ಟು ಮತ್ತು ವಾರ್ಷಿಕೋತ್ಸವಕ್ಕೆ ಬಂದ ಸಂದೇಶಗಳು ಓದಲ್ಪಟ್ಟವು. ಮಂತ್ರಿಗಳಾದ ಗಿರಿಯನವರು ಹರಿಜನರ ಉದ್ಧಾರದ ಬಗ್ಗೆ ಕೆಲ ಸಲಹೆಗಳನು ಕೊಟ್ಟು ಸರಕಾರದವರು ಅವರ ಹಿತಕ್ಕಾಗಿ ಮಾಡುತ್ತಿರುವ ಕೆಲಸಲಗಳನ್ನು ಹೇಳಿದರು. ಇದಾದನಂತರ ಶ್ರೀ ಸೂರ್ಯನಾರಾಯಣರಾವು, ಭೀಮರಾವ್, ಡಾಕ್ಟರು ಗೌಡ್ ಗುರುರಾಜರಾವು, ಕೆ. ಯನ್. ಶಾಸ್ತ್ರಿ, ಶೀತಾರಾಮರೆಡ್ಡಿ ಇವರು ಹರಿಜನರ ಹಿತವನ್ನು ಕುರಿತು ಮಾತಾಡಿದರು.

ಎಲ್ಲರೂ - ಶ್ರೀಕೃಷ್ಣಮೂರ್ತಿ ಮತ್ತು ಗೋವಿಂದದಾಸರ ಕಾರ್ಯವನ್ನು ಕುರಿತು ಪ್ರಶಂಸಿಸಿದರು.

ಶ್ರೀ. ಟೀಕೂರರು ಎಲ್ಲರನ್ನು ವಂದಿಸಿದರು.

ಮಧ್ಯಾನ್ನ ಮಂತ್ರಿಗಳು ಗುಂತಕಲ್ ಮಾರ್ಗವಾಗಿ ಮದ್ರಾಸಿಗೆ ಪ್ರಯಾಣಬೆಳೆಸಿದರು. ಮ. 3 ಘಂಟೆಯಲ್ಲಿ ಜಿಲ್ಲಾ ಹರಿಜನ ಸೇವಕ ಸಂಘದ 6ನೆ ವಾರ್ಷಿಕ ವರದಿಯನ್ನು ಕಾರ್ಯದರ್ಶಿಗಳು ಓದಿದಮೇಲೆ ನಿರ್ಣಯಗಳಮೇಲೆ ಕೆಲ ಮಹಾಶಯರು ಮಾತಾಡಿದಮೇಲೆ ಪಾಸಾದವು.

(ನಿರ್ಣಯಗಳು ಮುಂದಿನವಾರ.)

ರಾಜಕೋಟೆ ದಿವಾನರ ರಾಜೀನಾಮೆ.

ಮುಂಬಯಿ ಜ ೧೧.

ರಾಜಕೋಟೆಯ ದಿವಾನರಾವ ಸರ್ ಪ್ಯಾಟ್ರಿಕ್ ಕ್ಯಾಡೆಲ್ ರವರು ದಿವಾನ ಪದವಿಗೆ ರಾಜೀನಾಮೆ ಇತ್ತಿರುವುದಾಗಿ ವರ್ತಮಾನಬಂದಿದೆ. ಈದಿನ ರಾತ್ರಿ ಕಾಶ್ಮೀರುವಾರ್ ಮೇಲ್‌ನಲ್ಲಿ ಹೊರಟು ಮುಂಬೈ ನಗರಕ್ಕೆ ಬಂದು ಅಲ್ಲಿಂದ ಕೋಲಂಬೋ ನಗರಕ್ಕೆ ಪ್ರಯಾಣಮಾಡುವರೆಂದು ತಿಳಿದುಬಂದಿದೆ. ಸಿಲೋನಿನಲ್ಲಿ ಕೋಜಕಾಲವಿದ್ದು ವಿಶ್ರಾಂತಿಯನ್ನು ತೆಗೆದುಕೊಂಡು ಅನಂತರ ಇಂಗ್ಲೆಂಡಿಗೆ ಪ್ರಯಾಣಮಾಡುವರು. 'ಸೀನಿಯರ್' ಸಚಿವರಾದ ಶ್ರೀ ಮನಿಕ್‌ಲಾಲ್ ಪಟೇಲ್‌ರವರು ದಿವಾನರ ಆಡಳಿತ ಸೂತ್ರಗಳನ್ನು ವಹಿಸಿದ್ದಾರೆ.

ಸುಧಾರಣಾಸಮಿತಿಯ ಸದಸ್ಯರ ಹೆಸರುಗಳು ಇನ್ನೂ ಪ್ರಕಟವಾಗಿಲ್ಲ ಸರ್ದಾರ್ ಪಟೇಲರು ಸೂಚಿಸಿದ್ದ ಹೆಸರುಗಳನ್ನು ಠಾಕೂರರು ಇನ್ನೂ ಪರಿಶೀಲಿಸುತ್ತಿದ್ದಾರೆ.

ಹಸಿದವರ ಯಾತ್ರೆ

ರಂಗೂ ಜ. ೧೧.

೨೦೦೦ ಕ್ಕಿಂತ ಹೆಚ್ಚು ಮಂದಿ ಹಸಿದವರು ತಮ್ಮ ಕೊರತೆಗಳನ್ನು ಸರಕಾರಕ್ಕೆ ಬಿನ್ನವಿಸಿಕೊಳ್ಳಲು ಇಲ್ಲಿಗೆ ಬಂದಿದ್ದಾರೆ. ಪ್ರೋಂ ರಸ್ತೆ, ಇರ್ವೀನ್ ರಸ್ತೆ ಮತ್ತು ಯೂನಿವರ್ಸಿಟಿ ಅವೆನ್ಯೂ ಇವುಗಳು ಸಂಧಿಸುವ ಸ್ಥಳದಲ್ಲಿ ೧೫,೦೦೦ ಕ್ಕಿಂತ ಹೆಚ್ಚು ಮಂದಿ ನೆರೆದಿದ್ದು ಅವರಿಗೆ ಸ್ವಾಗತವಿತ್ತರು.

ಈ ೨೦೦೦ ಮಂದಿಯಲ್ಲಿ ೧೫೩೨ ಮಂದಿ ಎಣ್ಣೆ ಗಣಿಗಳ ಕೆಲಸಗಾರರು. ಇವರು ಯಾನಾಂಗ್ ಯಾಂಗಿನಿಂದ ೨೦೦ ಮೈಲಿಗಳಿಗೆ ಮಿರಿ ಕಾಲ್ನಡಿಗೆಯಲ್ಲಿ ಬಂದಿದ್ದಾರೆ. ಎಣ್ಣೆಗಣಿಗಳಲ್ಲಿ ಕೆಲಸಗಾರರಿಗೆ ಹೆಚ್ಚು ಕೂಲಿ ಕೊಡಬೇಕೆಂದೂ, ಮೇಲ್ತರದ ಸೌಕರ್ಯಗಳನ್ನು ಕಲ್ಪಿಸಬೇಕೆಂದೂ ಅವರು ಕೇಳುವರು. ಉಳಿದವರೆಲ್ಲ ಥಾಂಟ್ ಜಿಲ್ಲೆಯಿಂದ ಬಂದಿರುವ ವ್ಯವಸಾಯಗಾರರು ಅವರಲ್ಲಿ ಸುಮಾರು ೦೦ ಮಂದಿ ಬೌದ್ಧ ಸನ್ಯಾಸಿಗಳೂ, ೬೦ ಮಂದಿ ಸ್ತ್ರೀಯರೂ ಇದ್ದಾರೆ. ವ್ಯವಸಾಯಗಾರರಿಗೆ ಕೆಚ್ಚಿನ ಸೌಕರ್ಯಗಳನ್ನು ಒದಗಿಸಬೇಕೆಂದು ಕೇಳಲು ಅವರು ಬಂದಿದ್ದಾರೆ.

ಬಡವರಿಗೂ, ಭಾಗ್ಯವಂತರಿಗೂ - ವಿಮೆಮಾಡಲು ಹೆಚ್ಚಿನ ಸೌಕರ್ಯಗಳುಂಟು.

ಪದ್ಧತಿಗಳಲ್ಲಿ ನಾವೀನ್ಯತೆ ಸುಲಭದರದ ಕಂತುಗಳವಿಶೇಷತೆಯುಳ್ಳ

ಅತ್ಯುತ್ತಮ ಸಂಸ್ಥೆ

ದಿ

ಏಶಿಯನ್ ಅಶೂರೆನ್ಸ್ ಕಂಪನಿ,

ಲಿ ಮಿ ಟೆ ಡ್ .

[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]

ಹೆಡ್ ಆಫೀಸ್– ಬಾಲಾರ್ಡ್ ಎಸ್ಟೇಟ್ ಫೋರ್ಟ್, ಮುಂಬೈ.

ಅಪಾಯ ಬರಬಹುದಾದ ಕಾಲದಲ್ಲಿ, ಸಂಪಾದಿಸಲಾಗದ ಪರಿಸ್ಥಿತಿಯಲ್ಲಿ, ವೃದ್ಧಾಪ್ಯದಲ್ಲಿ ನಿಮಗೆ ಸಹಾಯ ಬೇಕಲ್ಲವೇ? ಹಾಗಾದರೆ, ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ 'ಪಾಲಿಸಿ' ಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆ ಪಡಬಹುದುದಾದ, ಬಲವತ್ತರವಾದ ಆರ್ಥಿಕ ಭದ್ರತೆಯುಳ್ಳ ವಿಮಾಸಂಸ್ಥೆ. ವಿವರಗಳಿಗೆ ಬರೆಯಿರಿ.

ಬ್ಯಾಕ್ಟರ್ ಬೀದಿ
ಬ್ಯಾಂಧಿ

ಎ. ಪಾರ್ಥಸಾರಥಿ, ಬಿ. ಎ.
ಚೀಫ್-ಆಗರ್ನೈಜರ್.

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘ, ಬಳ್ಳಾರಿ.

ಹರಿಜನರಿಗೆ ಸಾಲ ಕೊಡಬೇಡಿರಿ.

ಇದರಿಂದ ಅವರಿಗೆ ದೊಡ್ಡ ಅಪಕಾರ ಮಾಡಿದಂತಾಗುತ್ತದೆ.

ನಿಮ್ಮ ಸಾಲಗಳು ಬರುವುದೂ ಕಷ್ಟವಾಗುತ್ತದೆ.

ಬಳ್ಳಾರಿಯಲ್ಲಿ ಕೂಲಿಕೆಲಸ ಮಾಡುತ್ತಿರುವ ಹರಿಜನರಿಗೂ ಮುನಿಸಿಪಾಲಿಟಿಯಲ್ಲಿನ ಸ್ವೀಪರು, ತೋಟಿಗಳಿಗೂ, ಅವರ ಯೋಗ್ಯತೆ ಮೀರಿ ಈ ಊರ ಕೆಲ ಸಾಹುಕಾರರು ಸಾಲಕೊಡುತ್ತಿರುವರು. ಬಡ್ಡೀದರವು ರೂಪಾಯಿ ಗಿಕ್ಕೆ ತಿಂಗಳಿಗೆ ೦—೦—೬ ಆರ್ಥಾತ್ ಶೇಕಡಾ ೦-೬-೦ ವರೆಗೂ ಇದೆ. ಸಮನ್ ಮನುಷ್ಯರನ್ನು ಕಳುಹಿಸಿ ಅವರನ್ನು ಕೆಲಸಕ್ಕೆ ಹೋಗದಂತೆ ತಡೆದು, ಸಂಬಳವಂದ ದಿನ ವಸೂಲಿ ಮಾಡುವ ಪದ್ಧತಿಗಳು ಕ್ರೂರವಾಗಿವೆ.

ಈ 8-10 ವರ್ಷಗಳಲ್ಲಿ ಹರಿಜನ ಸುಧಾರಣೆಯಾಗಬೇಕೆಂದು ನಾವು ಪ್ರಯತ್ನಿಸುತ್ತಲೇ ಬಂದಿದ್ದೇವೆ. ಅವರಿಗೆ ಸುಲಭದರದ ಸಾಲ ಕೊಡಲು ಮುನಿಸಿಪಾಲಿಟಿಯಲ್ಲಿ ಒಂದು ಸೊಸೈಟಿಯಿದೆ. ಅಲ್ಲದೆ ಅವರು ಕೇರಿ ಕೇರಿಗಳಲ್ಲೂ ತಮ್ಮ ಸಂಬಳ ಬಂದಾಗ ೧-೨-೩-೪ ಈ ಪ್ರಕಾರ ಫಂಡು ಹಾಕಿ, ಸಾಲ ತೀರಿಸಲು ಏರ್ಪಾಟು ಮಾಡಿಕೊಂಡಿರುವರು. ಒಂದುಕಡೆಯಲ್ಲಿ ಸಾಲ ತೀರಿಸುವುದು ಮತ್ತೊಂದು ಕಡೆಯಲ್ಲಿ ಸಾಲ ತರುವುದು ಇದು ನಡೆದೇ ಇದೆ ಇದಕ್ಕೆ ಕಾರಣಗಳೆಂದರೆ—

"ಮಾದಿಗರಿಗೆ ಕೊಟ್ಟ ಸಾಲ ಮುಳುಗುವುದಿಲ್ಲ. ಹೆಚ್ಚಿನ ಬಡ್ಡಿ ದೊರೆಯುತ್ತದೆ" ಎಂಬ ಕೆಲ ಸಾಹುಕಾರರ ಅಭಿಪ್ರಾಯ. ಅಲ್ಲದೆ ಹರಿಜನರಲ್ಲಿ ಕೆಲವರು ಯಜಮಾನಿಕೆಯನ್ನು ವಹಿಸಿಕೊಂಡ ಕೇರಿಯ ಪರವಾಗಿ ಸಾಲ ತರುವರು. ಈ ಯಜಮಾನಿಕೆಯುವುದು ಸಾಹುಕಾರಿಗೆ ವಳಸಂಚಾಗಿ, ತಮ್ಮ ಸ್ವಲಾಭ ಮಾಡಿಕೊಳ್ಳುತ್ತಿರುವರು. ಹೀಗಾಗಿ ಹರಿಜನರಿಗೆ ಬರುವ ಸಂಬಳದ ಬಹುಭಾಗವು ಬಡ್ಡಿಗೇ ಹೋಗುತ್ತದೆ.

ಪುಲ್ಲಯ್ಯ ದೊಡ್ಡಿಕೇರಿ, ಶ್ರೀರಾಂಪುರಂಕೇರಿ, ಮತ್ತು ಹಿರಿಕುಳ್ಳಡಪ ಕೇರಿ ಬ್ರೂಸ್‌ಪೇಟೆಯ ಈ ಮೂರು ಕೇರಿಗಳ ನಿವಾಸಿಕುಟುಂಬದವರು ೧೨೦೦೦ ಹತ್ತು ಸಾವಿರ ರೂಪಾಯಿಗಳವರೆಗೂ ಸಾಲ ಕೊಡಬೇಕಾಗಿದೆ. ಅಂದರೆ ಸರಾಸರಿ ಒಂದು ಕುಟುಂಬವು ೫೦ ರಿಂತಲೂ, ಹೆಚ್ಚಿನ ಅಸಲು ಕೊಡಬೇಕಾಗಿದೆ. ಬಳ್ಳಾರಿನಗರ ಪರಿಸ್ಥಿತಿಯೇ ಜಿಲ್ಲೆಯ ಅನೇಕ ಭಾಗಗಳಲ್ಲಿಯೂ ಅನ್ವಯಿಸುತ್ತದೆ.

ಈ ಕಾರಣ ಬಳ್ಳಾರಿಯ ಹರಿಜನರಿಗೆ ಸಾಲ ಕೊಡುತ್ತಿರುವ ಸಾಹುಕಾರರಲ್ಲಿ ನಾವು ಬೇಡಿಕೊಳ್ಳುವುದೇನೆಂದರೆ —

ನೀವು ದಯವಿಟ್ಟು ಇನ್ನುಮೇಲೆ ಹರಿಜನರಿಗೆ ಸಾಲ ಕೊಡಬೇಡಿರಿ. ಬಡವರಿಂದ ಸಾಲ ಬಡ್ಡಿಗಳು ಬರುವುದೂ ಕಷ್ಟ. ಅಲ್ಲದೆ ಆ ಬಡ ಕುಟುಂಬಗಳನ್ನು ಘೋರ ಸಂಕಟದಲ್ಲಿ ಕೆಡವಿ ಅವರ ಜೀವನಕ್ಕೆ ಕಷ್ಟಮಾಡಿ, ಮಕ್ಕಳ ಮರಿಗಳಿಗೆ ಹೊಟ್ಟೆ ಬಟ್ಟೆಗಿಲ್ಲದಂತೆ ಮಾಡಿ ಅವರನ್ನು ಕುಡಿತ ಮತ್ತು ವ್ಯಭಿಚಾರದ ದುರ್ಮಾರ್ಗಗಳಿಗೆ ಹತ್ತಿದಂತಾಗುತ್ತದೆ. ಈ ಕಾರಣ ಹರಿಜನರ ಆರ್ಥಿಕ ಸ್ಥಿತಿಯು ಸುಧಾರಿಸಬೇಕೆಂಬ ಎಲ್ಲಾ ಮಹನೀಯರೂ ಈ ಕಾರ್ಯದಲ್ಲಿ ಸಹಕರಿಸಿ ಸದರಿ ಸಾಹುಕಾರರಿಗೆ ಹೇಳಿ ಸಾಲ ಕೊಡದಂತೆ ಮಾಡಬೇಕು. ಅವರ ಉದ್ಧಾರವಾಗಬೇಕೆಂದರೆ ಇದರ ಹೊರತು ಬೇರೆ ಮಾರ್ಗವೇ ಇಲ್ಲ. ಹರಿಜನರಿಗೆ ಸಾಲಕೊಡುವ ಸಾಹುಕಾರರು ಈ ನೋಟೀಸು ನೋಡಿದ ಮೇಲಾದರೂ, ಹೆಚ್ಚಿನ ಬಡ್ಡಿಗೆ ಆಶೆಪಡದೆ ಸಾಲ ಕೊಡುವುದನ್ನು ನಿಲ್ಲಿಸಬೇಕೆಂದು ಕೋರುತ್ತೇನೆ

ಟಿ. ಬಿ. ಕೇಶವರಾವ್, ಜನರಲ್ ಸೆಕ್ರೆಟರಿ.

ಗುಡುದೂರು ತಿಮ್ಮಪ್ಪ ಅಧ್ಯಕ್ಷ.

ಜಿ ನಾಗಭೂಷಣಂ ಬಿ. ಎ., ಬಿ. ಎಲ್., ಜಾಯಿಂಟ್ ಸೆಕ್ರೆಟರಿ.

ಸಿಂಧ್‌ನಲ್ಲಿ ವಾರ್ಧಾ ಶಿಕ್ಷಣ ವ್ಯವಸ್ಥೆ

ಕರಾಚಿ ಜ. 10

ಸಿಂಧ್ ಉಪಾಧ್ಯಾಯರ ಮತ್ತು ಉಪಾಯಿನಿಯರ 'ಟ್ರೈನಿಂಗ್ ಕಾಲೇಜ್' ಗಳಲ್ಲಿ ವಾರ್ಧಾ ಶಿಕ್ಷಣ ವ್ಯವಸ್ಥೆಯನ್ನು ಆಚರಣೆಗೆ ತರುವ ವಿಚಾರವನ್ನು ಸಿಂಧ್ ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂಬುದಾಗಿ ಮಹಾ ಪ್ರಧಾನ ಶ್ರೀ ಅಲ್ಲಾಭಕ್ಷ್ಸರವರು ಈದಿನ 'ಅಸೆಂಬ್ಲಿ' ಸಭೆಯಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರವೀಯುತ್ತ ತಿಳಿಸಿದರು.

ಶ್ರೀಕೃಷ್ಣ ವಾಣಿ

ಮುದ್ರಣ ಕೆಲಸ

(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ

ಬೇರೆ ಬೇರೆ ಬಣ್ಣಗಳ ಕಾಗದಗಳ ಸಮೇತ

ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ

ವಿಠಲ ಮುದ್ರಣಾಲಯಕ್ಕೆ

ಬನ್ನಿರಿ

1. ಉತ್ತಮ ಮುದ್ರಣವು ಕಲೆಯ ಹೆಗ್ಗುರುತು!
2. ಹೊತ್ತಿಗೆ ಸರಿಯಾಗಿ ದೊರೆಯುವದು ವ್ಯವಹಾರಕ್ಕೆ ಭೂಷಣ!!
3. ಕೆಲಸಗಳೆಲ್ಲ ಸಾಮಾನ್ಯ ದರದಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

—ವ್ಯವಸ್ಥಾಪಕ

ವಿಠಲ ಮುದ್ರಣಾಲಯ,

ತೇರು ಬಜಾರು ಬಳ್ಳಾರಿ.

ಸ್ವದೇಶ

ಮೈಸೂರು ನಗರದ ದೊಡ್ಡಪೇಟೆಯಲ್ಲಿ ಹೊಸದಾಗಿ ಕಟ್ಟಿರುವ ಪೋಲೀಸ್ ಕಟ್ಟಡಕ್ಕೆ **ಹ್ಯಾಮಿಲ್ಟ್ ಬಿಲ್ಡಿಂಗ್** ಎಂದು ನಾಮಕರಣ ಮಾಡುವುದರ ವಿರುದ್ಧ ಸತ್ಯಾಗ್ರಹವನ್ನು ಹೂಡಲಿರುವೆವೆಂದು ಶ್ರೀ ತಗತೂರು ರಾಮಚಂದ್ರರಾವ್ ಮತ್ತೆರೆ ಕಾಂಗ್ರೆಸ್ ಮುಖಂಡರು ಪ್ರಕಟನೆ ಹೊರಡಿಸಿರುವರು. ಹ್ಯಾಮಿಲ್ಟನ್‌ರವರು ಪೋಲೀಸ್ ಖಾತೆಯ ಮುಖ್ಯಾಧಿಕಾರಿಗಳಿದ್ದು ಕಾಯ್ದೇ ಭಂಗದ ಕಾಲಕ್ಕೆ ಗಬ್ಬಾಳಿಕೆಗೆ ಕಾರಣರೆಂಬ ಆಪಾದನೆ ಇದೆ.

ಸಿಂಧ ಮಂತ್ರಿಮಂಡಲದ ವಿರುದ್ಧ ಮಂಡಿಸಲ್ಪಟ್ಟ ಅವಿಶ್ವಾಸದ ಠರಾವು ಚರ್ಚೆಗೆ ಬಂದಾಗ ಕಾಂಗ್ರೆಸ್ಸಿನ 10 ಜನ ಸದಸ್ಯರು ತಟಸ್ಥರಾಗಿ ಉಳಿದರು. ಆಣೆಕಟ್ಟು ಜಮೀನು ಕೆಂದಾಯದ ಪ್ರಶ್ನೆಯನ್ನು ವಾರ್ಧಾ ನಿರ್ಣಯದ ಪ್ರಕಾರ ಮುಂದೆ ಹಾಕಲು ಮಂತ್ರಿಮಂಡಲವು ಒಪ್ಪಲಿಲ್ಲ.

ನೈಸ್ಸಾಯರವರ ಲಿನ್‌ಲಿತ್‌ಗೋ ರವರ ದಕ್ಷಿಣ ಹಿಂದೂಸ್ಥಾನದ ಪ್ರವಾಸವು ಪ್ರಾರಂಭವಾಗಿದೆ. ಕೊಚಿನ್ ಮತ್ತು ತ್ರಿವಾಂಕೂರುಗಳಲ್ಲಿ ಅದ್ಭುತ ಸ್ವಾಗತವಾಗುತ್ತಲಿದೆ. 'ಸಂಯುಕ್ತ ರಾಜ್ಯ ಘಟನೆ' ಯ ಬಗ್ಗೆ ಸೌಹಾರ್ದಗೀತೆಯನ್ನು ವೈಸ್ರಾಯರು ಪ್ರಾರಂಭಿಸಿದ್ದಾರೆ.

ಹೈದರಾಬಾದ್ನಲ್ಲಿ ಸತ್ಯಾಗ್ರಹ ಮಾಡಿ ಕೈದಾದ ಪರಕೀಯ ಸತ್ಯಾಗ್ರಹಿಗಳನ್ನು ಬಂಧಮುಕ್ತ ಮಾಡಲು ಅಪ್ಪಣೆಯಾಗಿದೆ. ಆವರೆ ಸಂಸ್ಥಾನೀಕರನ್ನು ಬಿಡಲು ಯಾವ ಆಜ್ಞೆಯೂ ಆಗಿಲ್ಲ.

ಕಾಶಿ ಹಿಂದೂ ವಿಶ್ವವಿದ್ಯಾಲಯಕ್ಕೆ ಹೈದರಾಬಾದ ನಿಜಾಮರು ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನು ಕೊಟ್ಟಿರುತ್ತಾರೆ

ಮದ್ರಾಸು ಮಂತ್ರಿಮಂಡಲವು ಮುಸಲ್ಮಾನರಿಗೆ ಅನ್ಯಾಯ ಮಾಡಿಲ್ಲವೆಂದು ಮುಸ್ಲಿಂ ಲೀಗ್ ಸದಸ್ಯರಾದ ಬಹದ್ದೂರ್ ಅಸ್ಮತ್ ಸಯ್ಯದ್‌ರವರು ಹುಬ್ಬಳ್ಳಿಯಲ್ಲಿ ಹೇಳಿದರು. ಮದ್ರಾಸಿನ ಒಕ್ಕೂಟ ಹಿಂದೀ ಶಿಕ್ಷಣದಿಂದ ಮುಸಲ್ಮಾನರಿಗೆ ಲಾಭವಾಗಿದೆಯೆಂದು ಅಭಿಪ್ರಾಯಪಟ್ಟರು.

ಧಾರವಾಡದಲ್ಲಿ ಕರ್ನಾಟಕ ಯುವಕ ಪರಿಷತ್ತು ಈ ತಿಂಗಳು 14 ನ್ನು ಮತ್ತು 15ನೇ ತಾರೀಖುಗಳಲ್ಲಿ ನೆರವೇರಲಿದೆ. ಬೆಂಗಳೂರಿನ ಅಡ್ವೋಕೇಟರಾದ ಶ್ರೀ ಕೆ. ಟಿ. ಭಾಷ್ಯಂರವರು ಅಧ್ಯಕ್ಷತೆಯನ್ನು ವಹಿಸಲಿದ್ದು, ಅಲಸಬಾದ್‌ನ ಸಮಾಜಸೇವಕರಾದ ಶ್ರೀ ರಾಮನಿವಾಸ ಲೋಹಿಯಾರವರು ಪ್ರಾರಂಭೋತ್ಸವನನ್ನು ನಡೆಸಲಿರುವರು.

PRABHAKR SNOW.

ಪ್ರಭಾಕರ ಸ್ನೋ

ಮುಖದ ಕಾಂತಿ, ವರ್ಚಸ್ಸು ಗಳಿಗೂ, ಚರ್ಮದ ಮೃದುತ್ವಕ್ಕೂ ಉಪಯೋಗಿಸಿರಿ. ಸ್ವದೇಶಿ ಸ್ನೋ ಗಳಿಗೆ ಪ್ರೋತ್ಸಾಹ ಕೊಡಿರಿ

K V. & Sons, BELLARY.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ. ನಮ್ಮ ಹೆಸರಿರವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.
ವೆಸ್ಟ್ ಎಂಡ್' ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಮಿನಾಕ್ಷಿ ಭವನ ಕಾಫೀಕ್ಲಬ್
(ರಿಜಿಸ್ಟರ್ಡ್)

ಶಾಖೆಗಳು **ಕಾಫಿ ಕ್ಲಬ್ ಬೆಂಗಳೂರು ರೋಡ್**
ಊಟ ಮತ್ತು ವಸತಿಗೃಹ ಬಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಫಾರದ ಫಲಹಾರವಸ್ತುಗಳು
ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಆಧುನಿಕ ವ್ಯವಸ್ಥೆ
ಒಂದು ಸಲ ಬಂದು ಪರೀಕ್ಷಿಸಿರಿ

ಅಂಗ್ವೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮಲಾಮು

ಸಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿ ಚಟ್ಟು ಸುಟ್ಟು ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾವವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಆಗತ್ಯವಾಗಿ ಸಂಗ್ರಹಿಸತಕ್ಕದ್ದು.
ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.
ಜೀವನ ಸುಧಾ ಫಾರ್ಮಸಿ.
ಸೋಲ ಏಜಂಟರು:—ಸರೋವರ ಬ್ರದರ್ಸ್, ಬಳ್ಳಾರಿ.

ವಿಶ್ವಲ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಟಿ. ಬಿ. ಕೇಶವರಾಯರಿಂದ ಪ್ರಕಟಿಸಲ್ಪಟ್ಟಿತು.

REG NO. M 3937

'ವಂದೇಮಾತರಂ'

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10–0–0
ಪೋಷಕರು, 5–0–0

ಸಂಪಾದಕ.— ಟಿ. ಪಿ. ಕೇಶವರಾವ್.

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2–0–0
ಬಳ್ಳಾರಿಯವರಿಗೆ, 1–8–0

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ ಬಳ್ಳಾರಿ, ಜನವರಿ 21 ನೇ ಶನಿವಾರ 1939. ಪ್ರತಿ ೩೭

ಮದ್ರಾಸಿನಲ್ಲಿ ಹಿಂದೀ ಕಲಿಯಲು ಸೌಕರ್ಯ

ಮದರಾಸ್ ಜ ೧೨

ದಕ್ಷಿಣಭಾರತ ಹಿಂದೀಪ್ರಚಾರ ಸಂಘದ ಕಾರ್ಯದರ್ಶಿಗಳು ಈರೀತಿ ಬರೆದಿರುತ್ತಾರೆ:—

"ಹಿಂದೀಪ್ರಚಾರಕರ ಶಿಕ್ಷಣ ತರಗತಿಗಳಜೊತೆಗೆ ಫೆಬ್ರವರಿ ೧ನೇ ತಾ॥ ನಿಂದ ರಾಷ್ಟ್ರಭಾಷಾ ವಿಶಾರದ ತರಗತಿಯೊಂದನ್ನು ಸಹ ಮದರಾಸಿನಲ್ಲಿ ತೆರೆಯಬೇಕೆಂಬ ಸಂಕಲ್ಪಿಸಲಾಗಿದೆ. ಆ ತರಗತಿಗೆ ೨೦ ಮಂದಿಗಳನ್ನು ಸೇರಿಸಿಕೊಳ್ಳಲಾಗುವದು. ೧೯೩೯ನೇ ವರ್ಷದ ನವಂಬರ್ ತಿಂಗಳಲ್ಲಿನತೆಯಲಿರುವ ರಾಷ್ಟ್ರ ಭಾಷಾವಿಶಾರದ ಪರೀಕ್ಷೆಗೆಳುಳಿತುಕೊಳ್ಳಲು ಅನುಕೂಲಿಸುವಂತೆ ಶಿಕ್ಷಣಕೊಡಲಾಗುವುದು. ಪ್ರತಿಯೊಬ್ಬರಿಗೂ ತಿಂಗಳಿಗೆ ೧೫ ರೂ. ವೆಚ್ಚವಾಗುವ ನಿರೀಕ್ಷಣೆ ಇದೆ. (ಊಟವಸತಿ ಸೇರಿ) ತಿಂಗಳಿಗೆ ೭-೮ ರೂಗಳಂತೆ ೧೦ ಮಂದಿಗೆ ವಿದ್ಯಾರ್ಥಿವೇತನಗಳನ್ನು ಕೊಡುವ ಆಲೋಚನೆಇದೆ. ಈತರಗತಿಗೆ ಸೇರಲು ಇಷ್ಟವಿರುವವರಿಗೆ ದಕ್ಷಿಣಭಾರತದ ಒಂದು ಭಾಷೆಯು ಚೆನ್ನಾಗಿ ಬರಬೇಕು. ರಾಷ್ಟ್ರಭಾಷಾ ಪರೀಕ್ಷೆಗೆ ಕುಳಿತುಕೊಳ್ಳುವ ಅರ್ಹತೆ ಇರಬೇಕು. ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಗಳಿಂದ ತಿಳಿದುಕೊಳ್ಳಬಹುದು

ಕಾರ್ಯದರ್ಶಿ
ದ ಭಾ. ಹಿಂದೀಪ್ರಚಾರಸಭೆ
ತ್ಯಾಗರಾಜ ನಗರ, ಮದರಾಸು.

ರಾಷ್ಟ್ರಭಾಷೆಯಾದ
ಹಿಂದಿಯನ್ನು ಕಲಿಯಿರಿ.

ಹಿಂದೂಸ್ತಾನದಲ್ಲಿ ಎಲ್ಲಿಗಾದರೂ ತಿಳಿಯುವಭಾಷೆ

ಹಿಂದೀ ಬಾಲಬೋಧಿನಿ (ಕನ್ನಡ-ತೆಲುಗು)	0 2 6
,, ಪಹಲೀ ಪುಸ್ತಕ (ಅರ್ಥ ಸಹಿತ)	0 5 0
,, ಮಾಸರಿ ಪುಸ್ತಕ (,,)	0 6 0
,, ನೋತೆಯೋಂಕಾಹಾರ	0 6 0
,, ಅನುವಾದ I (ಕನ್ನಡ-ತೆಲುಗು	0 4 0
,, ಬಾತ್‌ಚೀತ್	0 3 0
Hindi English self Instructor	1 0 0
Guide to Hindusthani	1 0 0
ಹಿಂದೀ-ತೆಲುಗು ಯೂ-ಕನ್ನಡ-ಸ್ವಬೋಧಿನಿ	0 12 0

ಅಡ್ವಾನ್ಸಿಲ್ಲದೆ ಪುಸ್ತಕಗಳನ್ನು ವಿ. ಪಿ. ಮೇಲೆ ಕಳುಹಿಸಲಾಗುವುದಿಲ್ಲ ಪರೀಕ್ಷೆಗಳಿಗೆ ಕೂಡಬೇಕೆನ್ನುವವರು ಸಮಕ್ಷಮ ಬಂದು ಎಲ್ಲಾ ವಿಷಯಗಳನ್ನು ತಿಳಿಯಬೇಕು. ಬೇಕಾದರೆ ನಮ್ಮನೆಗೆ ಬಂದು ಹಿಂದೀ ಶಿಕ್ಷಣ ಕೊಡಲಿಕ್ಕೆ ಏರ್ಪಡಿಸಲಾಗುತ್ತದು.

ಕಾರ್ಯದರ್ಶಿ
ಜಿಲ್ಲಾ ಹಿಂದೀ ಪ್ರೇಮೀ ಮಂಡಲ
ಬ್ರಾಹ್ಮಣ ಬೀದಿ. ಬಳ್ಳಾರಿ

ದುಃಖ ಸೂಚಕ ನಿರ್ಣಯ

ಅನಂತಪುರದ ಜಿಲ್ಲೆಯ ಪ್ರಮುಖ ಹರಿಜನ ಕಾರ್ಯಕರ್ತರಾಗಿದ್ದ ಶ್ರೀ ಫಟ್ಟು ವೆಂಕಟರಮಣಪ್ಪ, ಆಂಧ್ರರಾಷ್ಟ್ರ ಹರಿಜನ ಸೇವಕ ಸಂಘಾಧ್ಯಕ್ಷರಾಗಿದ್ದ ಶ್ರೀ ನಾಗೇಶ್ವರರಾವ್ ಪಂತುಲು, ಮದ್ರಾಸ್ ಮಂತ್ರಿವರ್ಗದಲ್ಲಿನ ಶ್ರೀ ಕೆ. ರಾಮನ್ ಮೇನನ್ ಇವರ ನಿಧನಕ್ಕೆ ಈ ಸಭೆಯು ತನ್ನ ಸಂತಾಪವನ್ನು ಸೂಚಿಸುತ್ತಾ ಮೃತರ ಆತ್ಮಕ್ಕೆ ಶಾಂತಿಯಿರಲೆಂದು ಪ್ರಾರ್ಥಿಸುತ್ತದೆ

ಬಳ್ಳಾರಿ ಜಿಲ್ಲಾ ಆಲೂರಿನಲ್ಲಿ ನಡೆದ ಜಿಲ್ಲಾ ಹರಿಜನ ಸಭೆಯಲ್ಲಿ ಪಾಸಾದ ನಿರ್ಣಯಗಳು.

ವಿದ್ಯಾವಿಷಯ—

೧. ಹರಿಜನ ವಿದ್ಯಾರ್ಥಿಗಳಿಗೆ ಎಲಿಮೆಂಟರಿ ಸ್ಕೂಲು, ಕಾಲೇಜುಗಳಲ್ಲಿ ಮಾಸಿಕ ರುಸುಂ ಇಲ್ಲದೆ ವಿದ್ಯಾಭ್ಯಾಸ ಶಿಕ್ಷಣವು ಕೊಡಲ್ಪಡಲು ಸರ್ಕಾರವ ಅಪ್ಪಣೆಯುಂಟು. ಆದರೆ ಮಾಧ್ಯಮಿಕ ಪಾಠಶಾಲೆಗಳಲ್ಲಿಯೂ ಕೂಡ ಈ ಅನುಕೂಲವನ್ನು ಕಲ್ಪಿಸಲು ಸರ್ಕಾರಕ್ಕೆ ಬೇಡಿಕೆ.

೨. ಹಾಸ್ಟಲ್‌ಗಳಲ್ಲಿರುವ ಹರಿಜನ ವಿದ್ಯಾರ್ಥಿಗಳಿಗೆ ಮಾಸಿಕ ೮ ಪ್ರಕಾರ, ೧೨ ತಿಂಗಳವರೆಗೂ ಕೊಡಬೇಕು. ವಯಸ್ಸಿನ ಪರಿಮಿತಿ ಇರಬಾರದು.

೩. ಶಿಕ್ಷಣ ಸಂಸ್ಥೆಗಳಲ್ಲಿರುವ ಎಲ್ಲಾ ಹರಿಜನ ಬಾಲಕರಿಗೆ ವಿದ್ಯಾರ್ಥಿ ವೇತನಗಳು ದೊರೆಯಬೇಕು.

೪. ಪಾರ್ಥಿವ ಗ್ರಾಮೋದ್ಯೋಗ ಶಿಕ್ಷಣಕ್ಕೆ ಹರಿಜನ ಬಾಲಕರನ್ನು ಕಳುಹಿಸಬೇಕು.

೫ ಹರಿಜನರಿಗೆ ಎಲ್ಲಾ ಸೌಕರ್ಯವಿರುವ, ಹರಿಜನ ಬಾಲಕ ಸಂಖ್ಯೆ ಹೆಚ್ಚಾಗಿರುವ **ಆಲೂರು ಮಿಡಲ್ ಸ್ಕೂಲನ್ನು** ಹೈಸ್ಕೂಲಾಗಿ ಮಾಡಬೇಕು.

೬ ಹಾಲಿ ಉಪಾಧ್ಯಾಯ **ವೃತ್ತಿ**ಯಲ್ಲಿರುವ ಹರಿಜನರಿಗೆ **ಫೈಯರ್‌ಸ್ಟ್ರೇಡ್ ಟ್ರೇನಿಂಗ್** ಪಾಸಾಗಲೇಬೇಕೆಂಬ ನಿರ್ಬಂಧವನ್ನು ಹಾಕಬಾರದು.

ಆರ್ಥಿಕ:-

೭. ಕ್ಷಾಮ ಬಾಧೆಯಿಂದ ಪೀಡಿತರಾದ ಈ ಜಿಲ್ಲೆಯವರಿಗೆ ಅತ್ಯಾವಶ್ಯಕವಾದ **ತುಂಗಭದ್ರಾ ಪ್ರಾಜೆಕ್ಟಿನ** ಸಂಬಂಧ ಸರ್ಕಾರವರು ಇಲ್ಲಿಯವರೆಗೆ ಮಾಡಿದ ಪ್ರಯತ್ನಗಳನ್ನು ಅಭಿನಂದಿಸುತ್ತಾ, ತೀಳ್ರವಾಗಿ ತುಂಗಭದ್ರಾ ಯೋಜನೆಯನ್ನು ನಿರ್ಮಿಸಬೇಕೆಂದು ಈ ಸಭೆಯವರು ಕೋರುತ್ತಾರೆ.

೮. ಮದ್ರಾಸ್ ಸರ್ಕಾರದವರು ರೈತರ ಹಿತಕ್ಕಾಗಿ ಮಾಡಿದ ಋಣವಿಮೋಚನ ಕಾಯ್ದೆಗಾಗಿ ಅಭಿನಂದಿಸುತ್ತಾ ಇದನ್ನು ತೀರಿಸಲು ಕಾತುಗಳನ್ನು ದಯಪಾಲಿಸಲು ಸವರಣೆಗಳನ್ನು ಮಾಡಲು ಕೋರಿಕೆ.

೯. ಋಣಬಾಧೆಯುಳ್ಳ ರೈತರಿಗೆ ಸರ್ಕಾರದವರು ಸಾಲ ಕೊಟ್ಟು ಅವರನ್ನು ಋಣವಿಮುಕ್ತರನ್ನಾಗಿ ಮಾಡಲು ಕೋರಿಕೆ.

೧೦. ಸರ್ಕಾರದವರು ಇದುವರೆಗೆ ಕೊಟ್ಟ ತಕಾವಿ ಸಾಲಗಳನ್ನು ಮಾಫು ಮಾಡಲು ಕೋರಿಕೆ.

೧೧. ಈಗಿರುವ ಭೂಮಿಶಿಸ್ತನ್ನು ಕಡಿಮೆ ಮಾಡಬೇಕು.

೧೨. ಪೊರಂಬೋಕು ಭೂಮಿಗಳನ್ನು ಹರಿಜನರಿಗೆ ಯಾವ ಅಕ್ಷೇಪಣೆಗಳೂ ಇಲ್ಲದೆ ಕಟ್ಟಾಕ್ಕೆ ಕೊಡಬೇಕೆಂದು ಕೋರಿಕೆ.

೧೩. ಜನಸಂಖ್ಯೆಗನುಗುಣವಾಗಿ ಹರಿಜನರಿಗೆ ಎಲ್ಲಾ ಇಲಾಖೆಗಳಲ್ಲಿ ಕೆಲಸ ಕೊಡಬೇಕು. ನಿರುದ್ಯೋಗಿಗಳಿಗೆ ಮೊದಲು ಕೆಲಸ ದೊರೆಯಬೇಕು.

ದೇವಾಲಯ ಪ್ರವೇಶ:-

೧೪. ಮಲಬಾರು ಜಿಲ್ಲಾ ದೇವಾಲಯ ಪ್ರವೇಶ ಕಾಯ್ದೆಯನ್ನು ಪಾಸುಮಾಡಿದ್ದಕ್ಕೆ ಈ ಸಭೆಯವರು ಸರ್ಕಾರದವರನ್ನು ಅಭಿನಂದಿಸುತ್ತಾ ಆಂಧ್ರಾ ಕಾಯ್ದೆಯನ್ನು ಬಳ್ಳಾರಿ ಜಿಲ್ಲೆಗೆ ಕೂಡ ಅನ್ವಯಿಸುವಂತೆ ಮಾಡಲು ಕೋರಿಕೆ.

ಮನೆ ಕಟ್ಟಿಕೊಳ್ಳಲು ಜಾಗಾ:-

೧೫. ಸರ್ಕಾರದವರು ತಾವು ಸ್ವಾಧೀನಪಡಿಸಿಕೊಂಡ ಪ್ರದೇಶಗಳ ಅರ್ಧ ಬೆಲೆಯನ್ನು ಕೊಡುತ್ತಾರೆ. ಮಿಕ್ಕ ಅರ್ಧವನ್ನು ಹರಿಜನರು ಕೊಡಬೇಕು. ಹರಿಜನರು ಬಡವರಿರುವ ಕಾರಣ ಪೂರಾ ಜಾಗವನ್ನೇ ಕೊಡಲು ಕೋರಿಕೆ.

ನೀರಿನ ವಸತಿ:-

೧೬. ಈ ಜಿಲ್ಲೆಯಲ್ಲಿ ೧೫ ಅಂಗುಲಕ್ಕಿಂತ ಹೆಚ್ಚಿನ ಮಳೆ ಇಲ್ಲ. ಅನೇಕ ಗ್ರಾಮಗಳಲ್ಲಿ ನೀರಿನ ಕೊರತೆಯುಂಟು. ಸರ್ಕಾರವರು ಭಾವಿಗಳಾಗಿ ಕೊಡುವ ಗ್ರಾಂಟು ಹೆಚ್ಚಿಸಿ, ಎಲ್ಲಾ ಊರುಗಳಲ್ಲಿಯೂ, ಹರಿಜನರಿಗಿರುವ ನೀರಿನ ಕೊರತೆಯನ್ನು ಹೋಗಲಾಡಿಸಬೇಕು

ಮದ್ಯನಿಷೇಧ:-

೧೭ ಮದ್ಯನಿಷೇಧ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಸರ್ಕಾರದವರನ್ನು ಅಭಿನಂದಿಸುತ್ತಾ, ಸದರಿ ಕಾಯ್ದೆಯನ್ನು ಬಳ್ಳಾರಿ ಜಿಲ್ಲೆಯಲ್ಲಿಯೂ ಬರುವ ಅಕ್ಟೋಬರ ತಿಂಗಳಿಂದ ಆಚರಣೆಗೆ ತರಲು ಹರಿಜನರಿಗೆ ಮಹೋಪಕಾರವನ್ನು ಮಾಡಲು ಕೋರಿಕೆ.

ಅಂಬಾ ಭವನ ಕಾಫೀ ಕ್ಲಬ್ (ರಿಜಿಸ್ಟರ್ಡ್)

ಮತ್ತು

ಶಾಖೆ:— **ಊಟದ - ಹೋಟೆಲ್**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ . ಬೆಳಕು ಸಹಿತ ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕ್ಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಟರ್ಸು— **ಶಿ. ಕನ್ನಯ್ಯ, ಬಿಜ್. ಕರಿಬಸಪ್ಪ.**

PRABHAKAR SNOW

ಪ್ರಭಾಕರ ಸ್ನೋ

ಮುಖದ ಕಾಂತಿ, ವರ್ಚಸ್ಸು ಗಳಿಗೂ, ಚರ್ಮದ ಮೃದುತ್ವಕ್ಕೂ ಉಪಯೋಗಿಸಿರಿ. ಸ್ವದೇಶಿ ಸ್ನೋ ಗಳಿಗೆ ಪ್ರೋತ್ಸಾಹ ಕೊಡಿರಿ.

K.V. & Sons, BELLARY.

CONGRESS BULLETIN
ಕಾಂಗ್ರೆಸ್ ಬುಲೆಟಿನ್
ಸಂಯುಕ್ತ-ಕರ್ನಾಟಕದಿಂದ

ಶನಿವಾರ, ಜನವರಿ 21, 1939

ಬಳ್ಳಾರಿ ಜಿಲ್ಲೆಯಲ್ಲಿ
ಕಾಂಗ್ರೆಸ್ ಸಮಿತಿಗಳ ಚುನಾವಣೆ

ಬಳ್ಳಾರಿ ಜಿಲ್ಲೆಯಲ್ಲಿ ತಾಲೂಕಾ ಕಾಂಗ್ರೆಸ್ ಕಮಿಟಿಗಳ ಚುನಾವಣೆಯು 29ನೇ ತಾ॥ ವಳಗಾಗಿ ನಡೆಯಬೇಕೆಂದು ಜಿ. ಕಾಂ. ಕಾರ್ಯದರ್ಶಿಗಳ ಅಪ್ಪಣೆಯಾಗಿದೆ. ಆ ಪ್ರಕಾರ ಜಿಲ್ಲೆಯ ವಿವಿಧ ಭಾಗಗಳಲ್ಲಿ ಚುನಾವಣೆಗಳು ನಡೆಯಬೇಕಾಗಿವೆ. ಕಾಂಗ್ರೆಸ್ ಸಂಸ್ಥೆಯು ತನ್ನ ಶಿಸ್ತು, ತತ್ವನಿಷ್ಠೆ ಮತ್ತು ಕಾರ್ಯಕಲಾಪಗಳಲ್ಲಿ ಶುದ್ಧತೆಯ ಪಾಲನೆಯಿಂದ ಪ್ರಪಂಚದಲ್ಲೇ ಗೌರವವನ್ನು ಸಂಪಾದಿಸಿದೆ. ಪ್ರತಿಯೊಬ್ಬ ಕಾಂಗ್ರೆಸ್ ಅಧಿಕಾರಿಯೂ ತನ್ನ ವ್ಯಕ್ತಿತ್ವವನ್ನು ದೂರವಿಟ್ಟು ಸಮಿತಿಯ ಮೇಲಧಿಕಾರಿಗಳ ನಿರ್ಣಯವನ್ನು ಪಾಲಿಸಬೇಕಾದುದು ಅಗತ್ಯ ಕರ್ತವ್ಯವಾಗಿದೆ. ಉದಾಹರಣಾರ್ಥವಾಗಿ ಕಾಂಗ್ರೆಸ್ ಅಧಿಕಾರವರ್ಗದಲ್ಲಿರುವ ಸದಸ್ಯನು ಸದಾ ಸಂಪೂರ್ಣ ಖಾದಿಧಾರಿ ಇರಬೇಕೆಂದು ನಿಯಮವಿದೆ. ಬಳ್ಳಾರಿಯಲ್ಲಿ ನಡೆಸುವ ಜಿಲ್ಲಾ ಮತ್ತು ತಾಲೂಕು ಕಾಂಗ್ರೆಸ್ ಸಮಿತೀ ಅಧಿಕಾರೀ ವರ್ಗಕ್ಕೆ ಸಂಬಂಧಿಸಿದ ಕೆಲ ಸದಸ್ಯರು ಈ ನಿಯಮವನ್ನು ಪಾಲಿಸದಿದ್ದುದು ದುಃಖದಾಯಕವಾಗಿದೆ. ಜಿಲ್ಲಾ ಮತ್ತು ತಾಲೂಕು ಕಾಂಗ್ರೆಸ್ ಕಮೀಟಿಗಳಲ್ಲಿ ಸರ್ವಾನುಮತದಿಂದ ಪಾಸಾದ ನಿರ್ಣಯವನ್ನು ಆಚರಣೆಗೆ ತರದೆ ನಿರ್ಲಕ್ಷಿಸಿದುದೂ ಕೂಡ ಅಪ್ಪೇ ವಿಷಾದಕರವಾಗಿದೆ. ಅಭಿಪ್ರಾಯ ಭೇದಗಳಿರಬಹುದು. ಪ್ರಾಂತೀಯ ಪ್ರಶ್ನೆಗೆ ಕುಂದಾಗಬಹುದು. ಪ್ರತಿಷ್ಠೆಗೆ ಅಗೌರವವಿರಬಹುದು ಆದನ್ನು ಪುನರ್ವಿಮರ್ಶೆಗೆಡಿಸಲು ಪ್ರಯತ್ನಿಸಬೇಕಾಗಲಿ, ಸಮಿತಿಗಳ ನಿರ್ಣಯವನ್ನು ಧಿಕ್ಕರಿಸುವುದು ಶುಭಸೂಚನೆಯಲ್ಲ, ಇದರಿಂದ ಸಾರ್ವಜನಿಕರಿಗೆ ನಿಷ್ಪಕ್ಷಪಾತ ದೃಷ್ಟಿಯು ವ್ಯಕ್ತವಾಗುವುದಿಲ್ಲ. ವೃಥಾಕ್ಲೇಶಗಳಿಗೂ, ಅಂತಃಕಲಹಕ್ಕೂ ಕಾರಣವಾಗುತ್ತದೆ. ಈ ಕಾರಣ ಅಧಿಕಾರವರ್ಗದಲ್ಲಿರುವವರು ತಾವು ಕಾಂಗ್ರೆಸ್ಸಿನ ಸೇವಕರೆಂಬುದನ್ನು ಮರೆಯಬಾರದು ತಮ್ಮ ಸ್ವಂತ ತತ್ವಗಳನ್ನೂ, ಅಭಿಪ್ರಾಯಗಳನ್ನೂ ಸೋದರ ಸದಸ್ಯರ ಮೇಲೆ ಹೇರಬಾರದು. ಇಡೀ ಭರತಖಂಡದ ವತ್ತು ಸ್ವಾತಂತ್ರ್ಯ ಸಂಗ್ರಾಮದ ಮಹತ್ತಾದ ಪ್ರಶ್ನೆಯು ನಮ್ಮ ಮುಂದಿರುವಾಗ ವ್ಯಕ್ತಿತ್ವ ಮತ್ತು ಪ್ರಾಂತೀಯತೆಯ ಸಂಕುಚಿತ ಬುದ್ಧಿಯನ್ನು ದೂರವಿಟ್ಟು, ದೇಶಹಿತಕ್ಕೇ ಸರ್ವಾರ್ಪಣ ಮಾಡುವ ತ್ಯಾಗ ಮತ್ತು ಸೇವಾ ಭಾವನೆಗಳಿಗೆ ಸ್ಥಾನವೀಯಬೇಕು.

ಈ ಕಾರಣ ಸದಸ್ಯರು ನುರಿತಂಥ, ನಿಷ್ಪಕ್ಷಪಾತೀ ಜನರನ್ನು ಕಾಂಗ್ರೆಸ್ ಅಧಿಕಾರೀ ವರ್ಗದಲ್ಲಾರಿಸಲು ನಮ್ಮ ಬೇಡಿಕೆ.

ಬಳ್ಳಾರಿ ಸಮಾಚಾರಗಳು.

15ನೇ ತಾ॥ ಹಿಂದೀ ಪ್ರೇಮೀ ಮಂಡಲದ ಸಭೆಯು ಸೇರಿ ಈ ತಿಂಗಳ 31ನೇ ತಾ॥ ಹಿಂದೀ ಪರೀಕ್ಷೆಗಳಲ್ಲಿ ಪಾಸಾದವರಿಗೆ ಪ್ರಮಾಣ ಪತ್ರಗಳನ್ನು ಕೊಡಬೇಕಾದ ಉತ್ಸವವನ್ನಿಟ್ಟುಕೊಳ್ಳಬೇಕೆಂದು ನಿಶ್ಚಯಿಸಿದರು.

28ನೇ ತಾ॥ ಕಾಸ್ಮಾಪಾಲಿಟನ್ ಕ್ಲಬ್‌ದ ವಾರ್ಷಿಕೋತ್ಸವವಿದೆ. ಆ ದಿನ ವಾರ್ಷಿಕವರದಿ ಲೆಕ್ಕಗಳು ಆಫೀಸ ಲ್ಪಟ್ಟು ಅಧಿಕಾರೀವರ್ಗದ ಚುನಾವಣೆ ಯಾಗಲಿದೆ.

25ನೇ ತಾ॥ ಬಳ್ಳಾರಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಸಾಂ. 6 ಘಂಟೆಗೆ ಅಗಡಿ ಮರೆಪ್ಪ ಸಿದ್ದಪ್ಪನವರ ಕಲ್ಯಾಣ ಮಂದಿರದಲ್ಲಿ ಕೂಡಿ ವಾರ್ಷಿಕವರದಿ ಲೆಕ್ಕ ಪತ್ರಗಳ ವಿಮರ್ಶೆ, ಕಮಿಟಿಗೆ ನೂತನ ಸಭಾಸದ ಅಧಿಕಾರೀ ವರ್ಗದ ಆಯ್ಕೆ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಸದಸ್ಯರನ್ನು ಆರಿಸುವುದರಲ್ಲಿ ಬರುವುದು. ಎಲ್ಲಾ ಕಾಂಗ್ರೆಸ್ ಸದಸ್ಯರೂ ಒರಲು ಕಾರ್ಯದರ್ಶಿಗಳು ಕೋರುತ್ತಾರೆ.

ಅಧಿಕಾರ ಸ್ಥಾನಗಳನ್ನಪೇಕ್ಷಿಸುವವರು ಸದಾ ಸಂಪೂರ್ಣವಾಗಿ ಖಾದಿಧಾರಿಗಳಾಗಿರಬೇಕು.

ಬಡವರಿಗೂ, ಭಾಗ್ಯವಂತರಿಗೂ - ವಿಮೆಮಾಡಲು
ಹೆಚ್ಚಿನ ಸೌಕರ್ಯಗಳುಂಟು.
ಪದ್ಧತಿಗಳಲ್ಲಿ ನಾವೀನ್ಯತೆ ಸುಲಭದರದ ಕಂತುಗಳವಿಶೇಷತೆ.
ಯುಳ್ಳ

ಅತ್ಯುತ್ತಮ ಸಂಸ್ಥೆ
ದಿ
ಏಶಿಯನ್ ಅಶೂರೆನ್ಸ್ ಕಂಪನಿ,
ಲಿಮಿಟೆಡ್.
[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]
ಹೆಡ್ ಆಫೀಸ್– ಬಾಲಾರ್ಡ್ ಎಸ್ಟೇಟ್ ಫ್ರೋರ್ಟ್, ಮುಂಬೈ.

ಆಪಾಯ ವದಗಿದ ಕಾಲದಲ್ಲಿ, ಸಂಪಾದಿಸಲಾಗದ ಪರಿಸ್ಥಿತಿಯಲ್ಲಿ, ವೃದ್ಧಾಪ್ಯದಲ್ಲಿ ನಿಮಗೆ ಸಹಾಯ ಬೇಕಲ್ಲವೇ? ಹಾಗಾದರೆ, ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ 'ಪಾಲಿಸಿ'ಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆ ಪಡಬಹುದುದಾದ, ಬಲವತ್ತರವಾದ ಆರ್ಥಿಕ ಭದ್ರತೆಯುಳ್ಳ ವಿಮಾಸಂಸ್ಥೆ. ವಿವರಗಳಿಗೆ ಬರೆಯಿರಿ.

ಬ್ಯಾಂಕ್ ರೋಡ್ ಬೀದಿ
ಬಳ್ಳಾರಿ.

ಎ. ಪಾರ್ಥಸಾರಥಿ, ಬಿ. ಎ.
ಚೀಫ್-ಅಗ್ರಿಮೆಂಟ್

PUBLIC DEBT OF INDIA.

BY

J. C. KUMARAPPA.

I INTRODUCTORY

In private finance an individual is expected to keep within his income which he acquires by means of his economic activity. His expenditure, normally, follows his capacity to earn. If he spends, ordinarily more than his earnings by borrowing the excess he will end up in a bankruptcy court. If he spends less than his income he accumulates purchasing power which we call capital, which may be used as a reserve or lent for further production, In both cases, where the income is not exactly equal to the expenditure, a debt arises, - in the case of borrowing, it is a debt and in the case of lending it is a credit. We notice that in private finance, income determines the expenditure and the debt.

On the other hand, in public finance, i. e. the finances of a State, the determining factor, within limits, is not the income but the expenditure So that, if we wish to satisfy ourselves that the debts of a State are properly incurred, we have to scrutinise the various items ofexpenditure to see that each item is properly chargea ble against the revenue of the country and that there is no extravagance. Then we should examine the taxable capacity of the citizen and see if the needed amount cannot be raised by taxation. After such investigation if we find that all items of expenditure are in the interests of the country aud are properly chargeable and if the ability of the citizen to pay any further taxes is nil then debts incurred under such conditions are fully warranted

Unlike a private individual, the State first decides what are the expenses it has to incur for administration and for the nation-building programme for the year. Then it raises the needed funds compulsorily by ordering the citizens to contribute towards the maintenance of the State by taxing them. Thus, in public finance income or revenue is raised to meet the expenditure.

It is not always possible to meet the expenditure out of revenue. Often the State has to incur expenses the benefit of which will only accrue to the public in the years to come. In such cases, it is obviously not fair, to ask the citizen of to-day to pay for the benefits of the future in a lump sum. It may be too heavy a burden on the present day production which may be affected adversely. Under such circumstances, the State may borrow the money needed now and pay it off in future years out of income. Again, there may be sudden emergencies. to meet which it may not be possible to depend upon taxation. The funds may be required immediately - as in the case of a war, famine or pestilence. In such emergencies the State has to resort to borrowing.

In the first case, where the effect is to spread the taxation over the years which receive the benefit and where the expenditure is incurred for developmental purposes to aid the productive capacity of the people and brings in a return on the capital sunk, it is called a 'productive debt'.

In the second case, where the debt is raised to meet an urgent expenditure which will not necessarily increase productivity it is termed an 'unproductive debt' [To be continued]

ಸ್ಪೇನ್ ದೇಶದ ದಂಗೆಕೋರರು ಟರಗೋನ್ ಮತ್ತು ರೂಸ್ ನಗರಗಳನ್ನು ಹಿಡಿದಿರುವರು. ಸ್ಪೇನಿನ ಅರ್ಧಭಾಗ ವು ಕ್ರೈಸವಾದಂತಿದೆ.

ಆಫ್ರಿಕಾ ಖಂಡದ ಫ್ರೆಂಚ್ ಮತ್ತು ಬ್ರಿಟಿಶ ವಸಾಹುತ ಗಳ ಗಡಿಗಳಲ್ಲಿ ಇಟಲೀ ಸೈನಿಕರು ಬಂದು ಸೇರುತ್ತಿದ್ದಾರೆ.

GOLDEN JUBILEE CELEBRATIONS
OF
BOARD HIGH SCHOOL HARAPANAHALLI.
ಹರಪನಹಳ್ಳಿ ಬೋರ್ಡು ಹೈಸ್ಕೂಲಿನ ಸುವರ್ಣ ಮಹೋತ್ಸವ

12-1-39ನೇ ತಾ॥ ಹೊಸಪೇಟೆ ನಗರದಲ್ಲಿ ಹರಪನಹಳ್ಳಿ ಹೈಸ್ಕೂಲಿನ ಹಿಂದಿನ ವಿದ್ಯಾರ್ಥಿಗಳ ಸಭೆ ನೆರೆದು ಶಾಲೆಯ ಸುವರ್ಣ ಮಹೋತ್ಸವ ಮತ್ತು ಬಡಹುಡುಗರ ನಿಧಿ [Poor boys' fund] ಯ ರಜತಮಹೋತ್ಸವಗಳ ಏರ್ಪಾಟಿನ ಕುರಿತು ಚರ್ಚೆಯಾಯಿತು.

ರೂ. 2000 ಗಳನ್ನು ಸಂಗ್ರಹಿಸಲು ನಿಶ್ಚಯವಾಗಿ ಸಂಗ್ರಹವಾದ ನಂತರ ಸ್ಮಾರಕವ ಆಲೋಚನೆ ಮಾಡಬೇಕೆಂದು ನಿಶ್ಚಿತವಾಯಿತು. ಹಿಂದಿನ ವಿದ್ಯಾರ್ಥಿಗಳಾಗಿದ್ದು ಈಗ ವಕೀಲರಾಗಿರುವವರು 25 ದೇಣಿಗೆಯಿಂದ ಪಬ್ಬಯು ಪ್ರಾರಂಭವಾಗಿ ಹೊಸಪೇಟೆಯಲ್ಲಿನ ಸಂಗ್ರಹಕಾರ್ಯವು ಶ್ರೀ ಸ್ವಾಮಿರಾಯಾಚಾರ್ಯರಿಗೆ ವಪ್ಪಿಸಲ್ಪಟ್ಟಿತು. ಸ್ಥಳ, ಶಾಲೆ ಉಪಾಧ್ಯಾಯ, ಮುಖ್ಯೋಪಾಧ್ಯಾಯ, ವಿದ್ಯಾರ್ಥಿ ಇವರೆಲ್ಲರ ಸಮಗ್ರ ಚರಿತ್ರೆಯನ್ನು ಸಂಗ್ರಹಿಸಿ, ಸುಸ್ಮರಣ ರೂಪವಾದ ಒಂದು ಗ್ರಂಥನನ್ನು ರಚಿಸಲು ಶ್ರೀ ಗುರುರಾಜರಾವು ಬಿ. ತಿರುಮಲರಾವ್, ಶ್ರೀ ಎಂ. ಹೆಚ್. ಎಂ. ಸಂಜುಂಡಯ್ಯ ನವರಿಂದ ಕೂಡಿದ ಸಮಿತಿಯು ಏರ್ಪಾಟಾಯಿತು. ಉತ್ಸವವು 1939ನೇ ಮೇ ತಿಂಗಳ ಪ್ರಥಮವಾರದಲ್ಲಿ ನಡೆಯುವುದು ನಿಶ್ಚಿತವಾಗಿ ಶ್ರೀ ವಸುಪಾಲ, ಅಸಂತಾಚಾರ್ಯರವರು, ಅಧ್ಯಕ್ಷಸವದ ಸೂಚನೆ ಮಾಡಬೇಕೆಂದಾಯಿತು. ಸಂಗ್ರಹಿಸಲ್ಪಟ್ಟ ಹಣವು ಹರಪನಹಳ್ಳಿ ಸೊಸೈಟಿಯ ಸೇವಿಂಗ್ಸ್ ಬ್ಯಾಂಕ್‌ದಲ್ಲಿಡಲ್ಪಟ್ಟು ಶ್ರೀ ನಾರಾಯಣಭಟ್ಟರಿಗೆ ಹಣವ ಅಧಿಕಾರ ವಿರಬೇಕೆಂದು ತೀರ್ಮಾನವಾಯಿತು.

ವ್ಯವಸ್ಥಾಪಕ - ಸಮಿತಿ

ಹರಪನಹಳ್ಳಿ— ಶ್ರೀ ಟಿ. ಹೆಚ್. ಎಂ. ಚನವೀರಪ್ಪಯ್ಯ, ಶ್ರೀ ಸ. ಗುರುಬಸಪ್ಪ, ಡಾ. ರಾಮರಾವ್, ಐ. ವಸುಪಾಲಪ್ಪ, ಟಿ. ಯಂ. ಪಂಚಾಕ್ಷರಯ್ಯ, ಎ. ನಾರಾಯಣಭಟ್

ಹಡಗಲಿ— ಶ್ರೀ ಹೆಚ್. ಕೆ ಗುರುಬಸವರಾಜ, ಜಿ ರಾಂಭಟ್, ಟಿ. ವೆಂಕಟಪ್ಪ

ಹೊಸಪೇಟೆ— ಶ್ರೀ ಟಿ. ಯಸ್ ಕೃಷ್ಣರಾವ್, ಬಿ. ಅನಂತಾಚಾರ್ಯ, ಎಂ. ಹೆಚ್. ಎಂ. ನಂಜುಂಡಯ್ಯ ಎಂ. ತಿರುಮಲಾಚಾರ್ಯ.

ಬಳ್ಳಾರಿ— ಶ್ರೀ ಕೆ. ಗುರುರಾಜರಾವ್, ಡಿ. ಶ್ರೀಪತಿರಾವ್, ಟಿ. ಹೆಚ್. ಎಂ. ಷಡಕ್ಷರಯ್ಯ, ಎಂ. ಸೇತೂರಾವ್

ಕಾರ್ಯಕಾರಿಣೀ ಸಮಿತಿ

ಅಧ್ಯಕ್ಷ— ಶ್ರೀ ವಸುಪಾಲಪ್ಪ

ಕಾರ್ಯದರ್ಶಿ— ಶ್ರೀ ಡಾಕ್ಟರ್ ರಾಮರಾವ್ ಡಂಡಿ

ಖಜಾನ್ಚಿ— ನಾರಾಯಣಭಟ್ ಅಗ್ನಿಹೋತ್ರಿ

ಸದಸ್ಯರು— ಕೆ ಗುರುರಾಜರಾವು, ಡಿ. ಶ್ರೀಪತಿರಾವು ಬಿ. ಅನಂತಾಚಾರ್ಯ, ಎಂ. ಹೆಚ್. ಎಂ. ನಂಜುಂಡಯ್ಯ, ಜಿ. ರಾಂಭಟ್ಟ.

೧೬-೧೧-೩೯ವರೆಗೆ ಆಯ, ವ್ಯಯ

ಜಮಾ		ಖರ್ಚು	
ಸಂಗ್ರಹಿಸಲ್ಪಟ್ಟ ಹಣ	೧೧೩-೮-೦	ಟಿ. ಖ	ರೂ. ೪-೯-೦
		ಪ್ರವಾಸಕ್ಕೆ	,, ೩-೦-೦
		ಜಾಹೀರಾತು ಮುದ್ರಣ ಸ್ಟೇಷನರಿ ವಗೈರೆ	,, ೨೭-೧೧-೦
		ನಗದು ಹಣ	,, ೬೫-೭-೦
	ರೂ. ೧೧೩-೮-೦		ರೂ. ೧೧೩-೮-೦

ಪರದೇಶ

ಸ್ಯಾಲಿಸ್ಬ್ಯರಿ ದೇಶದಲ್ಲಿ ಬ್ರಿಟಿಶರು ಕ್ರೂರ ಕೃತ್ಯಗಳನ್ನು ನಡೆಸುತ್ತಲಿರುವರೆಂಬ ಪರದೇಶೀಪ್ರಚಾರದ ಸತ್ಯಾಂಶವನ್ನು ತಿಳಿಯಲು ನಿಷ್ಪಕ್ಷವಾದ ವಿಚಾರಣೆಯಾಗಬೇಕೆಂದು ಅರಬರು ಕೋರಿದ್ದಾರೆ.

ಜರ್ಮಾ ಸರ್ಕಾರದವರು ಚೀನಾ ದೇಶದ ವಿಷಯದಲ್ಲಿ ಅನುಸರಿಸುತ್ತಿರುವ ನೀತಿಯ ವಿಷಯವಾಗಿ ಕಳವಳವನ್ನು ವ್ಯಕ್ತಪಡಿಸಿ ಬ್ರಿಟಿಶ ಸರ್ಕಾರದವರುಜಪಾನ್ ಅಧಿಕಾರಿಗಳಿಗೆ ಒಂದು ಪತ್ರವನ್ನು ಬರೆದಿರುತ್ತಾರೆ.

ಬ್ರಿಟಿಶ ಮುಖ್ಯ ಮಂತ್ರಿಗಳಾದ ಛೇಂಬರಲೇನರು ಇಟಲೀ ದೇಶದ ಮುಸ್ಸೋಲಿನಿಯವರೊಡನೆ ರಾಜಕಾರಣಗಳನ್ನು ಚರ್ಚಿಸಿ 15ನೇ ತಾ॥ ಲಂಡನ್ನಿಗೆ ಬಂದರು. ಇಂಗ್ಲಂಡ್ ಇಟಲಿ ಮಾತುಕತೆಗಳ ಸಂಬಂಧ ಜಂಟಿ ಪ್ರಕಟನೆ ಹೊರಟಿದೆ.

ಬಳ್ಳಾರಿ.

ಶ್ರೀ ಮುಳಗುಂದ ರಾಮೂಶಾಸ್ತ್ರಿಗಳ ತಮ್ಮಂದಿರಾದ ದತ್ತೂ ಶಾಸ್ತ್ರಿಗಳವರು 18ನೇ ತಾ॥ ನಿಂದ ಒಂದು ವಾರದವರೆಗೆ ನಗರೇಶ್ವರ ದೇವಸ್ಥಾನದಲ್ಲಿ ಹರಿಪಥಾ ಕಾಲಕ್ಷೇಪವನ್ನು ನಡೆಸುವರು.

ಈ ವಾರ ಹರಪನಹಳ್ಳಿಯ ಶ್ರೀ ಲ. ಶ್ರೀನಿವಾಸರಾಯರು, ಗ್ರಾಮೋದ್ಧಾರದ ಮೇಲೆ ಟ್ರೇನಿಂಗ್ ಮತ್ತು ವಾರ್ತಾಲಾಪಗಳಲ್ಲಿ ಉಪನ್ಯಾಸಿಸಿದರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ವಾರ್ಷಿಕ ಸಭೆ.

ಬೆಳಗಾವಿಯಲ್ಲಿ ಕ. ಪ್ರಾಂ. ಸಾಧಾರಣ ಸಭೆಯು ಈ ತಿಂಗಳು 29ನೇ ತಾ॥ ಬೆಳಿಗ್ಗೆ 8-30 ಘಂಟೆಗೆ ಸೇರುವದು. ತ್ರಿಪುರೀ ಕಾಂಗ್ರೆಸ್ ಅಧಿವೇಶನಕ್ಕೆ ಚುನಾಯಿತರಾದ ಸದಸ್ಯರೆಲ್ಲರೂ ಬರಲು ಬಿನ್ನಹ.

ವಿಷಯಗಳು—

ಕಳೆದ ವರ್ಷದ ವರದಿ, ಲೆಕ್ಕ ಪತ್ರ ಮತ್ತು ಹೊಸವರ್ಷದ ಅಂದಾಜು ಪಟ್ಟಿ ಪ್ರಾಂತೀಕ ಕಮಿಟಿ ಅಧಿಕಾರಿವರ್ಗದವರ ಚುನಾವಣೆ, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರ ಚುನಾವಣೆ, ತ್ರಿಪುರೀ ಅಧಿವೇಶನಕ್ಕೆ ಅಧ್ಯಕ್ಷರ ಹೆಸರು ಸೂಚಿಸುವುದು ವಗೈರೆ.

ಗುದ್ಲೆಪ್ಪ ಹಳ್ಳಿಕೇರಿ
ಪ್ರ. ಕಾರ್ಯದರ್ಶಿ.

ಕ. ಪ್ರಾಂ. ಕಾಂ. ಕಮಿಟಿ.

ಸರ್ಕ್ಯುಲರ್ ನಂ. 31 ಕಾಂಗ್ರೆಸ್ ಹೌಸ್.

ಸ್ವಾತಂತ್ರ್ಯ ದಿನಾಚರಣೆ.

ಧಾರವಾಡ ಜ. 19

ಪ್ರತಿ ವರ್ಷದಂತೆ ಈ ವರ್ಷವಾದರೂ ಇದೇ 26ನೇ ತಾರೀಖಿನ ದಿವಸ ಸಂಪೂರ್ಣ ಸ್ವಾತಂತ್ರ್ಯ ದಿನವನ್ನು ಪಾಲಿಸಬೇಕು. ಕರ್ನಾಟಕದೊಳಗಿನ ಎಲ್ಲ ಕಾಂಗ್ರೆಸ್ ಕಮಿಟಿಯವರು ಮತ್ತು ಕಾರ್ಯಕರ್ತರು ತಮ್ಮ ತಮ್ಮ ಕ್ಷೇತ್ರದಲ್ಲಿಯ ಎಲ್ಲ ಊರುಗಳಲ್ಲಿ ಈ ದಿನವನ್ನು ಪಾಲಿಸಬೇಕು. ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಡಿ ಇಟ್ಟಿದ್ದರೂ ನಮಗೆ ಸಂಪೂರ್ಣ ಸ್ವಾತಂತ್ರ್ಯವು ದೊರೆತಿಲ್ಲವೆಂಬುದನ್ನು ನುರೆಯಲ್ಯರೆವು. ನಾವು ನಮ್ಮಲ್ಲಿಯ ಸ್ಥಳೀಯ ಸಣ್ಣ ಪುಟ್ಟ ಭೇದಗಳನ್ನು ಮರೆತು ನಮ್ಮ ಮುಂದೆ ಇರುವಂಥ ಸಂಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಲು ನಾವೆಲ್ಲರೂ ಸಿದ್ಧರಾಗಬೇಕು.

ಆ ದಿನದ ಬೆಳಿಗ್ಗೆ ಪ್ರಭಾತ ಫೇರಿ, ಧ್ವಜವಂದನೆ (ಅ। ಗಂಟೆಗೆ) ಸಾಯಂಕಾಲ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ಇವುಗಳನ್ನು ಜರಿಗಿಸಬೇಕು. ಸಾರ್ವಜನಿಕ ಸಭೆಗಳಲ್ಲಿ ಇದುವರೆಗೆ ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ಸಂಪಾದನೆಗಾಗಿ ಮಾಡಿದ ಕಾರ್ಯಗಳನ್ನು ತಿಳಿಸಿ ಹೇಳಬೇಕು.

ಮದರಾಸ್ ಅಸೆಂಬ್ಲಿ

ಕೂಲಿಕಾರರ ಹಿತಕ್ಕಾಗಿ ಶಾಸನ ಮಾಡಿರಿ.

ಈ ದಿನ ಮಧ್ಯಾಹ್ನ ಮದರಾಸ್ ಅಸೆಂಬ್ಲಿ ಸಭೆಯಲ್ಲಿ ಸಾರ್ವಜನಿಕ ಆರೋಗ್ಯ ರಕ್ಷಣೆ ಮಸೂದೆಯ ಮೇಲೆ ಚರ್ಚೆ ನಡೆಸುತ್ತಿದ್ದಾಗ ನಗರದ ನಾನಾ ಕೂಲಿಗಾರರ ಸಂಘಗಳ ಸುಮಾರು 1000 ಮಂದಿ ಕೆಲಸಗಾರರು ಅಸೆಂಬ್ಲಿ ಸಭೆಯ ಮುಂದೆ ಬಂದು ಪ್ರದರ್ಶನ ನಡೆಸಿದರು.

ಕೂಲಿಗಾರರ ಹಿತಕ್ಕೋಸ್ಕರ ಶಾಸನ ಮಾಡಬೇಕೆಂದು ಪ್ರಾರ್ಥಿಸುವ ನಿರ್ಣಯವು ಅನಂತರ ನಡೆದ ಸಭೆಯಲ್ಲಿ ಅನುಮೋದಿಸಲ್ಪಟ್ಟಿತು. ಅಸೆಂಬ್ಲಿ ಸಭೆಯ ಮುಂದಿರುವ ಬೇಜಿನ ಬಳಿ ಸಭೆ ಸೇರಿತ್ತು.

ಜೈಲಿನಲ್ಲಿ ಮರಣಹೊಂದಿದ ಹಿಂದೀ ವಿರೋಧೀ ಚಳವಳಿಯ ನಟರಾಜನ್ ಎಂಬುವನ ವಿಷಯದಲ್ಲಿ ಮುಖ್ಯ ಮಂತ್ರಿಗಳು ಸದಸ್ಯರ ಅನುಮಾನಗಳನ್ನು ಬಗೆಹರಿಸಿ ಅವನಿಗೆ ಭಯಂಕರ ರೋಗವಿದ್ದಿತೆಂದು ತಿಳಿಸಿದರು, ಹಾಗೆಯೇ ಹರಿಜನ ತೋಟೇ ಸ್ತ್ರೀಯನ್ನು ಪೋಲೀಸರು ಹೊಡೆದ ಆಪಾದನೆಗೆ ತಕ್ಕ ಆಧಾರಗಳಿಲ್ಲವೆಂದೂ, ಆಧಾರವಿದ್ದಿದ್ದರೆ, ತಕ್ಕ ಚರ್ಯೆ ತೆಗೆದುಕೊಳ್ಳ ಬಹುದಿತ್ತೆಂದೂ ತಿಳಿಸಿದರು.

ಅಸೆಂಬ್ಲೀ ಅಧಿವೇಶನವು ಇನ್ನೂ ಒಂದು ವಾರದನವರಿಗೆ ನಡೆಯಬಹುದಾಗಿದೆ. 27ನೇ ತಾ॥ ಕೌನ್ಸಿಲ್ ಪ್ರಾರಂಭವಾಗುವುದು.

ಸಂಸ್ಥಾನಗಳಲ್ಲಿ ಸತ್ಯಾಗ್ರಹದ ಭಯ

ಮೈಸೂರು ಸುಧಾರಣ ಸಮಿತಿಯಲ್ಲಿ ಚಂದ್ರಶೇಖರಯ್ಯ ಭೂಪಾಳಂರವರು ಕೆಲಸ ಮಾಡಲು ಕಾಂಗ್ರೆಸ್ಸಿನವರು ಒಪ್ಪುವುದಿಲ್ಲ. ಅವರು ಮೈಸೂರು ಕಾಂಗ್ರೆಸ್ಸಿಗೆ ರಾಜೀನಾಮೆ ಇತ್ತಿರುವುದೇ ಇದಕ್ಕೆ ಕಾರಣ. ಇದರಿಂದ ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ತಿಕ್ಕಾಟ ನಡೆದಿದೆ. ಸರ್ದಾರ ವಲ್ಲಭಭಾಯಿಯವರಿಗೆ ಈ ಪ್ರಶ್ನೆಯು ವಿಮರ್ಶೆಗೆ ಕೋಗಿದೆ. ಇದು ಸಮರ್ಪಕವಾಗಿ ಬಗೆಹರಿಯದಿದ್ದರೆ, ಸತ್ಯಾಗ್ರಹವು ಪ್ರಾರಂಭವಾಗಬಹುದು.

ಶ್ರೇಷ್ಠವಾದ

ಮುದ್ರಣ ಕೆಲಸ

(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ

ಬೇರೆ ಬೇರೆ ಬಣ್ಣಗಳ ಬ್ಲಾಕು ಸಮೇತ

ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ

ವಿಠಲ ಮುದ್ರಣಾಲಯಕ್ಕೆ

ಬನ್ನಿರಿ

1. ಉತ್ತಮ ಮುದ್ರಣವು ಕಲೆಯ ಹೆಗ್ಗುರುತು!
2. ಹೊತ್ತಿಗೆ ಸರಿಯಾಗಿ ದೊರೆಯುವದು ವ್ಯವಹಾರಕ್ಕೆ ಭೂಷಣ!!
3. ಕೆಲಸಗಳೆಲ್ಲ ಸಾಮಾನ್ಯ ದರದಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

—ವ್ಯವಸ್ಥಾಪಕ

ವಿಠಲ ಮುದ್ರಣಾಲಯ,

ತೇರು ಬಜಾರು ಬಳ್ಳಾರಿ.

ದಿವಾನರು ಯಾರಿದ್ದರೆ ನನಗೇನು?

ಮಹಾತ್ಮಗಾಂಧಿಯವರ ಅಭಿಪ್ರಾಯ.

ತಿರುವಾಂಕೂರಿನ ಈಗಿನ ದಿವಾನರ ವಿಚಾರದಲ್ಲಿ ತಾವೇನೂ ಆಸಕ್ತವಹಿಸಿಲ್ಲವೆಂದು ಮಹಾತ್ಮರು ಈ ವಾರದ 'ಹರಿಜನ' ಪತ್ರಿಕೆಯಲ್ಲಿ ಖಂಡಿತವಾಗಿ ತಿಳಿಸಿದ್ದಾರೆ.

ದಿವಾನರು ಮೇಲಿನ ಆಪಾದನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ತಾವು 'ಸ್ಟೇಟ್' ಕಾಂಗ್ರೆಸ್ಸಿನವರಿಗೆ ಇತ್ತ ಬುದ್ಧಿವಾದದ ವಿಚಾರವೆತ್ತಿ 'ಜವಾಬ್ದಾರಿ ಸರ್ಕಾರವನ್ನು ಅವರು ಒತ್ತಾಯಪಡಿಸುವುದಾಗಿದ್ದರೆ ಆ ಆಪಾದನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದರಲ್ಲಿ ಅರ್ಥವಿರುತ್ತಿರಲಿಲ್ಲ. ಹಾಗೆ ಮಾಡಿದ್ದರೆ ದೇಶದ ಗಮನವು ಇಬ್ಭಾಗುವಾಗುತ್ತಿತ್ತಲ್ಲದೆ, ನ್ಯಾಯಾಸ್ಥಾನದ ಮುಂದೆ ಆ ಆಪಾದನೆಗಳನ್ನು ಸ್ಥಾಪಿಸಲು ಶಕ್ತಿಯನ್ನು ವಿನಿಯೋಗಿಸಬೇಕಾಗುತ್ತಿತ್ತು. ಇದಕ್ಕೆ ಬದಲು ಜವಾಬ್ದಾರಿ ಸರ್ಕಾರವನ್ನೇ ಅವರು ಗಳಿಸಿದರೆ, ಸತ್ಯ ಮತ್ತು ಅಹಿಂಸೆಯನ್ನು ಬಿಡದೆ, ಅವರು ಐಕ್ಯಮತ್ಯದಿಂದ ದುಡಿದರೆ, ಖಂಡಿತ ದೊರೆಯುತ್ತದೆ. ಈಗಿನ ದಿವಾನರನ್ನು ಮಾತ್ರವಲ್ಲ ಎಲ್ಲ ದಿವಾನರನ್ನೂ ಹಿಮ್ಮೆಟ್ಟಿಸಲಿರಿಸಬಹುದು. ಆ ಆಪಾದನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದು ವಿವೇಕಯುತವಾದುದೆಂದು ತೋರಿ ಬಂದುದರಿಂದಲೇ "ಸ್ಟೇಟ್" ಕಾಂಗ್ರೆಸ್ಸಿನವರು ಅವುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆಯೆಂದು ತಾತ್ಕಾಲಿಕ ಅಧ್ಯಕ್ಷರ ಹೇಳಿಕೆಯಿಂದ ಹೊರಪಡುತ್ತದೆ.

'ಈಗಿನ ದಿವಾನರು ದಿವಾನ್‌ಗಿರಿಯಲ್ಲಿರಬೇಕೆಂದು ನಾನು ಬಯಸುತ್ತಿಲ್ಲವೆಂದು ನನ್ನ ಟೀಕಾಕಾರರು ತಿಳಿಯಬಲ್ಲರು. ನಾನು ದಿವಾನರೊಡನೆ ಪತ್ರವ್ಯವಹಾರ ನಡೆಸುತ್ತಿದ್ದರೆ, ನ್ಯಾಯವನ್ನು ದೊರಕಿಸಲಿಕ್ಕಾಗಿ ನಾನು ಹಾಗೆ ಮಾಡುತ್ತಿದ್ದೇನೆ ಹೊರತು ಬೇರೆಯಲ್ಲ. ನಾನು ಯಾವ ಪಕ್ಷವನ್ನೂ ವಹಿಸುವುದಿಲ್ಲ. ರಾಜಕೀಯ ದೃಷ್ಟಿಯಿಂದ ಇವರು ಈಸಾಯಿಗಳು ಇವರು ಈಸಾಯಿಗಳಲ್ಲ ಎಂಬ ಭೇದಭಾವನೆ ನನ್ನಲ್ಲಿಲ್ಲ" ಎಂದು ಮಹಾತ್ಮರು ತಿಳಿಸಿದ್ದಾರೆ.

ಜಯಪುರಕ್ಕೆ ಬದಲಾಗವೆಂದು ಶ್ರೀ ಜಮ್ನಾಲಾಲರ ಮೇಲೆ ಹಾಕಲ್ಪಟ್ಟಿರುವ ಬಹಿಷ್ಕಾರದ ವಿಚಾರವಾಗಿ ಮಹಾತ್ಮರು ಟೀಕಿಸುತ್ತ 'ಜಮ್ನಾಲಾಲರೂ ಮತ್ತು ಜೈಪುರದ ಪ್ರಜೆಗಳೂ ಇದನ್ನು ಸಂಪೂರ್ಣವಾಗಿ ಎದುರಿಸದಿದ್ದರೆ ಅವರ ಗೌರವ ಉಳಿಯುವ ಹಾಗಿಲ್ಲ. ಸತ್ಯ ಮತ್ತು ಅಹಿಂಸಾ ಧರ್ಮಕ್ಕೆನುಗುಣವಾಗಿ ಅವರು ಈ ಕಾರ್ಯ ನಡೆಸಬೇಕಾಗಿದೆ" ಎಂದು ತಿಳಿಸಿದ್ದಾರೆ.

ಸ್ವದೇಶ

ಒರಿಸ್ಸಾ ಸಂಸ್ಥಾನಗಳಲ್ಲಿ ರಾಜಕೀಯ ಚಳವಳಿಯನ್ನು ತಹಬಂದಿಯಲ್ಲಿಡಲು ಕಲಕತ್ತೆಯಿಂದ ಕಳುಹಿಸಲ್ಪಡುವ ಸೈನ್ಯವು ಕಟಕದಲ್ಲಿಯೇ ಉಳಿಯುವುದು.

ಕೊಲ್ಲಾಪುರ ಸಂಸ್ಥಾನದ 5 ಸಾವಿರ ರೈತರು ಮಹಾರಾಜರನ್ನು 15ನೇ ತಾ॥ ಕಂಡು, ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಛತ್ರಪತಿ ರಾಜರು ರೈತರನ್ನು ಸ್ವತಃ ನೋಡಿ ಅವರ ಬೇಡಿಕೆಗಳನ್ನು ವಿಚಾರಿಸುವದಾಗಿ ಆಶ್ವಾಸನವಿತ್ತರು.

ತಿರುವಾಂಕೂರಿನಲ್ಲಿ ಕಾಂಗ್ರೆಸ್ಸಿನವರು ಸತ್ಯಾಗ್ರಹವನ್ನು ನಿಲ್ಲಿಸಿದ್ದರೂ, ಅಲ್ಲಲ್ಲಿ ಕಾಂಗ್ರೆಸ್ಸಿಗರ ಸೆರೆ ಹಿಡಿಯುವುದು ಸಾಗಿದೆ. ದಬ್ಬಾಳಿಕೆಯು ಹೀಗೆಯೇ ಸಾಗಿದರೆ, ಸತ್ಯಾಗ್ರಹವನ್ನು ಹೂಡಬೇಕಾಗುವದೆಂದು ಅಧ್ಯಕ್ಷರು ತಿಳಿಸಿದ್ದಾರೆ.

ಕಾನಪುರದಲ್ಲಿ ಕೂಲಿಕಾರರು ಮತ್ತೆ ಸಂಪು ಹೂಡುವ ಲಕ್ಷಣಗಳು ತೋರಬರುತ್ತಲಿವೆ. ಗಿರಣಿ ವ್ಯವಸ್ಥಾಪಕರಿಗೆ ನೋಟೀಸು ಕೊಡಲಾಗಿದೆ.

ಜಯಪುರ ಸಂಸ್ಥಾನದಲ್ಲಿ ಜಮನಲಾಲ ಬಜಾಜರು ಅಧ್ಯಕ್ಷರಿರುವ ಪ್ರಜಾಮಂಡಲವು ಅಕ್ರಮ ಕೂಟವೆಂದು ಸಾರಲ್ಪಟ್ಟಿದೆ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುಪಾಗುವ ತಂಪು ಕನ್ನಡಕಗಳನ್ನೂ, ಸುಲಭದರದಲ್ಲಿ ವಿತರಿಸುತ್ತೇವೆ. ಗ್ಯಾರಂಟಿಯೂಡ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಅಂಡ್ ಸನ್ಸ್.
ಬೆಂಗಳೂರು ರೋಡ್ ಬಳ್ಳಾರಿ.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ.
ವೆಸ್ಟ್‌ಎಂಡ್ ವಾಚುಗಳೂ, ದೊಡ್ಡಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಶ್ರೀ ವಿಜಯ ಲಕ್ಷ್ಮಿಯವರ
ಆಪ್ತ ಕಾರ್ಯದರ್ಶಿ
ಕು. ಪದ್ಮಾವತಿಯವರ ನೇಮಕ.

ಮಡಿಕೇರಿ 16

ಕುನೂರಿ ಪದ್ಮಾವತಿ ಚಿನ್ನಪ್ಪ ಇವರು ಸಂಯುಕ್ತ ಪ್ರಾಂತದ ಶಿಕ್ಷಣ ಹಾಗು ಆರೋಗ್ಯ ಮಂತ್ರಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ ಇವರ ಆಪ್ತ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟಿರುವರು.

ಇವರು ಹಳ್ಳಿಯ ಉದ್ಯೋಗ ಹಾಗು ಸಮಾಜಶಾಸ್ತ್ರದಲ್ಲಿ ಲಂಡನ್ನ ಡಿಪ್ಲೋಮೂ ಪಡೆದವರಿರುವರು.

ಗಾಂಧಿ - ಆಗಾಖಾನ್ ಭೇಟಿ

ಬಾರ್ಡೋಲಿ 16

ನಾ. ಆಗಾಖಾನರು ನಿನ್ನೆ ಮುಂಜಾನೆ ಇಲ್ಲಿಗೆ ಬಂದೊಡನೆ ಸರ್ದಾರ ಪಟೇಲರು, ಆಚಾರ್ಯ ಕೃಪಲಾನಿಯವರು, ಶ್ರೀ ದೇವದಾಸ ಗಾಂಧಿಯವರು ಹಾಗು ಕುನೂರಿ ಮಣಿಬೇನ ಪಟೇಲ ಹಾಗು ಶ್ರೀ ಮಹದೇವ ದೇಸಾಯಿ ಇವರೆಲ್ಲರು ಸ್ಟೇಶನದಲ್ಲಿಯೇ ಅವರನ್ನು ಸ್ವಾಗತಿಸಿದರು.

ಬಳಿಕ ನಾ ಆಗಖಾನರು ಸರ್ದಾರ ಪಟೇಲರೊಂದಿಗೆ ಮಹಾತ್ಮಾಜಿಯವರ ಆಶ್ರಮಕ್ಕೆ ಹೋದಾರಿನಲ್ಲಿ ತೆರಳಿದರು. ಅಲ್ಲಿಗೆ ಹೋದೊಡನೆ ಕಾಂಗ್ರೆಸ್ ಮುಂದಾಳುಗಳೆಲ್ಲರು ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ಅಲ್ಲಿಂದ ಅವರ ವರ್ಕಿಂಗ್ ಕಮಿಟಿಯ ಸಭೆಗೆ ಹೋದರು.

ಅನಂತರ ಆಗಾಖಾನರು ಮಹಾತ್ಮಾಜಿಯವರೊಡನೆ ಸಂಭಾಷಣೆ ನಡೆಸಿದರು. ಆಗ ಸರ್ದಾರ ಪಟೇಲರೊಬ್ಬರ ಮಾತ್ರ ಅಲ್ಲಿದ್ದರು. 12-15ವರೆಗೆ ಅವರ ನಾತು ಕಥೆಗಳು ಸಾಗಿದವು. ಆಫ್ರಿಕನ್ ಶಿಷ್ಟಮಂಡಳದ ಮುಂದಾಳುಗಳಾದ ಶ್ರೀ ತಯ್ಯಬ್‌ಜಿ (ಬ್ಯಾರಿಸ್ಟರ) ಹಾಗು ಶ್ರೀ ಹುಸೇನ ಗಸಾರ ಶರೀಫ ಇವರನ್ನು ಈ ಸಭೆಗೆ 11-45ಕ್ಕೆ ಕರೆಯಿಸಲಾಯ್ತು. ಮೌ. ಆಝಾದರೂ 12 ಕ್ಕೆ ಅಲ್ಲಿಗೆ ಬಂದರು.

ಶ್ರೀ ಮಹಾದೇವ ದೇಸಾಯಿ ಹಾಗು ಶ್ರೀ ಜಮನಾಲಾಲ ಬಜಾಜರು 12-30ಕ್ಕೆ ಬಂದರು.

ನಾ. ಆಗಾಖಾನರೂ ಮಹಾತ್ಮಾಜಿಯವರೂ ಅಲ್ಪ ಸಂಖ್ಯಾಕರ ಸಮಸ್ಯೆ ಹಾಗು ಜಾತೀಯ ಐಕ್ಯವನ್ನು ಕುರಿತು ಚರ್ಚಿಸಿದರೆಂದು ತಿಳಿಯುತ್ತದೆ. ಬಳಿಕ ಆಫ್ರಿಕನ್ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯವಾಯ್ತು.

ನಾ. ಆಗಾಖಾನರು ಸುರತಕ್ಕೆ 3 ಗಂಟೆಗೆ ಸ್ಪೇಷಲ್ ಟ್ರೇನಿನಿಂದ ಹೋದರು. ಅಲ್ಲಿ ಅವರು ಹೊಸದಾಗಿ ಕಟ್ಟಲ್ಪಟ್ಟ ಜನುತ್ಖಾನಾ ಕಟ್ಟಡಗಳ ಉದ್ಘಾಟನ ಸಮಾರಂಭವನ್ನು ಜರುಗಿಸಲಿರುವರು.

ಬೀಹಾರದಲ್ಲಿ ರೈಲ್ವೆ ಅನಾಹುತ
ಅಪರಾಧಿಗಳನ್ನು ಕಂಡುಹಿಡಿದವರಿಗೆ
ರೂ. ೫೦೦೦ ಬಹುಮಾನ.

ಕಲ್ಕತ್ತೆಯಿಂದ ಡೆಹರಾಡೂನಿಗೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ರೈಲ್ವೆ ಗಾಡಿಯು 12ನೇ ತಾ|| ಕಂಬಿ ತಪ್ಪಿ ಉರುಳಿದ್ದರಿಂದ 15 ಜನ ಸತ್ತಿರುವರು. ಗಾಯಗೊಂಡ 25 ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅವರಲ್ಲಿ 7 ಮಂದಿ ಅಂತ್ಯಾವಸ್ಥೆಯಲ್ಲಿದ್ದಾರೆ. ರೈಲು ಕಂಬಿ ತಪ್ಪಿದ ಕೂಡಲೇ ಬಿಂಕಿ ಹತ್ತಿತು. ಅನೇಕ ಘಂಟೆಗಳ ಕಾಲ ಈ ಬೆಂಕಿಯನ್ನಾರಿಸಲಾಗಲಿಲ್ಲ. ಉದ್ದೇಶ ಪೂರ್ವಕವಾಗಿ ರೈಲನ್ನುರುಳಿಸಬೇಕೆಂದು ಕಂಬಿಕಿತ್ತುಹಾಗಿದ್ದೇ ರೈಲ್ವೆ ಅನಾಹುತಕ್ಕೆ ಕಾರಣವಾಗಿರಬೇಕೆಂದು ಅಧಿಕಾರಿಗಳು ವರದಿ ಮಾಡಿದ್ದಾರೆ. ಅಪರಾಧಿಗಳನ್ನು ಕಂಡುಹಿಡಿದವರಿಗೆ ರೂ. 5000 ಬಹುಮಾನ ಕೊಡಲಾಗುವದೆಂದು ರೈಲ್ವೆ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಮಿನಾಕ್ಷಿ ಭವನ ಕಾಫೀಕ್ಲಬ್
(ರಿಜಿಸ್ಟರ್ಡ್)

ಶಾಖೆಗಳು **ಕಾಫಿ ಕ್ಲಬ್ ಬೆಂಗಳೂರು ರೋಡ್**

ಊಟ ಮತ್ತು ವಸತಿಗೃಹ ಬಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

ಅಂಗ್ವೆಂಟೋ.,
ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಪುಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿ ಚಟ್ಟು ಸುಟ್ಟ ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾದವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಅಗತ್ಯವಾಗಿ ಸಂಗ್ರಹಿಸತಕ್ಕದ್ದು.

ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.

ಜೀವನ ಸುಧಾ ಫಾರ್ಮಸಿ.

ಸೋಲ ಏಜಂಟರು:—ಸರೋವರ ಬ್ರದರ್ಸ್, ಬಳ್ಳಾರಿ

ವಿಶ್ವಲ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಟಿ. ಬಿ. ಕೇಶವರಾಯರಿಂದ ಪ್ರಕಟಿಸಲ್ಪಟ್ಟಿತು.

REG NO. M 3937

'ವಂದೇಮಾತರಂ'

THE Congress Bulletin
ಕಾಂಗ್ರೆಸ್ ಬುಲೆಟಿನ್

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.

ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ:— ಟಿ. ಬಿ. ಕೇಶವರಾವ್.

ವಾರ್ಷಿಕ ಚಂದಾ

ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ ಬಳ್ಳಾರಿ, ಜನವರಿ 28 ನೇ ಶನಿವಾರ 1939. ಪ್ರತಿ ೨ಲ

ಬಳ್ಳಾರಿ ಸರ್ಕಲ್ ಕಾಂಗ್ರೆಸ್ ಕಮಿಟೀ ಚುನಾವಣೆಗಳು

27ನೇ ತಾ॥ ಸಾಯಂಕಾಲ ಅಗಡೀ ಮರೆಪ್ಪ ಶಿವ್ವಪ್ಪ ನವರ ಕಲ್ಯಾಣ ಮಂದಿರದಲ್ಲಿ ಶ್ರೀ ಭಿ-ಮರಾಯರ ಅಧ್ಯಕ್ಷತೆಯಲ್ಲಿ ಕೂಡಿ ಈ ಕೆಳಗಣ ಅಧಿಕಾರೀ ವರ್ಗದವರೂ, ಜಿಲ್ಲಾ ಕಾಂಗ್ರೆಸ್ ಸದಸ್ಯರೂ ಸರ್ವಾನುಮತವಾಗಿ ಆರಿಸಲ್ಪಟ್ಟರು.

ಅಧ್ಯಕ್ಷ— ಶ್ರೀ ಸತ್ರಸಾಲ ಭದ್ರಪ್ಪಶ್ರೇಷ್ಠಿ.

ಉಪಾಧ್ಯಕ್ಷರು — ಶ್ರೀ ಬಿ. ಯಂ ರೇವಣಸಿದ್ದಯ್ಯ.
ಶ್ರೀಮತಿ ಟಿ. ಬಿ. ಜಯಲಕ್ಷ್ಮಿದೇವಿ.

ಕಾರ್ಯದರ್ಶಿ— ಶ್ರೀ ಡಿ ಯಚ್- ವೆಂಕೋಬರಾವ್.

ಕಾರ್ಯಕಾರಿಣೀ ಸಮಿತಿ— (1) ಕ. ಶಿವರುದ್ರಪ್ಪ (2) ಕೆ. ಯಂ. ರಾಮೂಜಾವ್, (3) ಆರ್. ವಿ ಕೃಷ್ಣ [4] ಗೋ ವೆಂಕಟರಾಮಶೆಟ್ಟಿ (5) ಶಂಕರನಾರಾಯಣಪ (6) ಹೆಚ್ ಬಿ. ಗೌಡ (7) ಡಾಕ್ಟರ್ ಅಚ್ಚಯ್ಯ.

ಜಿಲ್ಲಾ ಕಾಂಗ್ರೆಸ್ ಕಮಿಟಿಗೆ

1) ಶ್ರೀ ಗವಿಯಪ್ಪ ಹಿರೇಹಾಳು 2) ಶ್ರೀ ಬಾ- ವೆಂಕೋಬರಾವ್ 3) ಶ್ರೀ ಡಿ- ಯಸ್. ಹನುಮಂತರಾವ್ 4) ಶ್ರೀ ಎ. ವೀರಾಸ್ವಾಮಿ 5) ಶ್ರೀ ಕೆ. ಗುರುರಾಜರಾವ್ 6) ಶ್ರೀ ರೇವಣ ಸಿದ್ದಯ್ಯ 7) ಶ್ರೀ ಎಸ್ ವಿ. ಶೆಟ್ಟಿ 8) ಶ್ರೀ ಶಿವರುದ್ರಪ್ಪ

ರಾಷ್ಟ್ರಭಾಷೆಯಾದ
ಹಿಂದಿಯನ್ನು ಕಲಿಯಿರಿ.

ಹಿಂದೂಸ್ಥಾನದಲ್ಲಿ ೫೫ ಕೋಟಿ ಜನಗಳಿಗೆ ತಿಳಿಯುವ ಭಾಷೆ

ಹಿಂದೀ ಬಾಲಬೋಧಿನಿ (ಕನ್ನಡ ತೆಲುಗು)	0 2 6
,, ಪಹಲೀ ಪುಸ್ತಕ (ಅರ್ಥ ಸಹಿತ)	0 5 0
,, ಮೂಸರಿ ಪುಸ್ತಕ (,,)	0 6 0
,, ಮೋತಿಯೋಂಕಾಹಾರ	0 6 0
,, ಅನುವಾದ 1 (ಕನ್ನಡ ತೆಲುಗು	0 4 0
,, ಬಾತ್‌ಚೀತ್	0 3 0
Hindi-English self Instructor	1 0 0
Guide to Hindusthani	1 0 0
ಹಿಂದೀ-ತೆಲುಗು-ಯೂ-ಕನ್ನಡ-ಸ್ವಬೋಧಿನಿ	0 12 0

ಅಡ್ವಾನ್ಸಿಲ್ಲದೆ ಪುಸ್ತಕಗಳನ್ನು ವಿ. ಪಿ. ಮೇಲೆ ಕಳುಹಿಸಲಾಗುವುದಿಲ್ಲ. ಪರೀಕ್ಷೆಗಳಿಗೆ ಕೂಡಬೇಕೆನ್ನುವವರು ಸಮಕ್ಷಮ ಬಂದು ಎಲ್ಲಾ ಮೂಹಿತಿ ತಿಳಿಯಬೇಕು. ಬೇಡಿದರೆ ನಮನೆಗೆ ಬಂದು ಹಿಂದೀ ಶಿಕ್ಷಣ ಕೊಡಲಿಕ್ಕೆ ಏರ್ಪಡಿಸಲಾಗುವುದು.

ಕಾರ್ಯದರ್ಶಿ
ಜಿಲ್ಲಾ ಹಿಂದೀ ಪ್ರೇಮೀ ಮಂಡಲ
ಬ್ರಾಹ್ಮಣ ಬೀದಿ. ಬಳ್ಳಾರಿ

ಪತ್ರಿಕೆಯ ಹೆಸರಿನಲ್ಲಿ ಬದಲಾವಣೆ.

ನವಭಾರತ.

ನಾವು ಈ ಹಿಂದೆ ಸೂಚಿಸಿದ ಪ್ರಕಾರ ಪತ್ರಿಕೆಯ ಹೆಸರನ್ನು ಬದಲಾಯಿಸಲು ಈಗ ಸಮಯವು ಒದಗಿದೆ. ಕೆಲ ತೊಂದರೆಗಳು ನಿವಾರಣೆಯಾಗಿವೆ. ಪ್ರಕಾಶಕರೂ, ಮುದ್ರಕರೂ, ಈದಿನ ಜಸ್ಟಿಸ್ ಮ್ಯಾಜಿಸ್ಟ್ರೇಟರ ಮುಂದೆ **'ನವಧಾರತ'** ಪತ್ರಿಕೆಯ ಪ್ರಮಾಣಕ್ಕೆ ಸಹಿಮಾಡಿದರು. ಅಂಚೆ ಅಧಿಕಾರಿಗಳಿಂದ ರಿಜಿಸ್ಟರ್ ನಂಬರು ಬಂದೊಡನೆಯೇ ಪತ್ರಿಕೆಯು ನೂತನ ಹೆಸರಿನಿಂದ ಹೊರಡುವುದು. ನೀತಿಯಲ್ಲಿ ಭೇದವಿಲ್ಲ. 'ಕಾಂಗ್ರೆಸ್ ಬುಲೆಟಿನ್' ಚಂದಾದಾರರಿಗೆಲ್ಲಾ ಈ ಪತ್ರಿಕೆಯು ಕಳುಹಿಸಲ್ಪಡುವುದು.

ಸಂಪಾದಕ.



ಶನಿವಾರ, ಜನವರಿ 28, 1939

ಸುಭಾಸ ಬಾಬುಗಳನ್ನೇ ಆರಿಸಿರಿ.

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷ ಸ್ಥಾನದ ಆರಿಕೆಯ ವಿಷಯದಲ್ಲಿ ಈಸಲ ಸ್ಪರ್ಧೆಯೇರ್ಪಟ್ಟಿರುವುದು ವಿಷಾದ ಜನಕವಾಗಿದೆ. ಡಾ. ಪಟ್ಟಾಭಿಯವರೂ, ಸುಭಾಸಬಾಬುಗಳೂ ದೇಶಕ್ಕೆ ಅಮೋಘಸೇವೆಯನ್ನು ಮಾಡಿದ್ದಾರೆ. ಅಪರಿಮಿತ ತ್ಯಾಗವನ್ನು ಗೈದಿದ್ದಾರೆ.ದೇಶದಲ್ಲಿ ಸಾಧಾರಣ ಪರಿಸ್ಥಿತಿ ಇದ್ದು, ಶಾಂತಿಮಯ ವಾತಾವರಣವಿದ್ದಿದ್ದರೆ, ಇಂಥಹವರನ್ನೇ ಆರಿಸಬೇಕೆಂದು ಪ್ರತಿನಿಧಿಗಳನ್ನು ಒತ್ತಾಯ ಪಡಿಸುವ ಕಾರಣವು ಸಂಭವಿಸುತ್ತಿರಲಿಲ್ಲ. ವೈಸ್ರಾಯರು **"ಸಂಯುಕ್ತ ರಾಜ್ಯಘಟನೆ"**ಯ ಪ್ರಚಾರವನ್ನು ಕೈಗೊಂಡಿರುವುದೂ, ಸಂಸ್ಥಾನಗಳ ಆಡಳಿತದಲ್ಲಿ ಕೇಂದ್ರಪ್ರಭುತ್ವದವರು ಕೈಹಾಕಿ, ಸಂಸ್ಥಾನ ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಹಿಂದೂಡುತ್ತಿರುವುದೂ ಮತ್ತು ಯೂರೋಪಿನ ಶಾಂತಿಯು ದಿನೇ ದಿನೇ ಕ್ಷೀಣಿಸುತ್ತಾ ನಡೆದಿರುವುದೂ ಭಾರತ ಸ್ವಾತಂತ್ರ್ಯಕ್ಕೆ ಶುಭ ಸೂಚಕಗಳಲ್ಲ ಸ್ವರಾಜ್ಯ ಸಂಗ್ರಾಮದ ಮೂಲ ಕರ್ತೃಸ್ವರೂಪವಾದ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿ ಬ್ರಿಟಿಶ ಸಾಮ್ರಾಜ್ಯ ಶಾಹಿಗೆ ಎಡೆಗೊಡವ ಬಲಾಢ್ಯ ವ್ಯಕ್ತಿಯು ಬೇಕು. ವರ್ಕಿಂಗ್ ಕಮಿಟಿಯು ಅಧ್ಯಕ್ಷರಿಗೆ ಸಲಹೆ ಕೊಡುವಂತಿರಬೇಕಾಗಲಿ, ಅದು ಹೀಗಿಯೇಮಾತಬೇಕೆಂದು, ಅಧ್ಯಕ್ಷರ ಕೈಕಟ್ಟಬಾರದು. ಏಕೆಂದರೆ, ವರ್ಕಿಂಗ್ ಕಮಿಟಿಯ ಸದಸ್ಯರೆಲ್ಲಾ ಅಧ್ಯಕ್ಷರೊಬ್ಬರಿಂದಲೇ ಆರಿಸಲ್ಪಟ್ಟವರಿರುತ್ತಾರೆ. ಇಡೀ ಹಿಂದೂಸ್ಥಾನದ ವಿವಿಧ ಪ್ರಾಂತ್ಯಗಳ ಪ್ರತಿನಿಧಿಗಳು, ಅಧ್ಯಕ್ಷರನ್ನಾರಿಸಿದಮೇಲೆ, ಅವರಿಗೆ ಸಂಪೂರ್ಣ ಅಧಿಕಾರವನ್ನು ಕೊಡಬೇಕು. ಅವರು 'ನಾಮಕಾವಾಸ್ತೆ' ಅಧ್ಯಕ್ಷರೆಂದೂ, ವರ್ಕಿಂಗ್ ಕಮಿಟಿಯೇ ಪೂರ್ಣಶಕ್ತಿಶಾಲಿಯೆಂದೂ ಹೇಳುವ ಸರ್ದಾರ ವಲ್ಲಭಭಾಯಿ ಪಟೇಲರ ವಾದದಲ್ಲಿ ಅರ್ಥವಿಲ್ಲ.

ಇನ್ನೊಂದು ವಿಷಯ ಕಾಂಗ್ರೆಸ್ ಸಂಸ್ಥೆಯು ವಿವಿಧ ಪ್ರಾಂತ್ಯಗಳಲ್ಲಿ ಮಂತ್ರಿವರ್ಗವನ್ನು ಸ್ವೀಕರಿಸಿದಮೇಲೆ ಕಾಂಗ್ರೆಸ್ಸಿನ ಹೋರಾಟದ ಶಕ್ತಿಯು ಕುಂದಿ, ಅಂತಃಕಲಹಗಳು ಹೆಚ್ಚಾಗಿವೆ. ಇಂಥಾ ಸಂದರ್ಭದಲ್ಲಿ ಕಾಂಗ್ರೆಸ್ ಮಂತ್ರಿವರ್ಗಗಳಿಗೆ ಸಮಯೋಚಿತ ಸಲಹೆಗಳನ್ನು ಕೊಟ್ಟು ಅವುಗಳನ್ನು 'ಸ್ವತಂತ್ರ ಸಂಗ್ರಾಮ'ಕ್ಕೆ ಸಹಕಾರಕವಾಗಿ ಮಾಡುವ ನಿಸ್ವಾರ್ಥಿಯೂ, ನಿಷ್ಪಕ್ಷಪಾತಿಯೂ ಆದ ಮಹಾಪುರುಷನು ಅಧ್ಯಕ್ಷ ಸ್ಥಾನದಲ್ಲಿರಬೇಕು. ಈ ಗುಣಗಳೆಲ್ಲವೂ ಡಾ. ಪಟ್ಟಾಭಿಯವರಲ್ಲಿಲ್ಲವೆಂದು ನಾವು ಹೇಳುವುದಿಲ್ಲ. ತುಲನೆಮಾಡಿದರೆ, ಸುಭಾಸಬಾಬುಗಳೇ ಈಗಿನ ಸಂದರ್ಭದಲ್ಲಿ ವೀರಯೋಧರಾಗಿ ಯುವಕರ ಬಿಸಿನೆತ್ತರ ತರುಣರಮುಂದೆ ನಿಲ್ಲುವರು. ಅಲ್ಲದೆ ಸುಭಾಸ ಬಾಬುಗಳು ಸಾಮ್ಯವಾದಿಗಳು. ಬಡವರ ಕೂಲಿಕಾರರ ಬಂಧುಗಳು.

ಆಂಧ್ರ ಪ್ರಾಂತದಲ್ಲಿ ಪ್ರಾಂತೀಕರಣ ಚಳವಳಿಯು ಪ್ರಾರಂಭವಾದಮೇಲೆ, ಡಾ. ಪಟ್ಟಾಭಿಯವರು ಅಗ್ರಪಾತ್ರವನ್ನು ವಹಿಸಿದಂತೆ ಭಾಸವಾಗುತ್ತದೆ. ರಾಜಕೀಯ ಸಭೆಗಳಿಗೆ ಸಂದೇಶವನ್ನು ಕಳುಹಿಸುವಾಗಲೂ "ಪ್ರಾಂತೀಕರಣ"ದ ಪ್ರಶ್ನೆ ಎತ್ತಿರುವರು. ಆಂಧ್ರ ಪ್ರಾಂತ್ಯದಲ್ಲಿ ಅನೇಕ ಉದ್ಯಮಗಳಲ್ಲಿ ಡಾ. ಪಟ್ಟಾಭಿಯವರಿಗೆ ಬಹಳ ಕೆಲಸವಿದೆ.

ಈ ಕಾರಣ ನಮ್ಮ ಜಿಲ್ಲೆಯ ಪ್ರತಿನಿಧಿಗಳೂ, ಕರ್ನಾಟಕದ ಎಲ್ಲಾ ಪ್ರತಿನಿಧಿಗಳೂ, ಒಮ್ಮನಸ್ಸಿನಿಂದ ಬಾಬುಸುಭಾಸ ಚಂದ್ರರನ್ನೇ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಆರಿಸಬೇಕೆಂದು ಬೇಡುತ್ತೇವೆ.

ಎಸ್. ವಿ. ಶೆಟ್ಟಿ ಅಂಡ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರತ್ತದೆ. ನಮ್ಮ ಹೆಸರುವರಿಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಷ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ

ವೆಸ್ಟ್‌ಎಂಡ್' ನಾಜುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಬಳ್ಳಾರಿ ಸಮಾಚಾರಗಳು

ಸ್ವಾತಂತ್ರ್ಯ ದಿನ— 26-1-19ನೇ ಗುರುವಾರ ಪ್ರಾತಃಕಾಲ ಪ್ರಭಾತ ಫೇರಿಯು ಮುಗಿದ ಬಳಿಕ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಬಾ. ವೆಂಕೋಬರಾಯರಿಂದ ಧ್ವಜವಂದನೆಯ ಕಾರ್ಯಕ್ರಮವು ನೆರವೇರಿತು. ಸಾಯಂಕಾಲದ ಸಭೆಯಲ್ಲಿ ಶ್ರೀ ಡಿ. ಶ್ರೀಪತಿರಾಯರು ಸ್ವತಂತ್ರ ಪ್ರತಿಜ್ಞೆಯನ್ನೋದಿ ಸಾರ್ವಜನಿಕ ಸ್ವೀಕಾರ ಪಡೆದನಂತರ ಸಭೆಯು ಮುಗಿಯಿತು.

ವೀರಶೈವ ಶಾಲೆ— ಶ್ರೀ ಕೇದಾರನಾಥ ಸ್ಮಾರಕದ 11ನೆಯ ವಿನೋದದಾಟಗಳು ಗಾಂಧಿನಗರದ ವಿದ್ಯಾರ್ಥಿನಿಲಯದ ಮೈದಾನದಲ್ಲಿ 28ನೇ ಪ್ರಾ. ಜರುಗುತ್ತವೆ. 11ನೆಯ ವಾರ್ಷಿಕ ವರ್ಧಂತಿಯು ಶಾಲಾಮಂದಿರವಲ್ಲಿ 29ನೇ ಸಾ. ಜರುಗುತ್ತದೆ. ಈ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿ, ಬಹುಮಾನಗಳನ್ನು ಹಂಚಲು ಜಿಲ್ಲಾ ಮುನ್ಸಿಫರಾದ ಶ್ರೀ ಪಿ. ಎ. ನಾಯ್ಡುರತ್ನರವರು ಪ್ರೀತಿಯಿಂದ ವಪ್ಪಿರುತ್ತಾರೆ. ಎಲ್ಲರೂ ಬರಲು ಶಾಲಾಧಿಕಾರಿಗಳು ಕೋರುತ್ತಾರೆ.

ಪ್ರಮಾಣಪತ್ರ ವಿತರಣೋತ್ಸವ
ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀ ಮಂಡಲ.

ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀ ಮಂಡಲದ 7ನೆಯ ವಾರ್ಷಿಕೋತ್ಸವವೂ ಪ್ರಮಾಣಪತ್ರ ವಿತರಣೋತ್ಸವವೂ, ಜನಾಬ್ ಅಬ್ದುಲ್ ಬಾಸಿತ್ ಸಾಹೇಬರವರ ಅಧ್ಯಕ್ಷತೆಯಲ್ಲಿ 31ನೇ ತಾ॥ ಮಂಗಳವಾರ ಸಾಯಂಕಾಲ ವಾರ್ಡಲಾ ಭವನದಲ್ಲಿ ನೆರವೇರುವುದು. ಪಂಡಿತ ಸಿದ್ಧನಾಥ ಪಂತರು, ವಿದ್ಯಾರ್ಥಿಗಳಿಗೆ ಉಪದೇಶ ಭಾಷಣವನ್ನು ಕೊಡುವರು. ಹಿಂದುಸ್ತಾನೀ ಭಾಷಣ ಸ್ಪರ್ಧೆಯಲ್ಲಿ ಚಿಕ್ಕವರೂ, ದೊಡ್ಡವರೂ ಭಾಗತೆಗೆದುಕೊಳ್ಳ ಬಹುದು.

ಪುರಸಭೆ— ಸಾಧಾರಣ ಸಮಾವೇಶವು 30ನೇ ತಾ॥ ಸಾಯಂಕಾಲ ಕೂಡಲಿದೆ.

ಅಂಗ್ವೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿ ಚಟ್ಟು ಸುಟ್ಟ ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಳುಗಳು ಮುಂತಾದವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಅಗತ್ಯವಾಗಿ ಸಂಗ್ರಹಿಸತಕ್ಕದ್ದು.

ಬೆಲೆ ಸೀಸೆ ಒಂದಕ್ಕೆ ರೂ. 0—8 -0 ಟಿ. ಕ. ಪ್ರತ್ಯೇಕ.

ಜೀವನ ಸುಧಾ ಫಾರ್ಮಸಿ.

ಹರಪನಹಳ್ಳಿ ಹೈಸ್ಕೂಲಿನ ಸುವರ್ಣ ಮಹೋತ್ಸವ.

ಹುಬ್ಬಳ್ಳಿಯಲ್ಲಿ ವಾಸಿಸಿರುವ ಹರಪನಹಳ್ಳಿ ಹಳೇ ವಿದ್ಯಾರ್ಥಿಗಳಿಗೆ ವಿಜ್ಞಾಪನೆ

[ನಮ್ಮ ಸುದ್ದಿಗಾರರಿಂದ]

21-1-39ನೇ ಶನಿವಾರ ಹುಬ್ಬಳ್ಳಿ ನಗರದಲ್ಲಿ ವಾಸಿಸುವ ಹರಪನಹಳ್ಳಿ ಹಳೇ ವಿದ್ಯಾರ್ಥಿಗಳ ಸಮಾವೇಶವು ಶ್ರೀ ಶೇತೂರಾಮಾಚಾರ್ಯರ ಭವನದಲ್ಲಿ ನೆರೆದಿದ್ದಿತು. ಹರಪನಹಳ್ಳಿಯಿಂದ ಸಂಗ್ರಹಕಾರ್ಯಕ್ಕಾಗಿ ಬಂದಿದ್ದ **ಅಗ್ನಿಹೋತ್ರಿ ನಾರಾಯಣಭಟ್ಟರಿಗೆ** ಆತಿಥ್ಯವೇರ್ಪಟ್ಟಿದ್ದಿತು. ಅಲ್ಲಿಯ ಪೂರ್ವ ವಿದ್ಯಾರ್ಥಿಗಳು ಸುವರ್ಣಮಹೋತ್ಸವ ವಿಷಯದಲ್ಲಿ ಅಪೂರ್ವ ಉತ್ಸಾಹವನ್ನು ವ್ಯಕ್ತಪಡಿಸಿ, ಈ ಕೆಳಗೆ ಕಾಣಿಸಿದ ಪ್ರಕಾರ ದೇಣಿಗೆಗಳನ್ನು ಕೊಟ್ಟರು.

ಶ್ರೀ ಆರ್. ವೆಂಕಣ್ಣ	10-0-0
,, ಟಿ. ಸೇತೂರಾಮಾಚಾರ್	10-0-0
,, ಎನ್. ಶೀತಾರಾಮಾಚಾರ್	10-0-0
,, ಜಿ. ಧನ್ಯಕುಮಾರಪ್ಪ	10-0-0
,, ಎಂ. ಬಿಂದುಮಾಧವಾಚಾರ್	5-0-0
,, ಜಿ. ಕೃಷ್ಣಮೂರ್ತಿ	3-0-0
,, ಐ. ಶ್ರೀಪಾಲಪ್ಪ	2-0-0
	50-0-0

ಶ್ರೇಷ್ಠವಾದ

ಮುದ್ರಣ ಕೆಲಸ

(Job works)

ಇಂಗ್ಲೀಷ್, ಕನ್ನಡ, ತೆಲುಗು, ಹಿಂದೀ ಭಾಷೆಗಳಲ್ಲಿ

ಬೇರೆ ಬೇರೆ ಬಣ್ಣಗಳ ಇಂಕ್ಗಳು ಸಮೇತ

ಹೊತ್ತಿಗೆ ಸರಿಯಾಗಿ ಬೇಕೆಂದಿದ್ದರೆ

ವಿಠಲ ಮುದ್ರಣಾಲಯಕ್ಕೆ

ಬನ್ನಿರಿ

1. ಉತ್ತಮ ಮುದ್ರಣವು ಕಲೆಯ ಹೆಗ್ಗುರುತು!
2. ಹೊತ್ತಿಗೆ ಸರಿಯಾಗಿ ದೊರೆಯುವದು ವ್ಯವಹಾರಕ್ಕೆ ಭೂಷಣ!!
3. ಕೆಲಸಗಳೆಲ್ಲ ಸಾಮಾನ್ಯ ದರದಲ್ಲಿ ಮಾಡಲ್ಪಡುವವು.

ಕೆಲಸ ಕೊಟ್ಟು ಒಮ್ಮೆ ಪರೀಕ್ಷಿಸಿರಿ!

—ವ್ಯವಸ್ಥಾಪಕ

ವಿಠಲ ಮುದ್ರಣಾಲಯ,

ತೇರು ಬಜಾರು ಬಳ್ಳಾರಿ.

Public debt of India

BY

J. C. KUMARAPPA.

(continued from previous issue)

In deciding the programme of the year, budgeting plays an important part in modern statecraft. It lays before the public what the government propose to do in the year and tells the people how much it is going to cost their pockets. A good budget demands the equalising of the revenue and expenditure, and where there is need for further funds it indicates how that extra is to be obtained. When the expected income from taxation is tardy in reaching the treasury and the expenditures have to be met, then temporaryloans are raised by means of treasury bills which are paid off later on, when the taxes will have been collected. Bills and debts so formed bear interest which becomes a recurring charge on the revenues till they are paid off.

Where the interest payments are made to persons within the country itself the production of the people remains in the country and it does not cripple the people to any great extent. Even then there is a maldistribution of wealth as the taxes are collected from the poor and paid to the bond holders who are usually amongst the rich. When the interest is payable to citizens of a foreign country the debtor country is held to ransom as regards its production. As Jhon Stuart Mill says 'A country which makes regular payments to foreign countries, besides losing what it pays, loses also something more by the less advantageous terms on which it is forced to exchange its production for foreign commodities'. This assumes a dangerous form when the creditor country is in a position to control the finance, currency and exchange policy of the debtor country and has the placing of orders for materials in its own hands

In case large amounts are needed which can never be repaid, and for which State is not prepared to pay interest indefinitely a government may, by virtue of its summary powers, find its wherewithal by confiscation or by capital levy. Though these amounts so raised are in excess of revenue they do not form Public Debts

The excess of current expenditure over revenue - budget deficits should not be capitalised by treating them as interest bearing debts.

Raising money for public purposes by means of loans is a comparatively modern innovation, dating from the growth of extensive use of commercial credit. Previously, rulers used hoarded wealth or treasures taken from temples or other public institutions.

When debts are incurred for public purposes by a government representative of the people such debts are termed 'National Debt" and they are very often held by the citizens of that same country. Where there is no such relationship between government and the governed the debts are described merely as 'Public Debts"

In the absence of a representative government, it is incumbent on the administration to deal with the funds in their hands as a trustee. The present Government of India has succeeded to the tradition created by the East India Company and has modified its methods to suit the conditions of the tims. Still there is no popular control over the purse, although there has been a pretence of representative government by the creation of important councils since 1861. Till 1909 the budget did not come under the purview of such councils. After that date certain items were allowed to be discussed and since 1920 about 25 percent of the total expenditure has been made 'Votable. The power of the purse is even now definitely in the hands of the executive who are not responsible to the people.

[To be continued]

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಶ್ರೀ ಸುಭಾಷ್ ಬೋಸರು ಮತ್ತು ಡಾಕ್ಟರ್ ಪಟ್ಟಾಭಿಯವರು.

ಮೌ॥ ಅಬುಲ ಕಲಾಂ ಆಜಾದರು ತಮ್ಮ ಉಮೇದು ವಾರಿಕೆಯನ್ನು ಹಿಂತೆಗೆದುಕೊಂಡಿದ್ದರಿಂದ, ಡಾ॥ ಪಟ್ಟಾಭಿಯವರು ಸರ್ವಾನುಮತದಿಂದ ಅಧ್ಯಕ್ಷರಾಗುವರೆಂಬ ಊಹೆಯು ಇದ್ದಿತು. ಆದರೆ ಸುಭಾಷರು 'ನನ್ನ ಸೇವೆಯನ್ನು ಜನರು ಅಪೇಕ್ಷಿಸಿದರೆ, ನನಗೆ ಹಿಂದಕ್ಕೆ ಸರಿಯಲು ಹಕ್ಕಿಲ್ಲ' ವೆಂದು ಹೇಳಿಬಿಟ್ಟದ್ದಾರೆ. ನಿರ್ಧಾರವಾದ ಗಮುಸ್ಯೆಗಳು ಮತ್ತು ನಿಶ್ಚಿತಕಾರ್ಯಗಳ ದೃಷ್ಟಿಯನ್ನಿಟ್ಟು, ಸಾಮ್ರಾಜ್ಯ ವಿರುದ್ಧ ಚಳವಳಿ ಉಗ್ರಗಾಮಿಯಾಗುತ್ತಿರುವುದನ್ನರಿತು ಅವರು ಅಧ್ಯಕ್ಷ ಪದವಿಯಲ್ಲಿ ಮತ್ತೊಂದು ವರ್ಷವಿರಲು ಆಶಿಸಿಸುವಂತೆ ಕಾಣುತ್ತದೆ.

ಸ್ಪರ್ದೆಯಿಂದ ಅಧ್ಯಕ್ಷರ ಆರಿಕೆ ಯಾಗುವುದು ಇದೇ ಮೊದಲನೆಯ ಸಲವೆಂತ ಕಾಣುತ್ತದೆ. ಮಹಾತ್ಮ ಗಾಂಧಿಯವರು ಈ ಸಲ ತಮ್ಮ ಅಭಿಪ್ರಾಯವನ್ನು ಕೊಡದಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿದೆ. ಡಾ॥ ಪಟ್ಟಾಭಿಯವರು ತಾವು ಹಿಂದೆಗೆದುಕೊಂಡಿದ್ದನ್ನು ಪ್ರಕಟಿಸಬಹುದು. ಇಲ್ಲವೇ ಸುಭಾಸರು ಪ್ರಚಂಡ ಬಹುಮತದಿಂದ ಆರಿಸಿಬರಬಹುದು. 24ನೇ ತಾ॥ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಯ ಸದಸ್ಯರೂ, ಸುಪ್ರಸಿದ್ಧ ಮುಖಂಡರೂ ಆದ ಬಾಬೂರಾಜೇಂದ್ರ ಪ್ರಸಾದ, ಸರ್ದಾರ ವಲ್ಲಭ ಭಾಯಿ, ಭೂಲಾಭಾಯಿ ದೇಸಾಯಿ, ಕೃಷ್ಣಾಲಿನಿ ಇವರು ಒಂದು ಪ್ರಕಟನೆಯನ್ನು ಹೋರಡಿಸಿ, ಸುಭಾಸಬಾಬುಗಳು ಸ್ಪರ್ದೆಗೆ ನಿಲ್ಲುವುದು ಒಳ್ಳೆಯದಲ್ಲವೆಂದೂ, ಎಲ್ಲಾ ಪ್ರತಿನಿಧಿಗಳೂ ಡಾ॥ ಪಟ್ಟಾಭಿಯನನ್ನೇ ಆರಿಸಬೇಕೆಂದೂ ಕೋರಿದ್ದಾರೆ

ಔಂಧ ರಾಜಾಸಾಹೇಬರ ಔದಾರ್ಯ

ಜವಾಬ್ದಾರೀ ಸರ್ಕಾರದ ಸ್ಥಾಪನೆ.

ರಾಷ್ಟ್ರೀಯತ್ವಕ್ಕೆ ಸ್ಫಾಶಸ್ತ್ಯ ಕೊಟ್ಟ ಔಂಧ ಸಂಸ್ಥಾನದ ರಾಜಾಸಾಹೇಬರು ಶಿಶಿನೇ ತಾ॥ ಜವಾಬ್ದಾರೀ ಸರ್ಕಾರದ ಸ್ಥಾಪನೆ ಮಾಡಿದರು. ಮುಂಬೈ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರವರು ಸ್ಥಾರಂಭೋತ್ಸವಕ್ಕಾಗಿ ಬಂದಿದ್ದರು

'ನಾವಿಂದು ಮಹಾಕಾರ್ಯಕ್ಕೆ ಕೈಹಾಕಿರುತ್ತೇವೆ. ಇಡೀ ಹಿಂದೂಸ್ಥಾನವೇ ನನ್ನ ಕಡೆಗೆ ನೋಡುತ್ತಲಿದೆ. ಸ್ವಾರ್ಥ ತ್ಯಾಗ ಬುದ್ಧಿ, ಮತ್ತು ಸ್ಥಾಮಾಣಿಕತೆಯಿಂದ ರಾಜ್ಯಘಟನೆಯನ್ನು ನಡೆಸಿ, ಈ ಕಾರ್ಯವನ್ನು ಯಶಸ್ವಿಗೊಳಿಸುವ ಜವಾಬ್ದಾರಿಯು ನನ್ಮೆಲ್ಲರ ಮೇಲಿದೆ.' ಎಂದು ರಾಜಾಸಾಹೇಬರು ರಾಜ್ಯಘಟನೆಯು ಕ್ಯಾಬಿನೆಟದಲ್ಲಿ ಸಾಸಾದ ಮೇಲೆ ಅ ಪ್ಪ ಣೆ ಕೊಡಿಸಿದರು.

ರಾಜಾಸಾಹೇಬರೇ ಸ್ವತಃ ಮುಖ್ಯ ಮಂತ್ರಿ ಪೇರರವರಿಗೆ ನಾನಪತ್ರವನ್ನರ್ಪಿಸಿ ಅವರ ಗುಣಗಾನ ಮಾಡಿದರು. ಖೇರರವರು ರಾಷ್ಟ್ರೀಯ ಧ್ವಜವನ್ನೂ, ರಾಜರು, ಭಗವಾ ಜೆಂಡಾವನ್ನೂ ಆರೋಹಣ ಮಾಡಿದರು. ಆರೋಹಣಾನಂತರ ರಾಜಾಸಾಹೇಬರು 'ರಾಷ್ಟ್ರಧ್ವಜವು ಹಿಂದೂಸ್ಥಾನದ ಒಕ್ಕಟ್ಟಿನ ಚಿನ್ಹೆ. ಭಗವಾ ಜೆಂಡಾ ಸ್ವಾರ್ಥತ್ಯಾಗದ ಹೆಗ್ಗುರುತು. ಇವೆರಡರ ಮಹತ್ವವನ್ನರಿತು ದೇಶೋದ್ಧಾರಕ್ಕಾಗಿ ದುಡಿಯಿರಿ. ಎಂದು ಹೇಳಿದರು.

ಈ ಸಮಾರಂಭಕ್ಕಾಗಿ ದೇಶಸಾಂಡೆ ಗಂಗಾಧರರಾವ್ ಮತ್ತು ಶಂಕರರಾವ್ ದೇವ ಇವರು ಬಂದಿದ್ದರು. ಅವರೂ ಕೂಡ ಭಾಷಣ ಮಾಡಿದರು. ಜವಾಬ್ದಾರೀ ಸರ್ಕಾರದ ಸ್ಥಾಪನೆಯ ಸ್ಮರಣಾರ್ಥವಾಗಿ ಪ್ರತಿ ತಿಂಗಳ 21ನೇ ತಾ॥ ಸಾರ್ವಜನಿಕ ರಜಾದಿನವೆಂದು ಸಾರಲಾಯಿತು.

ಸಂಸ್ಥಾನಗಳು

ತ್ರಿವಾಂಕೂರು ಸಂಸ್ಥಾನ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲವು 4 ದಿನದ ವರೆಗೂ ಕೂಡಿ ರಾಜಕೀಯ ಪರಿಸ್ಥಿತಿಯ ಬಗ್ಗೆ ಕೂಲಂಕಷವಾಗಿ ವಿಚಾರಿಸಿ, ಕೆಲ ಗೊತ್ತುವಳಿಗಳನ್ನು ಸ್ವೀಕರಿಸಿತು. ಕಾಂಗ್ರೆಸ್ಸಿನವರ ಕರಾರುಗಳನ್ನು ಪೂರೈಸದಿದ್ದರೆ ಮತ್ತೆ ಹೋರಾಟವು ಪ್ರಾರಂಭವಾಗಬಹುದು.

ರಾಜಕೋಟೆ ಸರ್ದಾರ ವಲ್ಲಭಭಾಯಿಯವರು ಸುಧಾರಣಾ ಸಮಿತಿಗೆ ಸೂಚಿಸಿದ ಹೆಸರುಗಳೆಲ್ಲಾ ಅಂಗೀಕೃತವಾಗದ ಕಾರಣ ಕ್ಲಿಷ್ಟ ಪರಿಸ್ಥಿತಿಯುತ್ಪನ್ನವಾಗಿರುವುದು ಸರಿಯಷ್ಟೆ. ಈ ವಿಷಯದಲ್ಲಿ ಮಹಾತ್ಮ ಗಾಂಧಿಯವರ ಸಲಹೆ ತೆಗೆದುಕೊಳ್ಳಲು ಸರ್ದಾರರು ಬಾರ್ಡೋಲಿಗೆ ಹೋಗಿರುವರು

ಮೈಸೂರು ರಾಜಕೀಯ ಸುಧಾರಣಾ ಸಮಿತಿಯಿಂದ ಶ್ರೀ ಭೂಸಾಲಂ ಶೆಟ್ಟರು ರಾಜೀನಾಮೆ ಕೊಡಬೇಕಾಗಿತ್ತೆಂದು ಸರ್ವಾರರು, ಅಭಿಪ್ರಾಯಪಟ್ಟಿದ್ದುತ್ತಾರೆ.

ಸಂಯುಕ್ತ ಪ್ರಾಂತದ ಒಂದು ಸಂಸ್ಥಾನದಲ್ಲಿ ಪ್ರಜೆಗಳ ಮೇಲೆ ನಡೆಯುತ್ತಿರುವ ಚಿತ್ರಹಿಂಸೆಯನ್ನು ಕುರಿತು ದ್ವಾರಕಜಿ ಎಂಬಾತನು, ತನ್ನ ರಕ್ತದಲ್ಲಿ ಪಂಡಿತ ಜವಾಹರಲಾಲರಿಗೆ ಒಂದು ಪತ್ರವನ್ನು ಬರೆದಿರುವನೆಂದು ಗೊತ್ತಾಗಿದೆ ಆ ಪತ್ರದಲ್ಲಿ ಕ್ರೂರ ಕೃತ್ಯಗಳ ವರ್ಣನೆಯಿದೆ.

ಹಾರುವ ಟಪ್ಪಾಲು ಬಂಡಿ.

ಅಮೇರಿಕಾದಲ್ಲಿ ಹಾರುವ ಟಪ್ಪಾಲು ಬಂಡಿಯೊಂದು ರಚಿಸಲ್ಪಟ್ಟಿದೆ. ಇದು ವಿಮಾನದಂತೆ ಗಂಟೆಗೆ 90 ಮೈಲು ಗಳಷ್ಟು ವೇಗವಾಗಿ ಹಾರುತ್ತಾ ಅಲ್ಲಲ್ಲಿ ಟಪ್ಪಾಲುಗಳನ್ನು ಬಟವಾಡೆ ಮಾಡುತ್ತಲೂ, ಕೊಳ್ಳುತ್ತಲೂ ಇರುವುದು. ಸ್ಪರ್ಧೆಯಕ್ಕೆ ಇದು ಪೆನ್ಸಿಲ್‌ವೇನಿಯಾದ 28 ಪಟ್ಟಣಗಳನ್ನು ಸುತ್ತಾಡುತ್ತಿರುವುದು. [ಕೊಡಗು]

ಪ್ರಾಥಮಿಕ ಶಾಲಾ ಉಪಾಧ್ಯಾಯರ ಕೊರತೆಗಳು.

ಜಿಲ್ಲಾ ಬೋರ್ಡು ಅಧ್ಯಕ್ಷರೂ, ವಿದ್ಯಾರ್ಥಿಗಳೂ, ಗಮನಿಸಬೇಕು.

1. ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಯೋಗ್ಯತೆಗೆ ಮೀರಿ ಅಧಿಕವಾಗಿ ಜುಲ್ಮಾನೆಗಳನ್ನು ವಿಧಿಸುತ್ತಿರುವುದು ವಿಷಾದಕರವಾದ ವಿಷಯವೆನಿಸುತ್ತಿದೆ

2. ಲೋಯರ್ ಗ್ರೇಡ್ ಟ್ರೇನಿಂಗ್ ಆಗಿ ಬೋರ್ಡು ಸ್ಕೂಲುಗಳಲ್ಲಿ ಕೆಲಸ ನೂಡುವ ಉಪಾಧ್ಯಾಯರು 1940ರಲ್ಲಿ ನಡೆಯುವ ಹೈಯರ್ ಗ್ರೇಡ್ ಟ್ರೇನಿಂಗ್ ಸರ್ಟಿಫಿಕೇಟು ಪರೀಕ್ಷೆ ನೂಡಿಕೊಳ್ಳದಿದ್ದರೆ ಅಂಥವರನ್ನು ಕೆಲಸದಿಂದ ತೆಗೆದು ಬಿಡುವೆನೆಂದು ಭಯ ಸೂಚಕವಾದ ಪ್ರಕಟನೆಯು ಹೊರಟಿರುತ್ತದೆ. ಇದರಿಂದ ಎಲ್ಲಾ ಲೋಯರ್ ಗ್ರೇಡ್ ಉಪಾಧ್ಯಾಯರು ಬಹಳ ಕಾಲ ದುಡಿದು ಬೆಂಡಾಗಿ ಸಂಸಾರಸಾಗರದಲ್ಲಿ ಅಲ್ಪ ಸಂಬಳದಲ್ಲಿ ಹೈಯರ್ ಗ್ರೇಡ್ ಪರೀಕ್ಷೆಯನ್ನು ತೇರ್ಗಡೆ ಹೊಂದಲು ಉದ್ದೇಶಿಸಿ ಪರೀಕ್ಷೆಗೆ ತಯಾರಿಕೆ ಹೊಂದಲು ರಜಾ ಕೋರಿದಲ್ಲಿ ತಲುಬು ಇಲ್ಲದಲೆ ರಜಾ ತೆಗೆಯಬಹುದೆಂದು ಮೇಲಧಿಕಾರಿಗಳು ಉತ್ತರವಿತ್ತಿರುವರು. ಎಲ್ಲಾ ಇಲಾಖೆಗಳಲ್ಲಿಯೂ ಸಂಬಳಗಳನ್ನು ಕೊಟ್ಟು ಮುಂದಿನ ವಿಳಾಗೆಗೆ ಪ್ರೋತ್ಸಾಹವೀಯುತ್ತಿದ್ದರೂ ಈ ಇಲಾಖೆಯವರು ಸಂಬಳ ವಿಲ್ಲದೆ ಮುಪ್ಪಿನ ಕಾಲದಲ್ಲಿ ಉಪಾಧ್ಯಾಯರಿಗೆ ಕಷ್ಟಕೊಡುವುದು ತಾವು ಒಹಳವಾಗಿ ಯೋಚಿಸುವ ಅಂಶವಾಗಿದೆ.

3. ಪ್ರಾಥಮಿಕ ಉಪಾಧ್ಯಾಯರು ಶಾಲೆಯ ರಜಾ ಕೋರಿದಲ್ಲಿ ಅವರನ್ನು ಜಿಲ್ಲಾ ವಿದ್ಯಾಧಿಕಾರಿಗಳ ಎಮರಿನಲ್ಲಿ ಹಾಜರಾಗದೆ ವಿನಹ ರಜಾ ಮುಂಜೂರು ಮಾಡಲಾಗುವುದಿಲ್ಲವೆಂಬುದಾಗಿ ಉತ್ತರಗಳು ಬರುತ್ತವೆ. ಅದು ಹಳ್ಳಿಗಳಲ್ಲಿ ಸ್ವಲ್ಪ ವೇತನದಿಂದ ಮಕ್ಕಳೊಂದಿಗೆ ದಡ್ಡಿನ ಅಡಚಣೆಯಿಂದ ಕಷ್ಟಪಡುತ್ತಾ ರೋಗದಿಂದ ನರಳುತ್ತಾ ಇರುವ ಉಪಾಧ್ಯಾಯರು ಒಮ್ಮೆಲೆ ಜಿಲ್ಲಾ ನೈಸ್ಯ ವುಟ್ಯಾಧಿಕಾರಿಗಳಲ್ಲಿ ಹಾಜರಾಗಲು ಅಸಾಧ್ಯವಾದ ವಿಷಯ. ಇದು ತಮ್ಮ ಯೋಚನೆಗಳಲ್ಲಿ ಮೂರನೆಯ ಅಂಶವಾಗಿದೆ.

4. ಉಪಾಧ್ಯಾಯನಿಯರ ಕೊರತೆಗಳಂತೂ ಹೇಳಲು ತೀರದು. ಎಲ್ಲಾ ಇಲಾಖೆಗಳಲ್ಲಿಯೂ ಸ್ತ್ರೀಯರಿಗೆ ಪ್ರಸವ ಕಾಲಕ್ಕೆ ಒಂದು ತಿಂಗಳು ವುಂಚಿತವಾಗಿ ಹೆರಿಗೆ ಆಸ್ಪತ್ರೆಗೆ ಆಥವಾ ಅವರನರ ಅನುಕೂಲತೆಗಳನ್ನು ಸಿದ್ದಪಡಿಸಿಕೊಳ್ಳಲು ರಜಾ ಕೊಟ್ಟು ತರುವಾಯ ಎರಡು ತಿಂಗಳು ರಜಾ ಕೊಟ್ಟುಬಿಟ್ಟು ಮೂರು ತಿಂಗಳು ವೇತನದಿಂದ ಸಹಾಯ ನೂಡುತ್ತಿದ್ದಾರೆ, ಆದರೆ ಪ್ರಾಥಮಿಕ ಶಾಲೆಯ ಉಪಾಧ್ಯಾಯನಿಯರಿಗೆ ಸಗಾತ ಇಚ್ಛೆಯಲೆ ರಜಾ ಕೊಡುವುದು, ಮತ್ತು ಅವರನ್ನು ಕೆಲಸಕ್ಕೆ ಸೇರಲು ಲೇಡಿ ಡಾಕ್ಟರಿಂದ ಯೋಗ್ಯತಾ ಪತ್ರ ಬಯಸುವುದೂ ಇದು ಹಳ್ಳಿಯ ಉಪಾಧ್ಯಾಯನಿಯರಿಗೆ ನಷ್ಟಕರವಾದ ವಿಷಯ ಇದೊಂದು ಅಂಶವನ್ನು ವಿಚಾರಿಸಲು ಬಿನ್ನಹ.

5. ಸೆಕೆಂಡರಿ ಗ್ರೇಡ್ ಟ್ರೇನಿಂಗ್ ಆಗಿ ಮೂಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಪ್ರಥಮ ವುವತ್ತು (30) ರೂ. ವೇತನದಿಂದ ಪ್ರಾರಂಭಿಸುವುದು. ಅದೇ ಯೋಗ್ಯತೆಯನ್ನು ಹೊಂದಿದ ಉಪಾಧ್ಯಾಯನು ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶಿಸಿದರೆ ಇಪ್ಪತು (20) ರೂ. ವೇತನದಿಂದ ದುಡಿಸುತ್ತಿರುವದು ಮಲಮಕ್ಕಳನ್ನು ಕಂಡಂತೆ ತೋರಿಬರುತ್ತದೆ.

ಮೇಲ್ಕಂಡ ಎಲ್ಲಾ ವಿಚಾರಗಳನ್ನೂ ವಿದ್ಯಾಧಿಕಾರಿಗಳೂ ಮತ್ತು ಜಿಲ್ಲಾ ಬೋರ್ಡು ಪ್ರೆಶಿಡೆಂಟರವರು ಯೋಚಿಸಿ ತಕ್ಕ ವ್ಯವಸ್ಥೆಮಾಡಲು ಉಪಾಧ್ಯಾಯರ ಮತ್ತು ಉಪಾಧ್ಯಾಯನಿಯರ ಕಷ್ಟಗಳನ್ನು ನಿವಾರಿಸಲು ಕೋರುವ ಪ್ರಾಥಮಿಕ ಉಪಾಧ್ಯಾಯರುಗಳ ಶ್ರೇಯೋಭಿಲಾಷಿ.

ದೇಶಾಯಿ ಶೇಷಗಿರಿರಾವ್,
ಕಾತಾಳ.

೫೫-೧-೩೯

ಸ್ವದೇಶ

— ಮಧ್ಯಪ್ರಾಂತದಲ್ಲಿ ಭಾರತೀಯ ಸ್ವಾತಂತ್ರ್ಯದ ದಿನ (26-1-39) 68 ವಿದ್ಯಾ ಮಂದಿರಗಳು ಪ್ರಾರಂಭವಾಗಲಿವೆ ಶಿಕ್ಷಣ ಮಂತ್ರಿಗಳು ಪ್ರಾರಂಭೋತ್ಸವವನ್ನು ನೆರವೇರಿಸಲಿರುವರು.

— ಪಂಜಾಬ್ ರಿಜಿಮೆಂಟಿನ ಏಳು ಸಿಪಾಯಿಗಳಿಗೆ ಮಿಲಿಟರಿ ಶಿಸ್ತು ಭಂಗದ ಆರೋಪದ ಮೇಲೆ, 2 ತಿಂಗಳಿಂದ 1 ವರ್ಷದ ವರೆಗೆ ಶಿಕ್ಷೆಯು ವಿಧಿಸಲ್ಪಟ್ಟಿದೆ

ಬಡವರಿಗೂ, ಭಾಗ್ಯವಂತರಿಗೂ - ವಿಮೆಮಾಡಲು ಹೆಚ್ಚಿನ ಸೌಕರ್ಯಗಳುಂಟು.

ಪತ್ರಿಕೆಗಳಲ್ಲಿ ನಾವೀನ್ಯತೆ ಸುಲಭದರದ ಕಂತುಗಳವಿಶೇಷ'ಯ'ಳ್ಳ

ಅತ್ಯುತ್ತಮ ಸಂಸ್ಥೆ

ದಿ

ಏಶಿಯನ್ ಅಶೂರೆನ್ಸ್ ಕಂಪನಿ,

ಲಿಮಿಟೆಡ್.

[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]

ಹೆಡ್ ಆಫಿಸ್– ಬಾಲಾರ್ಡ್ ಎಸ್ಟೇಟ್ ಫೋರ್ಟ್, ಮುಂಬೈ

ಅಪಾಯ ವವಗಿದ ಕಾಲದಲ್ಲಿ, ಸಂಪಾದಿಸಲಾಗದ ಪರಿಸ್ಥಿತಿಯಲ್ಲಿ, ವೃದ್ಧಾಪ್ಯದಲ್ಲಿ ನಿಮಗೆ ಸಹಾಯ ಬೇಕಲ್ಲವೇ? ಹಾಗಾದರೆ, ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ 'ಪಾಲಿಸಿ'ಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆ ಪಡಬಹುದುದಾದ, ಬಲವತ್ತರವಾದ ಆರ್ಥಿಕ ಭದ್ರತೆಯುಳ್ಳ ಏಜೆನ್ಸಿ. ವಿವರಗಳಿಗೆ ಬರೆಯಿರಿ.

ಬ್ರಾಹ್ಮಣರ ಬೀದಿ
ಬಳ್ಳಾರಿ

ಎ. ಪಾರ್ಥಸಾರಥಿ, ಬಿ. ಎ
ಜಿಲ್ಲಾ-ಆರ್ಗನೈಜರ್

ಕಾಂಗ್ರೆಸ್ ಅಧ್ಯಕ್ಷಪದ ಡಾ|| ಪಟ್ಟಾಭಿಯವರ ಹೇಳಿಕೆ

ಕಾಂಗ್ರೆಸ್ ಅಧ್ಯಕ್ಷರಪದಕ್ಕೆ ಹೆಸರು ಸೂಚಿಸಲ್ಪಟ್ಟರುವದನ್ನು ನಾನು ಸಾರ್ವಜನಿಕರ ಕರೆಯೆಂದು ಭಾವಿಸುತ್ತೇನೆ. ಆದ್ದರಿಂದ ಅದನ್ನು ನಾನು ಅಲಕ್ಷ ಮಾಡಲಾರೆ ಎಂದುಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಒಂದು ದೀರ್ಘ ಹೇಳಿಕೆಯಲ್ಲಿ ಅಂದಿದ್ದಾರೆ.

ಮೌಲಾನಾ ಅಝುದರ ಸಲುವಾಗಿ ತಾವು ತಮ್ಮ ಉಮೇದುವಾರಿಕೆ ಹಿಂತೆಗೆದುಕೊಂಡಿದ್ದನ್ನೂ ಆದರೆ ಅಝುದರ ಒತ್ತಾಯದಿಂದ ಆ ರಾಜೀನಾಮೆಯನ್ನು ಬಿಟ್ಟುಕೊಟ್ಟಿದ್ದನ್ನೂ ವಿವರಿಸಿದ ಬಳಿಕ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಹೀಗೆ ಅಂದಿದ್ದಾರೆ.

'ಮೌಲಾನಾ ಅಝುದರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡರು ಮತ್ತು ನನ್ನ ಉಮೇದುವಾರಿಕೆಗೆ ಬೆಂಬಲ ಕೊಟ್ಟು ನನಗೆ ವಿಜಯವಾಗಲೆಂದು ಹಾರೈಸಿದರು. ಇದರಿಂದ ನನ್ನ ಉಮೇದುವಾರಿಕೆಯು ವರ್ಕಿಂಗ್ ಕಮಿಟಿಯ ಅನೇಕ ಜನ ಸಹೋದ್ಯೋಗಿಗಳಿಗೆ ಸಮ್ಮತವಾಗುವದೆಂದು ನಾನು ಆಶಿಸಿದೆನು ಮತ್ತು ನನ್ನ ಉಮೇದುವಾರಿಕೆಯುಂದ ಸಾರ್ವಜನಿಕ ಕರೆಯು ಒಂದಂತಿರುವದರಿಂದ ಅದನ್ನು ಅಲಕ್ಷಿಸಬಾರದೆಂದೂ ಬಗೆದೆನು"

ಸದ್ಯದ ಸಮಸ್ಯೆಗಳನ್ನು ಕುರಿತು ತಮ್ಮ ಅಭಿಪ್ರಾಯವೇನಿರುವದೆಂಬನ್ನು ತಿಳಿಸುತ್ತಾ ಡಾ|| ಪಟ್ಟಾಭಿಯವರು ಹೀಗೆಂದಿರುವರು.

'ಹಿಂದೂಸ್ತಾನ ಸರ್ಕಾರದ ಸದ್ಯದ ರಾಜ್ಯಘಟನೆಯಿಂದಾಗುವ ಅಪಾಯಗಳನ್ನು ಬೇರೆ ಎಲ್ಲ ಜನರು ತೋರಿಸುವಂತೆ ನಾನಾದರೂ ತೋರಿಸಿ ಕೊಟ್ಟರುವೆನು ನನಗೆ ತಿಳಿದ ಮಟ್ಟಿಗೆ ವರ್ಕಿಂಗ್ ಕಮಿಟಿಯ ಯಾವ ಸದಸ್ಯನೂ ಸಂಯುಕ್ತ ಘಟನೆಯ ಬಗ್ಗೆ ಬ್ರಿಟಿಷ ಸರ್ಕಾರದೊಡನೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸುತ್ತಿಲ್ಲ. ಹಾಗೆ ಯಾರೂ ಪ್ರಯತ್ನಿಸುತ್ತಿಲ್ಲವೆಂದು ನಾನು ನಂಬುತ್ತೇನೆ ವೈಸ್‌ರಾಯರು ಇತ್ತೀಚೆಗೆ ಮಾಡಿದ ಘೋಷಣೆಗಳನ್ನು ಕುರಿತು ನಾನು ಸಹ ನನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಿರುವೆನು. ಆದರೆ ಕಾಂಗ್ರೆಸ್ ಅಧ್ಯಕ್ಷರೇ ಈ ಘೋಷಣೆಗಳಿಗೆ ಉತ್ತರ ಕೊಟ್ಟರುವರು

ಸಂಸ್ಥಾನಗಳ ವಿಷಯದಲ್ಲಿ ತಮಗೆ ಆಸಕ್ತಿಯುಂಟಾಯಿತೆಂಬದನ್ನು ವಿವರಿಸುತ್ತಾ ಡಾ|| ಪಟ್ಟಾಭಿಯವರು ಹೀಗೆಂದಿರುವರು. 'ನಮ್ಮ ದೇಶವನ್ನು ಪ್ರಾದೇಶಿಕವಾಗಿ ನಾವೆಂದು ಒಡೆಯಲಾರೆವು. ನಮಗೆ ಸಂಯುಕ್ತಘಟನೆಯು ಬೇಕೆಂಬುದು ನಿಜ ಆದರೆ ಬ್ರಿಟಿಷ ಸರ್ಕಾರದವರು ಈಗ ತಯಾರಿಸಿರುವ ಸಂಯುಕ್ತಘಟನೆಯಿಂದ ಹಿಂದೂಸ್ತಾನವು ಬಡವೇಲಾಗುವಲ್ಲದೆ ತೀರ ದುರ್ಬಲವಾಗುವುದು.

ಇನ್ನು ಸಂಸ್ಥಾನಗಳಲ್ಲಿ ಇಂದು ವಿಶೇಷ ಜಾಗೃತಿಯಾಗಿದೆ. ನಾನು ಕಾಂಗ್ರೆಸ್ ಅಧ್ಯಕ್ಷನಾಗಿ ಆರಿಸಲ್ಪಟ್ಟರೆ ಸಂಸ್ಥಾನ ಸಲುವಾಗಿ ನಾನು ಮಾಡಿರುವ ಸೇವೆಯನ್ನು ಮೆಚ್ಚಿ ಜನರು ನನಗೆ ಈ ಸ್ಥಾನ ಕೊಟ್ಟರೆಂದು ನಾನು ತಿಳಿಯುತ್ತೇನೆ ಶಿಸ್ತುಭಂಗ ಮತ್ತು ಕೊಳೆಯನ್ನು ನಿರ್ಮೂಲ ಮಾಡಲು ಪ್ರಯತ್ನಿಸುತ್ತೇನೆ.

ಇನ್ನೂ ಒಂದು ವಿಷಯವನ್ನು ಕುರಿತು ನಾನು ಸ್ಪಷ್ಟೀಕರಣ ಮಾಡಬೇಕಾಗಿದೆ. ಸುಭಾಸ ಬೋಸರ ಸಲುವಾಗಿ ನಾನು ಯಾಕೆ ಉಮೇದುವಾರಿಕೆ ಹಿಂತೆಗೆದುಕೊಳ್ಳಬಾರದು ಎಂಬುದೊಂದು ಪ್ರಶ್ನೆ. ಅವರೆ ನಾನು ಹಾಗೆ ಮಾಡಲಾರೆ. ನನ್ನ ಸಹೋದ್ಯೋಗಿಗಳ ಮಾತನ್ನು ನಾನು ಮೀರಲಾರೆ. ನನ್ನ ಸಹೋದ್ಯೋಗಿಗಳ ಮಾತು ನನಗೆ ಒಪ್ಪಿಗೆ ಇಲ್ಲದೆ ಹೋಗಿದ್ದರೆ ನಾನು ಖಂಡಿತವಾಗಿಯೂ ನನ್ನ ಉಮೇದುವಾರಿಕೆಯನ್ನು ಹಿಂಗೆದುಕೊಳ್ಳುತ್ತಿದ್ದೆನು ಅಸಾಧಾರಣ ಪರಿಸ್ಥಿತಿ ಹೊರತು ಉಳಿದ ಪ್ರಸಂಗಗಳಲ್ಲಿ ಒಬ್ಬ ಅಧ್ಯಕ್ಷರೇ ಎರಡು ಸಲ ಆರಿಸಲ್ಪಡಬಾರದೆಂದು ನನ್ನ ಅಭಿಪ್ರಾಯ ವಿರುತ್ತದೆ. ಈಗೇನೂ ಅಸಾಧಾರಣ ಪ್ರಸಂಗವಿರುವದಿಲ್ಲ.

ಶ್ರೀ ಜಿ ಸ್ವಿ. ಬೇವೂರರ ಅಧಿಕಾರ ಅವಧಿ ಮಾರ್ಚ 1941ರ ವರೆಗೆ ಬೆಳಿಸಲ್ಪಟ್ಟಿತು

ಹೊಸದಿಲ್ಲಿ 25

ಆಂಚೆ ಮತ್ತು ತಂತಿಖಾತೆಯ ಡೈರೆಕ್ಟರ ಜನರಲ್‌ರಾಗಿರುವ ಶ್ರೀ ಗುರುರಾಯಬೇವೂರ ಅವರ ಹುದ್ದೆಯ ಅವಧಿಯು ಮಾರ್ಚ 1941ರ ವರೆಗೆ ಬೆಳಿಸಲ್ಪಟ್ಟರುವದೆಂದು ತಿಳಿಯುತ್ತದೆ.

ವಿಜಾಪುರ ಭವನ ಕಾಫೀಕ್ಲಬ್
(ರಿಜಿಸ್ಟರ್ಡ್)

ಶಾಖೆಗಳು **ಕಾಫಿ ಕ್ಲಬ್ ಬೆಂಗಳೂರು ರೋಡ್**

ಊಟ ಮತ್ತು ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪವಲ್ಲಿ ತಯಾರಿಸಿದ ಸಿಹಿಖಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ

ಒಮ್ಮೆ ಸಲ ಬಂದು ಪರೀಕ್ಷಿಸಿರಿ.

ಸಂಸ್ಥಾನಗಳ ವಿಷಯದಲ್ಲಿ ಕಾಂಗ್ರೆಸ್ ಧೋರಣೆ ಬದಲಾಗಬೇಕು.

ಪೂ|| ಗಾಂಧಿಯವರ ಅಭಿಪ್ರಾಯಗಳು

'ಸೇಟ ಜಮನಾಲಾಲರು ಜಯಪುರದ ಪ್ರಜೆಗಳಾಗಿದ್ದರೂ ಅಖಿಲ ಭಾರತ ವ್ಯಕ್ತಿಯು ಸುತ್ತು ಅವರು ವರ್ಕಿಂಗ್ ಕಮಿಟೀಯ ಸದಸ್ಯರಿದ್ದಾರೆ. ಜಯಪುರ ದರ್ಬಾರ ಕೃತಿಯಿಂದ ಸಮ್ಮದ ಬಿಕ್ಕಟ್ಟು ಅಖಿಲ ಭಾರತ ಪ್ರಶ್ನೆಯಾದರೆ ಕಾಂಗ್ರೆಸ್ ಕೈಕಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳಲಾರದು. ಸೇಟ ಜಮನಾಲಾಲರು ಯಾವ ಆರೋಪವನ್ನೂ ಮಾಡಿಲ್ಲ. ಆದರೂ ಅವರನ್ನು ಪ್ರತಿಬಂಧಿಸಲಾಗಿದೆ. ಪ್ರಜಾಮಂಡಲದವರನ್ನೂ ಇದೇ ರೀತಿ ಕಾಡಲಾಗಿದೆ. ಆದ್ದರಿಂದ ಈ ತೊಡಕಿನಲ್ಲಿ ಯಶಶ್ವಿಯಾಗಿ ಕೈಹಾಕಲು ಸಾಮರ್ಥ್ಯವಿದ್ದರೆ ಕಾಂಗ್ರೆಸ್ಸು ಹಾಗೆ ಕೈಹಾಕಲು, ಜಾಗ್ರತಿಯು ಕುಗ್ಗಿ ಹೋಗಲು ಅವಕಾಶ ಕೊಟ್ಟಿರೆ, ಕಾಂಗ್ರೆಸ್ ತನ್ನ ಕರ್ತವ್ಯವನ್ನು ಅಲಕ್ಷಿಸಿದಂತಾಗುವದು. ಈ ದೃಷ್ಟಿಯಿಂದಲೇ ನಾನು ಜಯಪುರ ಅಥವಾ ರಾಜಕೋಟೆಯ ಪ್ರಸಂಗಗಳು ಇಡೀ ದೇಶದ ಸಮಸ್ಯೆಗಳಾಗಬಹುದೆಂದು ಹೇಳಿದೆನು.

ಸಾಮರ್ಥ್ಯವಿದ್ದಾಗ ಕೈಹಾಕಬೇಕು.

ಸಂಸ್ಥಾನ ಪ್ರಜೆಗಳು ಇನ್ನೂ ಜಾಗ್ರತರಾಗದಿರುವಾಗ ನಾನು ಕಾಂಗ್ರೆಸ್ಸು ತಟಸ್ಥವೃತ್ತಿಯ ಧೋರಣವನ್ನು ಕೈಕೊಳ್ಳಬೇಕೆಂದು ಸೂಚಿಸಿದೆನು ಹಾಗೆ ಮಾಡಿದ್ದು ಮುತ್ಸದ್ದಿತನದ ಲಕ್ಷಣವೆಂದು ನನ್ನ ಅಭಿಪ್ರಾಯ. ಆದರೆ ಈಗ ಸಂಸ್ಥಾನ ಪ್ರಜೆಗಳು ಸಂಪೂರ್ಣ ಎಚ್ಚತ್ತು ತಮ್ಮ ಧ್ಯೇಯ ಸಾಧನೆಗಾಗಿ ಕೊನೆಯವರೆಗೂ ಹೋರಾಡಬೇಕೆಂದು ನಿರ್ಧರಿಸಿರುವದರಿಂದ ಈ ಸಮಯದಲ್ಲಿ ಕಾಂಗ್ರೆಸ್ಸು ಹಿಂದಿನ ಧೋರಣವನ್ನೇ ಅನುಸರಿಸಿದರೆ ಅದು ಕೇವಲ ಹೇಡಿತನವಾಗುವದು. ಈ ಸಂಗತಿಯನ್ನರಿತರೆ, ದೇಶದ ಯಾವದೇ ಮೂಲೆಯಲ್ಲಿ ಸ್ವಾತಂತ್ರ್ಯ ಹೋರಾಟವಾದರೂ ಅದು ಇಡೀ ರಾಷ್ಟ್ರದ ಹೋರಾಟವೇ ಸರಿ. ಯಶಸ್ವಿಯಾಗಿ ಕೈಹಾಕಲು ತನಗೆ ಸಾಮರ್ಥ್ಯವಿದೆಯೆಂದು ಕಾಂಗ್ರೆಸ್ಸಿಗೆ ಅನಿಸಿದರೆ ಅದು ಖಂಡಿತವಾಗಿ ಮಾಡಬೇಕು.

'ನಾನು ನನ್ನ ಅಭಿಪ್ರಾಯವನ್ನು ಬದಲಾಯಿಸಿರುವೆನೆಂದೂ ಹಿಂದೆ ಹೇಳಿದಂತೆ ನಾನು ಈಗ ಹೇಳುತ್ತಿಲ್ಲವೆಂದೂ ಕೆಲವರು ಆಕ್ಷೇಪಿಸುತ್ತಾರೆ ಆದರೆ ನಿಜ ಸಂಗತಿಯೆಂದರೆ ಪರಿಸ್ಥಿತಿಯು ಬದಲಾಗಿದೆ. ನಾನು ಮಾತ್ರ ಇದ್ದಂತೆಯೇ ಇರುವೆನು! ಪರಿಸ್ಥಿತಿಗನುಗುಣವಾಗಿಯೇ ನನ್ನ ನಡೆನುಡಿಗಳಿರುವವು ನನ್ನ ಸುತ್ತಲು ಮುತ್ತಲಿನ ಪರಿಸ್ಥಿತಿಯು ಮೆಲ್ಲ ಮೆಲ್ಲನೆ ಬದಲಾಗುತ್ತ ನಡೆದಿದೆ. ಸತ್ಯಾಗ್ರಹಿಯಾದ ನಾನು ಬದಲಾದ ಪರಿಸ್ಥಿತಿಯಂತೆ ವರ್ತಿಸುವೆನು.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು

ಹೇಗೆ ನಡೆಯುವುದು?

ಹಿಂದೂಸ್ಥಾನದ 21 ಪ್ರಾಂತಗಳಲ್ಲಿ 29-1-39ನೆಯ ತಾ|| ತ್ರಿವುರೀ ಕಾಂಗ್ರೆಸ್ ಪ್ರತಿನಿಧಿಗಳ ಸಭೆಯು ಕೂಡಿ ಅಧ್ಯಕ್ಷರ ಚುನಾವಣೆ ಆಗಬೇಕು. ಗುಪ್ತ ಮತದಾನ ಪದ್ಧತಿಯು ಅನುಸರಿಸಲ್ಪಡುತ್ತದೆ. ತಮಗೆ ಬೇಕಾದವರ ಹೆಸರಿನ ಬಗಲಲ್ಲಿ ಗುರುತು ಹಾಕಿ ಪೆಟ್ಟಿಗೆಯಲ್ಲಿ ಹಾಕಬೇಕು. ನಂತರ ಅಧ್ಯಕ್ಷರು, ಪರಿಣಾಮವನ್ನು ಆಲ್ ಇಂಡಿಯಾ ಕಾಂಗ್ರೆಸ್ ಆಫೀಸಿಗೆ ತಂತೀ ಮುಖಾಂತರ ತಿಳುಹಿಸಬೇಕು.

ಕ. ಪ್ರಾಂ. ಕಾಂಗ್ರೆಸ್ ವಾರ್ಷಿಕ ಸಭೆ

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು 29-1-39ಕ್ಕೆ ಧಾರವಾಡದಲ್ಲಿ ಕೂಡಬೇಕೆಂದು ಕಾರ್ಯಶಿಲದವರು ನಿಶ್ಚಯಿಸಿದ ಪ್ರಕಾರ ಧಾರವಾಡದ ಕಾಂಗ್ರೆಸ್ ಭವನದಲ್ಲಿ ಸೇರಲಿದೆ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯಗಳು ಈಗಾಗಲೇ ಪ್ರಕಟವಾಗಿವೆ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನು ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯೂವ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಅಂಡ್ ಸನ್ಸ್.
ಬೆಂಗಳೂರು ರೋಡ್ ಬಳ್ಳಾರಿ.

ಅಂಬಾ ಭವನ ಕಾಫೀ ಕ್ಲಬ್ (ರಿಜಿಸ್ಟರ್ಡ್)
ಮತ್ತು
ತಾಜ್.— **ಊಟದ - ಹೋಟಲ್.**
ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿವೆ ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ - ಬೆಳಕು ಸುತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ವ್ಯವಸ್ಥೆ ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸು— **ಶಿ. ಕನ್ನಯ್ಯ, ಹೆಚ್. ಕರಿಬಸಪ್ಪ.**

ನಿಶ್ಚಲ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಟಿ. ಬಿ. ಕೇಶವರಾಯರಿಂದ ಪ್ರಕಟಿಸಲ್ಪಟ್ಟಿತು.

REG NO. M 3937 'ವಂದೇಮಾತರಂ'

THE Congress Bulletin
ಕಾಂಗ್ರೆಸ್ ಬುಲೆಟಿನ್

ಉಜ್ವಲ · ರಾಷ್ಟ್ರೀಯ ವಾರ ಪತ್ರಿಕೆ.

ವಾರ್ಷಿಕ ಪೋಷಕ ದ್ರವ್ಯ.
ರಾಜ ಪೋಷಕರು, 10-0-0
ಪೋಷಕರು, 5-0-0

ಸಂಪಾದಕ — ಟಿ. ಬಿ. ಕೇಶವರಾವ್

ವಾರ್ಷಿಕ ಚಂದಾ
ಪರಸ್ಥಳದವರಿಗೆ, 2-0-0
ಬಳ್ಳಾರಿಯವರಿಗೆ, 1-8-0

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ಸಂಚಿಕೆ ೧ ಬಳ್ಳಾರಿ, ಫೆಬ್ರುವರಿ 4 ನೇ ಶನಿವಾರ 1939. ಪ್ರತಿ ೨ಸೆ

ಬಾಬು ಸುಭಾಸಚಂದ್ರ ಬೋಸರ ವಿಜಯ

ಶ್ರೀ. ಸುಭಾಸಚಂದ್ರಬೋಸರು

೧೯೯ ಮತಗಳು ಹೆಚ್ಚಿಗೆ ದೊರೆತವು.

★ ★ ★

ಹೋದವರ್ಷ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಾಬೂ ಸುಭಾಷ ಚಂದ್ರರು ಈ ವರ್ಷ ಮತ್ತೆ ಚುನಾವಣೆಗೆ ನಿಂತಿದ್ದರು. ಈ 20 ವರ್ಷಗಳಲ್ಲಿ ಇಂಥಾ ಚುನಾವಣೆಯು ನಡೆದುದು ಇದೇ ಪ್ರಥಮವಲ. 21 ಪ್ರಾಂತಗಳಲ್ಲಿ ಅವರಿಗೆ ದೊರೆತ ಮತಗಳ ವಿವರವನ್ನು ಇಲ್ಲಿ ಕೊಡಲಾಗಿದೆ.

	ಸುಭಾಸ್.	ಪಟ್ಟಾಭಿ.
ತಮಿಳ ಪ್ರಾಂತ	110	102
ಒರಿಸ್ಸಾ	44	99
ಬರ್ಮಾ	8	6
ಗುಜರಾತ್	5	100
ಪಂಜಾಬ್	182	86
ಬೀರಾರ್ [ವಿದರ್ಭ]	11	21
ಕೇರಳ	80	18
ಬಂಗಾಲ	404	79
ಆಂಧ್ರ	28	181
ಸಂಯುಕ್ತ ಪ್ರಾಂತ	269	185
ದೆಹಲಿ	10	5
ಬಿಹಾರ	70	197
ಮಹಾರಾಷ್ಟ್ರ	77	86
ಆಸ್ಸಾಂ	34	22
ಅಜ್ಮೀರ-ಮಾರ್ವಾಡ	20	6
ಮಹಾಕೋಶಲ	67	68
ಕರ್ನಾಟಕ	106	41
ಸಿಂಧ	13	21
ನಾಗಪುರ	12	17
ಬೊಂಬಾಯಿ ನಗರ	12	14
ಸರಹದ್ದ ಪ್ರಾಂತ	18	23
	1580	1377
ಕಲ್ಪಿತ ಮತಗಳು	5	1
	1575	1376

ನವಭಾರತ.

೧೮-೨-೧೯೩೯ನೇ ತಾರೀಖಿಗೆ ಹೊರಡುವುದು

ಈ ಪತ್ರಿಕೆಯು 'ನವಭಾರತ' ವೆಂಬ ನಾಮಧೇಯದಿಂದ ಈ ತಿಂಗಳು ೧೮ನೇ ತಾರೀಖಿನಿಂದ ಹೊರಡುವುದು. ಹೆಸರಿನಲ್ಲಿ ವ್ಯತ್ಯಾಸವಾಗಲೆ ನೀತಿಯಲ್ಲಿ ವ್ಯತ್ಯಸ್ತವಿಲ್ಲ. ಸದ್ಯಕ್ಕೆ ಪತ್ರಿಕೆಯ ಆಕಾರ ಇಷ್ಟೇ ಇರುವುದು. 'ಕಾಂಗ್ರೆಸ್ ಬುಲೆಟಿನ್' ಪತ್ರಿಕೆಯು ನವಭಾರತದಲ್ಲಿ ಸಮಾವೇಶವಾಗುವುದು. ಚಂದಾ ಹಣವು ಹೆಚ್ಚಿಸಲ್ಪಡುವುದಿಲ್ಲ. ಹೊಸ ಪತ್ರಿಕೆಯ ಸಂಬಂಧ ಕೆಲವ್ಯವಸ್ಥೆಗಳಿಗಾಗಿ ೧೮ನೇ ತಾರೀಖಿನ ಸಂಚಿಕೆಯು ಹೊರಡುವುದಿಲ್ಲ.

ಸಂಪಾದಕ.



ಶನಿವಾರ, ಫೆಬ್ರವರಿ 4, 1939

ಸುಭಾಸಬಾಬುಗಳ ವಿಜಯ.

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ಬಾಬುಸುಭಾಸಚಂದ್ರರು 199 ಹೆಚ್ಚಿನ ಮತಗಳಿಂದ ಆರಿಸಿ ಒಂದರು. ಅವರ ವಿಜಯದಿಂದ 'ಸಂಯುಕ್ತ ರಾಜ್ಯಘಟನೆ' ಯ ಸೋಲಾಯಿತೆಂದು ಧಾರಾಳವಾಗಿ ಹೇಳಬಹುದು. ಈ ಚುನಾವಣೆಯಿಂದ ದೇಶದ ವಿವಿಧ ಪಂಗಡಗಳಲ್ಲಿ ಭಿನ್ನಾಭಿಪ್ರಾಯಗಳುತ್ಪನ್ನವಾಗಿವೆ. ಕಾಂಗ್ರೆಸ್ ಶತ್ರುಗಳು ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಲೆಂದು ಹಾರೈಸುತ್ತಿರುವರು. ಸಮತಾವಾದಿಗಳಲ್ಲಿ ಕೆಲವರು ಇದು ತಮ್ಮ ವಿಜಯವೆಂದು ಭಾವಿಸುತ್ತಿರುವರು. ಮುಂದಗಾಮಿಗಳಾದ ಕಾಂಗ್ರೆಸ್ಸಿನ ಹಿರಿಯರು ಕೆಲವರು ತಮ್ಮ ತೇಜೋಭಂಗವಾಯಿತೆಂದು ಚಿಂತಾಮಗ್ನರಾಗಿರುವರು.

ಇದು ಉಗ್ರವಾದಿಗಳ ವಿಜಯವೂ ಅಲ್ಲ. ಮಂದವಾದಿಗಳ ಸೋಲೂ ಅಲ್ಲ. ಕಾಂಗ್ರೆಸ್ ಹಿರಿಯರ ತೇಜೋಭಂಗವೂ ಅಲ್ಲ. ಈ ಚುನಾವಣೆಯಲ್ಲಿ ಯಾರು ಗೆದ್ದರೂ, 'ಸಂಯುಕ್ತರಾಜ್ಯಘಟನೆ'ಯು ಸೋಲುವುದೆಂದು ಪ ಜವಾಹರಲಾಲರು ಹೇಳಿದಂತಾಯಿತು. ಇಡೀ ಭರತ ಖಂಡದಲ್ಲಿ ಈ ರಾಜ್ಯಘಟನೆಯ ವಿರುದ್ಧ ವ್ಯಕ್ತವಾದ ಭಾವನೆಯೇ ಹೊರತು ಇದು ಮತ್ತೇನೂ ಅಲ್ಲ. ಇದರಿಂದ ಯಾರೂ ಚಿಂತಾಕ್ರಾಂತರಾಗಬೇಕಾಗಿಲ್ಲ. ನಿರಾಶರಾಗುವ ಕಾರಣವಿಲ್ಲ.

ಉಗ್ರವಾದಿಗಳು ಕಾಂಗ್ರೆಸ್ಸಿನಲ್ಲಿ ಅಲ್ಪ ಸಂಖ್ಯಾಕರಿದುವರು. ಇವರು ತಮ್ಮ ವೋಟುಗಳನ್ನೆಲ್ಲಾ ಸುಭಾಸಬಾಬುಗಳಿಗೆ ಕೊಟ್ಟಿರಬಹುದು. ಆದರೆ ಇವರ ವಿಜಯವೆಂದು ಹೇಳಲಿಕ್ಕೆ ಸಾಧ್ಯವೇ ಇಲ್ಲ.

ದೇಶದಲ್ಲಿ ಯಾವಕಡೆನೋಡಿದರೂ ಅಶಾಂತಿ ಹಬ್ಬಿದೆ. ಹಿಂದೂ-ಮುಸಲ್ಮಾನ್ ಕಲಹಗಳು ಅಲ್ಲಲ್ಲಿ ಸಂಭವಿಸುತ್ತಲಿವೆ. ದೇಶೀ ಸಂಸ್ಥಾನಗಳಲ್ಲಿ ಪ್ರಜೆಗಳ ಹಕ್ಕುಗಳು ತುಳಿಯಲ್ಪಟ್ಟು ಪ್ರಜೆಗಳು ಸತ್ಯಾಗ್ರಹವನ್ನು ಹೂಡುತ್ತಿರುವರು. ಯೂರೋಪಿನ ರಾಜಕೀಯ ವಾತಾವರಣವು ಜ್ವಾಲಾಮುಖಿಯಂತಿದ್ದು ಯಾವ ಸಮಯದಲ್ಲಿ ಯುದ್ಧಸ್ಫೋಟವಾಗುವುದೋ ಹೇಳಲಿಕ್ಕೆ ಬರುವಂತಿಲ್ಲ. ಫೈಸ್ರಾಯರು ನಮ್ಮ ಮೇಲೆ ಸಂಯುಕ್ತ ರಾಜ್ಯಘಟನೆಯನ್ನು ಹೇರಲು ಸಂಸಿದ್ಧರಾಗಿ ಅದರ ಪ್ರಚಾರವನ್ನು ಜೋರಿನಿಂದ ಸಾಗಿಸಿದ್ದಾರೆ.

ಇಂಥಾ ಪರ್ವಕಾಲದಲ್ಲಿ ಉಗ್ರಗಾಮಿಗಳೇನು, ಮಂದಗಾಮಿಗಳೇನು, ಎಲ್ಲರೂ ವಟ್ಟುಗೂಡಿ ದೇಶ ಹಿತಕಾರ್ಯದಲ್ಲಿ ನಕ್ಕಟ್ಟಿನಿಂದ ದುಡಿಯಬೇಕಾದುದು ಅತಿ ಅವಶ್ಯಕವಾದ ವಿಷಯವಾಗಿದೆ.

ಡಾ. ಪಟ್ಟಾಭಿಯವರಿಗೆ ಬೆಂಬಲ ಕೊಡಲು ಕೇಳಿಕೊಂಡ ವರ್ಕಿಂಗ್ ಕಮಿಟೀ ಸದಸ್ಯರು ಕಾಂಗ್ರೆಸ್ ರಾಜಕಾರಣದಿಂದ ನಿವೃತ್ತರಾಗಿ ಸಂಘಟನ ಕಾರ್ಯಗಳಲ್ಲಿ ತೊಡಗುವರೆಂಬ ಸುದ್ದಿಯು ಸುಳ್ಳಾಗಲೆಂದು ನಾವು ಆಶಿಸುತ್ತೇವೆ.

ಮಹಾತ್ಮ ಗಾಂಧಿಯವರು ೨೦ ವರ್ಷಗಳಿಂದ ಕಾಂಗ್ರೆಸ್ ಸೂತ್ರಧಾರರಾಗಿದ್ದಾರೆ. ಅವರನ್ನು ಬಿಟ್ಟರೆ ಭಿನ್ನಪಂಗಡಗಳಲ್ಲಿ ಐಕಮತ್ಯವನ್ನುಂಟುಮಾಡುವ ನಾಯಕರು ಇನ್ನಾರಿರುವರು.? ಅವರ ಮಾರ್ಗದರ್ಶಿತ್ವದಲ್ಲಿ ದೇಶವು ಮುಂದಡಿಯಿಡುತ್ತಾ ನಡೆದಿದೆ. ಅವರು ಕಾಂಗ್ರೆಸ್ಸಿನ ಐಕಮತ್ಯಕ್ಕೆ ಸಹಾಯಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ.

ಸುಭಾಸ-ಜವಾಹರ ವಿಚಾರವಿನಿಮಯ

2ನೇ ತಾರೀಖು ಬಾಬೂ ಸುಭಾಸಚಂದ್ರರು ತಮ್ಮ ಪ್ರವಾಸದಿಂದ ಕಲ್ಕತ್ತೆಗೆ ಬಂದೊಡನೆಯೇ ಪಂ. ಜವಾಹರಲಾಲರೊಡನೆ ಮುಂದಿನ ಕಾರ್ಯಕ್ರಮದ ವಿಷಯವಾಗಿ ವಿಚಾರವಿನಿಮಯ ಮಾಡಲು ಶಾಂತಿನಿಕೇತನಕ್ಕೆ ಹೊರಟರು.

ಸೇಟ್ ಜಮನಾಲಾಲರು ಸೆರೆ

೧೪ನೇ ತಾರೀಖು ಸೇಟ್ ಜಮನಾಲಾಲರು ಜಯಪುರ ಹದ್ದಿನಲ್ಲಿ ಕಾಲಿಟ್ಟೊಡನೆಯೇ ಅವರನ್ನು ಪಸ್ತಗಿರಿ ಮಾಡಿ ಗುಪ್ತ ಸ್ಥಳಕ್ಕೊಯ್ದರು. ೨೦ನೇ ತಾರೀಖು ಮಥುರಾಕ್ಕೆ ಕರೆದೊಯ್ದು ಅಲ್ಲಿ ಅವರನ್ನು ಬಂಧಮುಕ್ತ ಮಾಡಿದರು.

ಸಂಡೂರ್ ಸಂಸ್ಥಾನದ ರೈತರ ಪರಿಷತ್ತು

ಸಂಡೂರು ಸಂಸ್ಥಾನದ ರೈತರ ಪರಿಷತ್ತು ಎತ್ತಿ ಸಹಪ್ರಯತ್ನದಲ್ಲಿ ಕೂಡುವುದೆಂದೂ, ಕರ್ನಾಟಕದ ಪ್ರಮುಖ ಕಾಂಗ್ರೆಸ್ ಮುಖಂಡರಿಗೆ ಆಹ್ವಾನಗಳು ಹೋಗಿವೆ ಯೆಂದೂ ಶ್ರೀಯುತಾಳದ ಶಾಂತರುದ್ರಪ್ಪನವರು ತಿಳಿಸುತ್ತಾರೆ.

ಬಳ್ಳಾರಿ ಸಮಾಚಾರಗಳು.

30—1—39ನೇ ತಾ. ಬಳ್ಳಾರಿ ಪುರಸಭೆಯ ಸಮಾವೇಶದಲ್ಲಿ ದಿವಂಗತ ಕೃಷ್ಣಸ್ವಾಮಿನಾಯುಡು ಇವರ ನಿಧನದ ಬಗ್ಗೆ ದುಃಖಸೂಚಕವಾದ ನಿರ್ಣಯವಾಗಿ ಸಭೆಯು ಮುಂದುವರಿಸಲ್ಪಟ್ಟಿತು. 31ನೇ ತಾ. ಜಿಲ್ಲಾ ವಿದ್ಯಾಸಂಘದ ಸಭೆಯು ಸೇರಿ ಶಾಲಾ ಮುಂಜೂರಾತಿಯ ಸಾಮಾನ್ಯ ವಿಷಯಗಳು ಚರ್ಚಿಸಲ್ಪಟ್ಟವು.

31ನೇ ತಾ. ಸಾಯಂಕಾಲ ಹಿಂದೀ ಪದವೀದಾನ ಸಮಾರಂಭೋತ್ಸವವು ಜ. ಅ. ಬಾಸಿತ್ ಸಾಹೇಬರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಕಾರ್ಯದರ್ಶಿಯವರು ವಾರ್ಷಿಕವರದಿಯನ್ನು ಓದಿದಮೇಲೆ ಪಂಡಿತ ಸಿದ್ಧನಾಥ ಪಂತರು ಉಪದೇಶಭಾಷಣ ಕೊಟ್ಟರು. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ (40) ಪ್ರಮಾಣ ಪತ್ರಗಳು ಕೊಡಲಟ್ಟವು ದೊಡ್ಡವರೂ. ಚಿಕ್ಕವರೂ, ಹಿಂದೂಸ್ತಾನೀ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದರು ಚಿಕ್ಕವರಿಗೆ 3 ದೊಡ್ಡವರಿಗೆ 3 ಪಾರಿತೋಷಕಗಳು ಕೊಡಲ್ಪಟ್ಟವು. ರಾಮದಾಸ್ ಎಂಬ ಬಾಲಕನ 'ಹಿಂದೂ ಮುಸಲ್ಮಾ' ಐಕ್ಯದ ಭಾಷಣವು ಎಲ್ಲರನ್ನೂ ಮುಗ್ಧರನ್ನಾಗಿಸಿತು.

ಗೆದ್ದವರು.

ಚಿಕ್ಕವರು		ದೊಡ್ಡವರು.	
ಕೆ. ರಾಮದಾಸ್	I	ಚಂದ್ರಶೇಖರ	I
ಡಿ ಲೀಲಾವತಿ	II	ಬಿ ನಾರಾಯಣರಾವ್	II
ಶ ಕೆ.ವೆಂಕಟರಾವ್	III	ಏ. ಡೇನಿಸ್	III

ಕೆ. ರಾಮದಾಸನಿಗೆ ಒಬ್ಬ ಮಹಿಳಾ ಮಿತ್ರರು ಪ್ರತ್ಯೇಕ ಪಾರಿತೋಷಕವನ್ನು ಕೊಡುವುದಾಗಿ ಜಾಹೀರ್ನಾಡಲಾಯಿತು.

1ನೇ ತಾ. ಸಾಯಂಕಾಲ ಬಾಬೂ ಸುಭಾಸಬೋಸರ ಚಿತ್ರಪಟವು ಮೆರವಣಿಗೆಯಿಂದ ಹೊರತಿಸಲ್ಪಟ್ಟು ಸುವಾದ್ಯದೊಡನೆ ಸಾಂಬಮೂರ್ತಿ ಮೈದಾನವನ್ನು ಸೇರಿತು. ಸರ್ಕಲ್ ಕಾಂಗ್ರೆಸ್ ಸಮಿತೀ ಆಶ್ರಯದಲ್ಲಿ ಶ್ರೀ ಸೀತಾರಾಮರೆಡ್ಡಿಯಲ್ಲಿರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಭಿನಂದನ ಪರಠರಾವಾಯಿತು.

ಸ್ವದೇಶ

—ಜಮನಾಲಾಲ ಬಜಾಜರು ಜಯಪುರ ಸಂಸ್ಥಾನದ ಅಸ್ಪೃಶ್ಯತೆಯನ್ನುಲ್ಲಂಘಿಸಲು 1ನೇ ತಾ॥ ದೆಹಲಿಯಿಂದ ಜಯಪುರಕ್ಕೆ ಹೊರಟರು.

—ಕಲ್ಕತ್ತಾಕ್ಕೆ ಎಂಟು ಮೈಲು ದೂರದಲ್ಲಿನ ಸೋದೇಪುರ ಎಂಬಲ್ಲಿ ಗೋವಧೆಯ ಸಂಬಂಧವಾಗಿ ಹಿಂದೂ ಮುಸಲ್ಮಾನರಿಗೆ ಬಹಿದಾಟನಾಗಿ ಅನೇಕರಿಗೆ ಘಾಯವಾಗಿದೆ. ಬಕ್ರೀದ್ ಸಂಬಂಧವಾಗಿ ಹೀಗಾಗಿರುವದೆಂದು ತಿಳಿದುಬಂದಿದೆ.

—ವಿದ್ಯಾನಂದಿರದ ಪಿಠದ್ದ ನಾಗಪುರದಲ್ಲಿ ಮುಸಲ್ಮಾನರು ಸತ್ಯಾಗ್ರಹವನ್ನು ಹೂಡಿರುತ್ತಾರೆ. ಅನೇಕ ಜನರ ಬಂಧನವಾಗುತ್ತಲಿದೆ.

ಹೊಸಪೇಟೆ

ಹಿಂದೀ ಪ್ರಚಾರ ಕಾರ್ಯ

ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀ ಮಂಡಲದ ಅಧ್ಯಕ್ಷರಾದ ತೀ ವೀರಣ್ಣಶೆಟ್ಟಿಯವರೂ, ಉಪಾಧ್ಯಕ್ಷರಾದ ತೀ ವೇಣುಗೋಪಾಲಾಚಾರ್ಯರೂ, ಪ್ರಚಾರಕರಾದ ಕೇಶವರಾಯರೂ, ಪ್ರಾಂತೀಯ ಹಿಂದೀ ಪ್ರಚಾರಸಭಾ ಮಂತ್ರಿಗಳಾದ ಪಂ॥ ಸಿದ್ಧನಾಥರೊಂದಿಗೆ ಇಲ್ಲಿಗೆ 1ನೇ ತಾ॥ ಆಗಮಿಸಿದರು. ಟ್ರೈನಿಂಗ್ ಸ್ಕೂಲಿನಲ್ಲಿ ನಡೆಯಬೇಕಾದ ಸಭೆಯ ಪ್ರಕಟನೆಗಳು ಹಂಚಲ್ಪಟ್ಟಿದ್ದವು ಶ್ರೀ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಪಂ॥ ಸಿದ್ಧನಾಥರು ಸರಳ ಹಿಂದೀಯಲ್ಲಿ ಹಿಂದೀ ಮಹತ್ವದ ಬಗ್ಗೆ ಭಾಷಣ ಕೊಟ್ಟರು. ಶ್ರೀ ವೇಣುಗೋಪಾಲಾಚಾರ್ಯರೂ, ಕೇಶವರಾಯರು ಮಾತಾಡಿದರು. ಡಾ॥ ಸಾವಿತ್ರೀಬಾಯಿಯವರು ಸಂಸ್ಥೆಯನ್ನು ಸ್ಥಾಪಿಸಲು ಸೂಚಿಸಿದ್ದು ಸರ್ವಾನುಮತದಿಂದ ಒಪ್ಪಿಗೆಯಾಯಿತು. ಒಂದು ತಾತ್ಕಾಲಿಕ ಸಮಿತಿಯು ಏರ್ಪಾಟಾಗಿ ಹಿಂದೀ ಪ್ರಚಾರ ಕಾರ್ಯವನ್ನು ಕೈಕೊಳ್ಳುವುದು ನಿಶ್ಚಿತವಾಯಿತು. ಮತ್ತಿಹಳ್ಳಿಯವರು ಎಲ್ಲರನ್ನೂ ವಂದಿಸಿದರು.

ಪರದೇಶ

—ಚೀನಾ ಯುದ್ಧದಲ್ಲಿ 70 ಸಾವಿರ ಜಪಾನರು ಸತ್ತಿರುವರೆಂದು ಚೀನಾ ಪಾರ್ಲಿಮೆಂಟದಲ್ಲಿ ಮಾರ್ಶಲ್ ಚಿಯಾಂಗ್ ಕೈಶೇಕರು ಹೇಳಿದರು.

—ರಿಪಬ್ಲಿಕ್ ರಾಜದಾನಿಯೂದ ಬಾರ್ಸಿಲೋನಾ ನಗರವು ಶತ್ರುಗಳ ವಶವಾದ್ದರಿಂದ ಸ್ಪೇನ್ ಸರ್ಕಾರಕ್ಕೆ ಶಕ್ತಿಯು ಕುಂದಿತು ಸ್ಪೇನ್ ಪ್ರಧಾನರಾದ ನೆಗ್ರಿನ್ ರವರು ಫ್ರಾನ್ಸ್ ಪ್ರಭುತ್ವದವರೊಡನೆ ಗುಪ್ತ ಸಂಭಾಷಣೆಗಳನ್ನು ನಡೆಸಿರುವರೆಂದು ತಿಳಿದು ಬಂದಿದೆ.

—ಜರ್ಮನಿಯ ಸರ್ವಾಧಿಕಾರಿಗಳಾದ ಹೆರ್ ಹಿಟ್ಲರವರು ಯುದ್ಧ ಪೂರ್ವದ ತಮ್ಮ ವಸಾಹತುಗಳನ್ನು ಕೊಟ್ಟುಬಿಡಬೇಕೆಂದು 30ನೇ ತಾ॥ 6ನೇ ವಾರ್ಷಿಕೋತ್ಸವ ಸಮಯದಲ್ಲಿ ಹೇಳಿದರು.

ಮಿನಾಕ್ಷಿ ಭವನ ಕಾಫೀಕ್ಲಬ್

(ರಿಜಿಸ್ಟರ್ಡ್)

ಶಾಖೆಗಳು **ಕಾಫಿ ಕ್ಲಬ್ ಬೆಂಗಳೂರು ರೋಡ್**

ಊಟ ಮತ್ತು ವಸತಿಗೃಹ ಬ್ರಾಹ್ಮಣ ಬೀದಿ.

ರುಚಿಕರವಾದ ಶುದ್ಧ ತುಪ್ಪದಲ್ಲಿ ತಯಾರಿಸಿದ ಸಿಹಿಫಾರದ ಫಲಹಾರವಸ್ತುಗಳು.

ಒಳ್ಳೆಯ ಊಟದವ್ಯವಸ್ಥೆ ಧಾರಾಳವಾಗಿ ಗಾಳಿ, ಬೆಳಕು, ಬರುವ ಮಹಡಿಯ ಮೇಲಿನ ಕೊಠಡಿಗಳು ಅಧುನಿಕ ವ್ಯವಸ್ಥೆ

ಒಂದು ಸಲ ಬಂದು ಪರೀಕ್ಷಿಸಿರಿ.

Public debt of India

BY

J. C. KUMARAPPA.

(continued from previous issue)

In the very early days, there with unvarnished loot from the country by the agents of the East India Company Macaulay, describing the situation after Plassey, says 'The shower of wealth now fell copiously on the Company and its servants. A sum of eight hundred thonsand pounds sterling, in coined silver, was set down the river from Moorshidabad to fort William. Calcutta, which a few months before had been desolate, was now, more prosperous than ever. Trade revival and the signs of affluence appeared in every English house. As to Clive, there was no limit to his acquisition but his own moderation (Essay on Lord Clive Vol. III p. 240) Brooks Adams bears testimoney that 'Possibly since the world began no investment has ever yielded the profit reaped from the Indian plunder, because, for nearly fifty years Great Britain stood without a competitor'. Thus the arrival of Bengal silver not only increased the mass of money, but stimulated its movement, for, at once in 1759 the Bank issued ten and fifteen pound notes and in the country private firms poured forth a flood of paper (Law of Civilization and Decay, p 317 & 319) It is estimated that between Plassey and Waterloo about one thousand million pounds were transferred from India to England. We can hardly realise the magnitude of this sum when we allow for the very high purchasing power of money in those days

This naked looting proved a little too raw to the sensibilities of the fast developing palate of the Directors of the East India Company. They soon devised a cloak for its nakedness. Goods were bought out of the revenues obtained from the territorial side of the Company's transactions and sent to England to be sold for the benefit of the Directors, leaving this country poorer for the transfer. In less than twenty years a sum of about 130 million pounds was thus transferred to England

As Great Britain advanced in 'Civilisation' these two methods of misappropriation of wealth seemed a little too brazenfaced to the high souled British Politicians holding up the ideals of a Heaven sent mission They beat about for a mete subtle method which will serve the same end without revealing the ugliness of it to the world. Their financial genius pitched upon the method of debits to load India with charges that rightfully belonged to Britain.

To appreciate these three methods, we may seek parallels for them in private finance. The first is equivalent to a trustee actually taking away the cash from the trust funds. The second one is like carrying on a speculation on the trustee account with trust funds. The third is the most heinous of all because of the difficulty of its detection and the meanness of its plan. It corresponds to a trustee debiting his personal expenses to the trust account without the beneficiary of the trust knowing anything about it

In the chapters that follow some of the principal items that have been charged to Indian revenues will be brought under the searchlight with the aid of eminent Britishers or with the help of evidence from trustworthy documents such as the reports of Parliamentary Committees etc

II. PRIOR TO 1857

During this period the Government rested with the East India Comany which played ducks and drakes with its accounts and finances, so that, it is difficult for us to compute with any degree of exactitude the amount that was misappropriated. The revenues from the territorial side were used for commercial purposes and ultimately found its way into the pockets of the shareholders, while the deficits on the territorial side of the administration accumulated and became part of the 'public debt'. According to the Indian Expenditure Commission generally known as the Webly Commission of 1895, paragraph 117 of their report, 'The Statistics of the Company leave much to be desired in precission and the figures of the early years must be taken only as approximate."

[To be continued]

ದೇಶೀ ಸಂಸ್ಥಾನಗಳು

ಲೇ:- ಮಹಾತ್ಮ ಗಾಂಧಿ

(ಹರಿಜನ ತಾ|| ೨೮-೧-೩೯)

ಹಿಂದೀ ಸಂಸ್ಥಾನಗಳಲ್ಲಿನ ಸ್ವಾತಂತ್ರ್ಯ ಯುದ್ಧದಲ್ಲಿ ಹೊಸ ಪ್ರಕರಣವು ಪ್ರಾರಂಭವಾಗಿದೆ. ಇತಿಹಾಸದ ಪುನರಾವೃತ್ತಿಯಾಗಹತ್ತಿದೆ. ತಲಚೇರ ಮತ್ತು ಫೆನಕನಾಲದಲ್ಲಿ ದಬ್ಬಾಳಿಕೆ ಪ್ರಾರಂಭಿಸಿ ಎರಡನೆಯವರಿಗೆ ಪಾಠ ಹಾಕಿಕೊಟ್ಟಂತಾಗಿದೆ. ತಲಚೇರದಲ್ಲಿ ಒಟ್ಟಿಗೆ ಇರುವ 75000 ಜನರಲ್ಲಿ 26000 ದಷ್ಟು ಜನರು ಸಂಸ್ಥಾನ ಸೀಮೆ ಬಿಟ್ಟು ಬ್ರಿಟಿಷ ಹದ್ದಿಯನ್ನು ಸೇರಿದ್ದು ಕ್ಷುಲ್ಲಕವಾದ ಸಂಗತಿಯಲ್ಲ. ಸಂಸ್ಥಾನ ಬಿಟ್ಟು ಹೋದ ಈ ನಿರಾಶ್ರಿತರ ಹೃದಯದ್ರಾವಕ ಕಷ್ಟನಷ್ಟಗಳನ್ನು ಪ್ರೊ. ರಂಗಾ ಇವರು ಮನಕರಗುವಂತೆ ಚಿತ್ರಿಸಿದ್ದಾರೆ. ಥಕ್ಕರಬಾಪಾ ಇವರೂ ಪ್ರೊ. ರಂಗಾ ಇವರು ಬರೆದುದಕ್ಕೇ ಬೆಂಬಲ ಕೊಡುತ್ತಿರುವರು. ಥಕ್ಕರಬಾಪಾ ಇವರು ಒಳ್ಳೇ ಸಮಾಜ ಸುಧಾರಕರಿದ್ದು ಯಾವದೇ ಭಾಗದಲ್ಲಿ ಕಷ್ಟನಷ್ಟಗಳಿಗೊಳಗಾದ ಜನತೆಗೆ ಸರ್ವವಿಧ ಸಹಾಯ ಮಾಡಲು ಧಾವಿಸಿ ಹೋಗುವಷ್ಟು ಉದಾರ ಚರಿತರಿರುವರು. ತಲಚೇರಿ ಸಂಸ್ಥಾನದ ಈ ನಿರಾಶ್ರಿತ ಪ್ರಜೆಗಳು ಕಳೆದೆರಡು ತಿಂಗಳಿಂದ ಮನೆ ವಾರುಗಳನ್ನು ಬಿಟ್ಟು ಅಲೆದಾಡುತ್ತಿರುವರು. ಇಷ್ಟರಲ್ಲಿಯೇ ಅವರು ತಮ್ಮ ಮನೆಗೆ ಹೋಗಬಹುದೆಂದು ನಾನು ಆಶಿಸಿದ್ದೆನು. ಆದರೆ ಈ ಜನರಿಗೆ ಶಾಂತಿಕಾಲವಿನ್ನೂ ಪ್ರಾಪ್ತವಾಗಿಲ್ಲೆಂದು ತೋರುತ್ತದೆ. ಆ ಜನರಿಗೆ ಪರಿಹಾರ ಕೊಡುವದು ಓಡಿಸಾ ಪ್ರಾಂತ್ಯದವರೊಬ್ಬರಿಂದಲೇ ಶಕ್ಯವಾಗಲಾರದು. ಓಡಿಸಾ ಸರಕಾರದ ಹತ್ತಿರವೂ ಸಾಕಷ್ಟು ಹಣವಿಲ್ಲ. ಮಾರವಾಡೀ ಪರಿಹಾರ ಸಮಿತಿಯವರು ಈ ನಿರಾಶ್ರಿತರಿಗೆ ಕೆಲಸ ಕೊಟ್ಟರು. ಅವರಿಗೆ ಪರಿಹಾರಕೊಡುವ ಕಾರ್ಯವನ್ನು ಕೈಕೊಳ್ಳವರೆಂದು ನನ್ನ ಆಶೆ.

ರಾಣಪುರದಲ್ಲಿ

ರಾಣಪುರ ಸಂಸ್ಥಾನದಲ್ಲಿ ಪೊಲಿಟಿಕಲ್ ಏಜಂಟಿನ ಕೊಲೆಯಾಯಿತು. ಪೋಲೀಸರು ಮತ್ತು ಸೈನಿಕರು ನಿರಪರಾಧಿ ಸ್ತ್ರೀ ಪುರುಷರನ್ನು ಥಳಿಸಿ ಚಿಕ್ಕಂದವಾಡುತ್ತಿರುವರು. ಓಡಿಸಾ ಸರಕಾರದವರು ತಾವೇ ಪರಿಸ್ಥಿತಿಯನ್ನು ಹಿಡಿತದಲ್ಲಿಡುವರೆಂದೂ ಮನಬಂದಂತೆ ದಬ್ಬಾಳಿಕೆ ನಡಿಸಲು ಹಿಂದುಸ್ತಾನ ಸರಕಾರದವರಿಗೆ ಅವಕಾಶ ಕೊಡಲಿಕ್ಕಿಲ್ಲೆಂತಲೂ ನಾನು ನಂಬುತ್ತೇನೆ. ತಮ್ಮ ಜಾತಿಯ ಯಾವನೊಬ್ಬನ ತಲೆಕೋದರೆ ಹಿಂದುಸ್ತಾನ ಸರಕಾರವ ಪಿತ್ತವು ನೆತ್ತಿಗೇರುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಪೋಲಿಟಿಕಲ್ ಏಜಂಟ ಬೆಥುಲಗೆಟೆ ಇವರ ಕೊಲೆಯಿಂದ ಅವರ ತಲೆ ಕೆಟ್ಟುಹೋಗಿದೆ. ಇಂಥ ಕೊಲೆಪಾತಕಗಳಿಂದ ನಮಗಾವ ಬಗೆಯ ಲಾಭವೂ ಆಗಲಾರದೆಂಬುದನ್ನು ಈ ಕೊಲೆಯಿಂದಲಾದರೂ ನಾವು ತಿಳಿದುಕೊಳ್ಳಬೇಕು.

ಜಯಪುರದಲ್ಲಿ

ಜಯಪುರ ಪ್ರಜೆಗಳಿಗೆ ಅವರ ಹಕ್ಕುಬಾಧ್ಯತೆಗಳ ಜ್ಞಾನ ಮಾಡಿಕೊಟ್ಟು ಜಬಾಬದಾರ ರಾಜ್ಯಪದ್ಧತಿಯ ಸರಕಾರವನ್ನು ಬೇಡುವಂತೆ ಅವರಿಗೆ ಶಿಕ್ಷಣ ಕೊಡುವದುಕೂಡ ಆ ಸಂಸ್ಥಾನಿಕರಿಗೆ ಸಹನೆಯಾಗಲೊಲ್ಲದು. ಅಂತೆಯೇ ಅವರು ತನ್ನ ಪ್ರಮುಖ ಪ್ರಜೆಗಳನ್ನು ಜೀವಂತ ಹುಗಿದು ಬಿಡಬೇಕೆಂದು ಪದ್ಯಕ್ಕೆ ಬಗೆದಿದ್ದಾರೆ.

ರಾಜಕೋಟದಲ್ಲಿ

ತಮ್ಮ ಪ್ರಜೆಗಳಿಗೆ ಕೊಟ್ಟ ವಚನವನ್ನು ಮುರಿದು ಕೊಟ್ಟನಾತಿಗೆ ತಿರುಗಿ ಬೀಳಲು ರಾಜಕೋಟದ ಠಾಕೂರರಿಗೆ ಅವರ ಸಲಹೆಗಾರರು ಹಚ್ಚಿದ್ದಾರೆ. ನನ್ನಕಡೆಗೆ ಬಂದ ಕಾಗದ ಪತ್ರಗಳಮೇಲೆ ವಿಶ್ವಾಸವಿಡುವದಾದರೆ ಈ ವಚನಭಂಗಕ್ಕೆ ವೆಸ್ಟರ್ನ್ ಇಂಡಿಯಾ ಸ್ಟೇಟ್ಸಗಳ ರೆಸಿಡೆಂಟ ಸಾಹೇಬರು ಪಾಲುಗಾರರಿರುವರೆಂದು ಹೇಳಬಹುದು. ರೆಸಿಡೆಂಟರಿಗೆ ಕಾಂಗ್ರೆಸ್ಸು ಮತ್ತು ಸರ್ದಾರ ಪಟೇಲರಿಂದರೆ ಬಹಿಷ್ಕೃತರು ರಾಜಕೋಟದಲ್ಲಿ ಹಿಂದೂ ಮುಸಲ್ಮಾನ ಮತ್ತು ಸಾಮಾನ್ಯ ಜನರು ಸಾಗು ಭಾಯಾತರಲ್ಲಿ ಜಗಳ ಹಚ್ಚಲು ಪೂರ್ವ ಸಿದ್ಧತೆಯನ್ನು ಮಾಡಹತ್ತಿದ್ದಾರೆ. ಇಷ್ಟು ದಿನಗಳ ವರೆಗೆ ಇವರಾರೂ ಜಗಳವಾಡಿಲ್ಲ. ತಮ್ಮ ಸ್ವಾತಂತ್ರ್ಯದ ವಿರುದ್ಧವೇ ಹೋರಾಡಲು ಮುಸಲ್ಮಾನರು ಮತ್ತು ಭಯಾತರು ಸಿದ್ಧರಾಗಲಿಕ್ಕಿಲ್ಲೆಂದು ನಂಬಲಾಗಿದೆ. ಸುಧಾರಣೆಯನ್ನಪೇಕ್ಷಿಸುವನರ ಕರ್ತವ್ಯವು ಸ್ಪಷ್ಟವಿದೆ. ಯಾವದೇ ಬಗೆಯ ವ್ಯಾಜ್ಯವನ್ನು ಅವರು ಬಿಟ್ಟುಬಿಡತಕ್ಕದ್ದು. ಪ್ರಸಂಗ ಬಂದರೆ ತಮ್ಮವರ ಕಡೆಯಿಂದಲೆ ಮರಣ ಹೊಂದಲು ಕೂಡ ಅವರು ಸಿದ್ಧರಾಗಬೇಕು. ಅಹಿಂಸಾತ್ಮಕ ಅಸಹಕಾರಾಸ್ತ್ರವನ್ನು ಅವರು ಒಳ್ಳೇ ಯಶಸ್ವಿಯಾಗಿ ಉಪಯೋಗಿಸಿದ್ದುಂಟು. ಅವರು ಸಂಪೂರ್ಣವಾಗಿ ಅದನ್ನೇ ಉಪಯೋಗಿಸಿ ಶಾಂತರೀತಿಯಿಂದ ಕೂಡ್ರಬೇಕು. ಜನತೆಯೇ ಒಡೆಯರು ಅರಸರು ಮತ್ತು ಅಧಿಕಾರಿಗಳು ಅವರಸೇವಕರಿದ್ದು ಒಡೆಯರಾಪ ಜನತಾಜನಾರ್ದನನು ಹೇಳಿದಂತೆ ಅವರು ಕೆಲಸ ಮಾಡಬೇಕು. ಒಮ್ಮನಸ್ಸಿನಿಂದ ವಿಚಾರ ಮಾಡಿ ಕಾರ್ಯ ಮಾಡುವ ಕಲೆ ಗೊತ್ತಿದ್ದ ಜಾಗ್ರತ ಜನರಿಗೆ ಮೇಲಿನ ವಾಕ್ಯವು ಅಕ್ಷರಶಃ ಸರಿಹೋಗುವದು.

ಉಳಿದ ಸಂಸ್ಥಾನಗಳು.

ಉಳಿದ ಸಂಸ್ಥಾನಗಳಲ್ಲಿಯ ಪ್ರಜೆಗಳಾದರೂ ಸಾವಕಾಶವಾಗಿ ಮುಂದಡಿಯಿಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ತಾಳ್ಮೆ ಮತ್ತು ಆತ್ಮ ಸಂಯಮನೆ ಅವರಲ್ಲಿದ್ದರೆ ಸ್ವಾತಂತ್ರ್ಯವು ಕಟ್ಟಿಟ್ಟದ್ದೇ. ಪ್ರತಿಯೊಂದು ಸಂಸ್ಥಾನದಲ್ಲಿಯ ಜನರು ತಮ್ಮತಮ್ಮೊಳಗೆ ಸಂಘಟನೆ ಮಾಡಿಕೊಳ್ಳಬೇಕು. ತಮ್ಮ ಬಲದ ಅರಿವು ಅವರಲ್ಲಿ ಉಂಟಾಗಬೇಕು. ಅವರವರಲ್ಲಿ ಒಡುಕುಂಟಾಗಬಾರದು. ಒಡಕುಂಟು ಮಾಡಿ ಆಳುವ ಬೇಜವಾಬ್ದಾರ ಅಡಳಿತೆಯನ್ನು ಹೇಗೆ ಸದೆಬಡೆಯಬೇಕೆಂಬದರ ಜ್ಞಾನವು ಅವರಿಗೆ ಆಗಲಿಕ್ಕೇಬೇಕು. ರಾಜಕೀಯ ಕಾರ್ಯ

ಕರ್ತವ್ಯಕ್ಕೆ ಅಹಿಂಸೆಯ ಮಾರ್ಗವು ಗೊತ್ತಾದರೆ ಈ ಕಾರ್ಯವು ಬಹಳ ಬೇಗ ಸಾಧ್ಯವಾಗುವದು.

ತ್ರಾವಣಕೋರ ಸಂಸ್ಥಾನ ಪ್ರಜೆಗಳು ಒಳ್ಳೇ ದಕ್ಷರಾಗಿರಬೇಕು. ಹಿಂದೂ ಕ್ರಿಶ್ಚನ ಮತ್ತು ಎಝುವಾ ಜನರಲ್ಲಿ ಮತಭೇದಗಳನ್ನು ಕಲ್ಪಿಸಿ ಬಡೆದಾಟ ಹಚ್ಚಬೇಕೆಂಬ ಪ್ರಯತ್ನ ನಡೆದಿದೆಂಬುದಾಗಿ ನನ್ನ ಕಡೆಗೆ ಸಾಕಷ್ಟು ಸಾಧಾರಣ ಕಾಗದ ಪತ್ರಗಳಿವೆ. ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರವು ಬೇಕಿದ್ದರೆ ತಾವು ಬೇರೆ ಬೇರೆ ಜಾತಿಯವರೆಂಬದನ್ನು ಅವರು ಮರೆತು ಬಿಡಲಿಕ್ಕೆಬೇಕು. ತಾವೆಲ್ಲ ಒಂದೇ ಜನತಾಂಗದವರು, ಅವಿಭಾಜ್ಯ ರಾಜಕೀಯ ಘಟನವೆಂದರೆ ಅವರು ತಿಳಿಯಲಿಕ್ಕೆ ಬೇಕು ಮತ್ತು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು. ಅಹಿಂಸಾತ್ಮಕ ಮಾರ್ಗದಿಂದ ಸ್ವಾತಂತ್ರ್ಯವನ್ನು ಪಡೆಯುವ ಇಚ್ಛೆ ಅವರಿಗಿದ್ದರೆ ಪೋಲೀಸರ ಸಹಾಯವಿಲ್ಲದೆ ತ್ರಾವಣಕೋರ ಸಂಸ್ಥಾನದಲ್ಲೆಲ್ಲ ಶಾಂತಿಯನ್ನು ನೆಲೆಸುವ ಜವಾಬ್ದಾರಿಯನ್ನು ಅವರು ವಹಿಸಲಿಕ್ಕೆಬೇಕು. ಅಜ್ಞ ಜನಸಾಮಾನ್ಯರಲ್ಲಿ ಪ್ರಚಾರ ಕಾರ್ಯ ಮಾಡಲು ಸಭೆ ಮೆರವಣಿಗೆ ಮುಂತಾದವುಗಳು ಅತ್ಯವಶ್ಯ. ನಾಗರಿಕತ್ವದ ಅರಿವುಂಟಾದ ಜನರಿಗೆ ಇವೆಲ್ಲ ಬೇಕಾಗಿಲ್ಲ. ಅಂತೆಯೇ ಸ್ವರಾಜ್ಯವು ಅಜ್ಞ ಜನರಿಗಾಗಿರದೆ ಎಚ್ಚತ್ತ ಜನರ ಸಲುವಾಗಿಯೇ ಇದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿ ಹೊಸ ಅಧಿಕಾರಿ ವರ್ಗ

ಸುಭಾಸಚಂದ್ರ ಬೋಸರಿಗೆ ಕರ್ನಾಟಕದ ಬೆಂಬಲ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಸಭೆಯು ಮೊನ್ನೆ ರವಿವಾರ ಧಾರವಾಡದಲ್ಲಿ ಕೂಡಿತ್ತು. ಸಭೆಗೆ ಒಟ್ಟು 163 ಸದಸ್ಯರಲ್ಲಿ 148 ಜನರು ಒಂದಿದ್ದರು. ವರದಿ ವಾಚನ ಮೊದಲಾದ ಕಾರ್ಯಕ್ರಮಗಳಾದ ಬಳಿಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧಿಕಾರಿ ವರ್ಗದ ಆಯ್ಕೆಯಾಯಿತು.

ಶ್ರೀ ಹೊಸಮನಿ ಸಿದ್ದಪ್ಪನವರು ಅಧ್ಯಕ್ಷರಾಗಿಯೂ, ಶ್ರೀಮತಿ ಕಮಲಾದೇವಿ ಮತ್ತು ಟಿ. ಸಿದ್ದಲಿಂಗಯ್ಯ (ನೈಮೂರ) ಇವರು ಉಪಾಧ್ಯಕ್ಷರಾಗಿಯೂ ನಾ. ಸು. ಹರಡೀಕೇರ ಮತ್ತು ಶ್ರೀಮತಿ ನುಲ್ಕ (ಮಂಗಳೂರು) ಇವರು ಕಾರ್ಯದರ್ಶಿಗಳಾಗಿಯೂ ಶ್ರೀಮತಿ ಕೃಷ್ಣಾಬಾಯಿ ಪಣಜೀಕೇರ ಅವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷಪದದ ಚುನಾವಣೆಯಾಗಿ ಬಾಬು ಸುಭಾಸಚಂದ್ರಬೋಸರಿಗೆ 106 ಮತಗಳೂ ಡಾ ಪಟ್ಟಾಭಿಸೀತಾರಾಮಯ್ಯನವರಿಗೆ 41 ಮತಗಳೂ ಬಿದ್ದವು ಒಂದು ಮತವು ರದ್ದಾಯಿತು.

ಕ. ಪ್ರಾಂ. ಕಾಂ. ಸಮಿತಿ

ಪ್ರಚಾರಕ್ಕಾಗಿ ಮೋಟಾರು ಕಾರ್

ಧಾರವಾಡ 31

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಭೆಯ ನಿನ್ನೆಯ ದಿನ ಸಾಯಂಕಾಲ ಸೇರಿತ್ತು. ಶ್ರೀ ಹೊಸಮನಿ ಸಿದ್ದಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಕಾಂಗ್ರೆಸ್ ಪ್ರಚಾರಕ್ಕಾಗಿ ತಾವೊಂದು ಮೋಟಾರು ಕಾರನ್ನು ಕೊಡುವುದಾಗಿ ಶ್ರೀ ಸಿದ್ಧಪ್ಪನವರು ವಚನವಿತ್ತರು.

ಸಿರುಗುಪ್ಪಾ ತಾ|| ಹಚ್ಚೊಳ್ಳಿ ರೈತರ ಮೊರೆ

ಬಳ್ಳಾರಿ ಜಿಲ್ಲಾ, ಸಿರುಗುಪ್ಪಾ ತಾ|| ಹಚ್ಚೊಳ್ಳಿಯ ರೈತರು ಕಲೆಕ್ಟರ್, ಡೆಪ್ಯುಟಿ ಕಲೆಕ್ಟರ್ ಮತ್ತು ತಹಶೀಲ್ದಾರರವರಿಗೆ ಈ ಕೆಳಕಂಡ ಅರ್ಜಿಯನ್ನು ಕಳುಹಿಸಿದ್ದಾರೆ. **ಅವರ ಬೇಡಿಕೆಯು ನ್ಯಾಯವಾಗಿದ್ದು, ಸರ್ಕಾರದವರು ಅವರಿಗೆ ತಕ್ಕ ಸಹಾಯವನ್ನು ಕೂಡಲೇ ಮಾಡುವರೆಂದು ನಾವು ಸಂಬುತ್ತೇವೆ.**

'1347ನೇ ಫಸಲಿ ಬಾಬತು ಲ್ಯಾಂಡು ರೆವಿನ್ಯೂ ನಮ್ಮ ಗ್ರಾಮದ ತಿಮ್ಮೂಂಡು ಪೈಕಿ ಅರ್ಧ ತರಮು ಸೆಸ್ಸನ್ನು ಸಸ್ಪೆಂಡು ಮಾಡಿ 1348ನೇ ಫಸಲಿಗೆ ವಸೂಲ್ಮಾಡಲು ಸರ್ಕಾರದವರು ಉತ್ತರ ಮಾಡಿರುತ್ತಾರೆ. ನಮ್ಮ ಗ್ರಾಮದ ಪೈರುಗಳು ಹುಳಗಳಿಂದ ಬಹಳ ನಷ್ಟವಾಗಿವೆ. ಮತ್ತು ಸಸ್ಪೆಂಡಾದ ಮೊತ್ತವನ್ನು 1348ರಲ್ಲಿ ವಸೂಲು ಮಾಡಬಾರದೆಂದು ಪ್ರಾರ್ಥನೆ ಮಾಡುತ್ತೇವೆ.

ಬಡವರಿಗೂ, ಭಾಗ್ಯವಂತರಿಗೂ ಏಸೆಮಾಡಲು ಹೆಚ್ಚಿನ ಸೌಕರ್ಯಗಳುಂಟು.
ಪದ್ಧತಿಗಳಲ್ಲಿ ನಾವೀನ್ಯತೆ ಸುಲಭದರದ ಕಂತುಗಳವಿಶೇಷತೆ,
ಯುಳ್ಳ
ಅತ್ಯುತ್ತಮ ಸಂಸ್ಥೆ
ದಿ
ಏಶಿಯನ್ ಅಶೂರೆನ್ಸ್ ಕಂಪನಿ,
ಲಿಮಿಟೆಡ್.
[ಹಿಂದೂಸ್ಥಾನದಲ್ಲಿ ಸ್ಥಾಪಿತ 1910]
ಹೆಡ್ ಆಫೀಸ್– ಬಾಲಾರ್ಡ್ ಎಸ್ಟೇಟ್ ಫೋರ್ಟ್, ಮುಂಬೈ.
ಅಪಾಯ ವದಗಿದ ಕಾಲದಲ್ಲಿ, ಸಂಪಾದಿಸಲಾಗದ ಪರಿಸ್ಥಿತಿಯಲ್ಲಿ, ವೃದ್ಧಾಪ್ಯದಲ್ಲಿ ನಿಮಗೆ ಸಹಾಯ ಬೇಕಲ್ಲವೇ? ಹಾಗಾದರೆ, ನಿಮ್ಮ ಪರಿಸ್ಥಿತಿಗೆ ಅನುಕೂಲಿಸುವ ಪಾಲಿಸಿಗೆ ಏರ್ಪಡಿಸಲು ನಾವು ಸಿದ್ಧರಿದ್ದೇವೆ. ಭಾರತೀಯರು ಹೆಮ್ಮೆ ಪಡಬಹುದುದಾದ, ಬಲಿಷ್ಠತ್ತರವಾದ ಆರ್ಥಿಕ ಭದ್ರತೆಯುಳ್ಳ ವಿಮಾಸಂಸ್ಥೆ. ವಿವರಗಳಿಗೆ ಬರೆಯಿರಿ.
ಬ್ರಾಹ್ಮಣರ ಬೀದಿ ಎ. ಪಾರ್ಥಸಾರಥಿ, ಬಿ. ಎ.
ಬಳ್ಳಾರಿ. ಚೀಫ್-ಆರ್ಗನೈಜರ್

ಸುಭಾಷಚಾಬುಗಳ ವಿಜಯದ ಬಗ್ಗೆ
ಮಾ. ಗಾಂಧಿಯವರ ಮಹತ್ವದ ಪ್ರಕಟಣೆ

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಕುರಿತು ಮಹಾತ್ಮ ಗಾಂಧಿಯವರು ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದರ ಸಾರಾಂಶವು ಈಪ್ರಕಾರವಿದೆ.

ಸುಭಾಸರು ಪುನಃ ಅಧ್ಯಕ್ಷರಾಗಿ ಆರಿಸಲ್ಪಡಲು, ನಾನು ಮೊದಲಿನಿಂದಲೂ ವಿರೋಧಿ ಇದ್ದೆನೆಂಬುದನ್ನು ವಪ್ಪಿಕೊಳ್ಳಿ ಬೇಕಾಗಿದೆ. ಆ ಕಾರಣಗಳನ್ನು ಕುರಿತು ಇಲ್ಲಿ ಚರ್ಚಿಸುವುದ ನಾವಶ್ಯಕ. ತಮ್ಮ ಸಹೋದ್ಯೋಗಿಗಳ ವಿಷಯವಾಗಿ ಅವರು ಅಂದಿರುವ ಮಾತುಗಳು, ನಿರಾಧಾರವೂ, ಅಯೋಗ್ಯವೂ ಇವೆ ಅದರೂ ಸುಭಾಸರ ಜಯದಿಂದ ನನಗೆ ಆನಂದವಾಗಿದೆ. ಮೌಲಾನಾ ಆಜಾದರು, ತಮ್ಮ ಉಮೇದುವಾರಿಕೆಯನ್ನು ಹಿಂದೆಗೆದುಕೊಂಡಮೇಲೆ ಪಟ್ಟಾಭಿಯವರು ಹಿಂತೆಗೆದುಕೊಳ್ಳದಂತೆ ನಾನೇ ಪ್ರೇರೇಪಿಸಿದ್ದರಿಂದ ಈ ಅಪಜಯವು, ಪಟ್ಟಾಭಿಯವರದಲ್ಲ. ನನ್ನದು.

ವರ್ಕಿಂಗ್ ಕಮಿಟಿಯಲ್ಲಿ ಏಕಮತದವನ್ನೇ ತೆಗೆದು ಕೊಂಡು ತಮ್ಮ ಕಾರ್ಯಕ್ರಮವನ್ನು ಆಚರಣೆಯಲ್ಲಿ ತರಲು ಈಗ ಸುಭಾಸರಿಗೆ ಅವಕಾಶದೊರೆತಿದೆ. ಈ ಚುನಾವಣೆಯಿಂದ ಬಾಸನ ಸಭಾ ಕಾರ್ಯಕ್ರಮಗಳು ಬದಲಾವಣೆ ಹೊಂದ ಬಹುದು. ಈಗಿರುವ ಮಂತ್ರಿಗಳು ಪೂರ್ವದಲ್ಲಿದ್ದ ಬಹು ಮತದಿಂದ ಆರಿಸಲ್ಪಟ್ಟಿದ್ದಾರೆ. ಇನ್ನು ಕಾಂಗ್ರೆಸ್ ಮಂತ್ರಿಗಳು ತನ್ನು ಸ್ಥಾನಗಳಿಗಾಗಿ ಪ್ರತಿದಿನ ಎದುರುನೋಡಬೇಕಾದೀತು. ಯಾವದೇ ವಂದು ವಿಷಯಕ್ಕಾಗಿ ಅವರು ಮಂತ್ರಿ ಪದ ಬಿಟ್ಟುಕೊಡಬೇಕಾಗಬಹುದು. ಇಲ್ಲವೇ ಕಾಂಗ್ರೆಸ್ಸಿನೊಡನೆ ಭಿನ್ನಾಭಿಪ್ರಾಯವಾಗಿ ರಾಜೀನಾಮೆ ಕೊಡಬಹುದು. ಸುಭಾಸರೇನೂ ದೇಶದ ವೈರಿಯಲ್ಲ. ಭರತಖಂಡಕ್ಕೆ ಅವರು ದೇಹಸವೆಸಿದ್ದಾರೆ. ಅವರ ಕಾರ್ಯಕ್ರಮವಲ್ಲೀ ಅವರಿಗೆ ವಿಶ್ವಾಸ ಹೆಚ್ಚು ಅವರಿಗೆಜಯವಾಗಲ್ಲಿಂಯ ಅಲ್ಪಮತದವರು ಹಾರೈಸಬೇಕು. ಬಹುಮತದವರಿಗೆ ವಿರೋಧಿಸದೆ ಸಹಾಯ ಮಾಡಬೇಕು. ಬೇಡವಾದರೆ ದೂರಸರಿದು ನಿಲ್ಲಬೇಕು.

ಕಾಂಗ್ರೆಸ್ ಶುದ್ಧೀಕರಣ ವಿಷಯ ಎಲ್ಲರಿಗೂ ಅನ್ವಯಿಸುತ್ತಲಿದೆ. ಕಾಂಗ್ರೆಸ್ಸಿನಲ್ಲಿ ದಿನ ದಿನವೂ ಕೊಳೆ ಹೆಚ್ಚುತ್ತಲಿದೆ ಇದನ್ನು ಶುದ್ಧಾರಿಸಲು ಪ್ರಯತ್ನಿಸಬೇಕು.

ಶ್ರೀ ಗೋಪಾಲಸ್ವಾಮಿ ಮೊದಲಿಯಾರರವರು ದಿವಂಗತರಾದರು

ಬಳ್ಳಾರಿಯ ಸುಪ್ರಸಿದ್ಧ ಶ್ರೀಮಂತರಲ್ಲೊಬ್ಬರೂ ನಾಗರೀಕರೂ, ವಕೀಲರೂ ಆದ ಶ್ರೀ ಗೋಪಾಲಸ್ವಾಮಿ ಮೊದಲಿಯಾರ್‌ರವರು 2 ನೇ ತಾ. ಪ್ರಾತಃಕಾಲ ಮದ್ರಾಸಿನಲ್ಲಿ ತಮ್ಮ ಅಳಿಯಂದಿರ ಮನೆಯಲ್ಲಿ ದಿಗಮಂತರಾದರು. ಒಂದೆರಡು ತಿಂಗಳಿಂದ ಇವರಿಗೆ ಪಾರ್ಶ್ವವಾಯುವು ಪ್ರಾಪ್ತವಾಗಿತ್ತು ಮದ್ರಾಸಿನಲ್ಲಿ ಒಳ್ಳೆಯ ಉಪಚಾರವು ನಡೆದೀತೆಂದು ಅಲ್ಲಿಗೆ ಹೋಗಿದ್ದರು. ಇವರು ಅನೇಕ ವರ್ಷಗಳಕಾಲ ಬಳ್ಳಾರಿ ಪುರ ಸಭೆ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿಯೂ, ಪಬ್ಲೀಕು ಪ್ರಾಸಿಕೂಟರಾಗಿಯೂ, ಸುಮಾರು 6 ವರ್ಷಗಳಕಾಲ ನ್ಯಾಯವಿಧಾಯಕಸಭೆಯ ಸದಸ್ಯರಾಗಿಯೂ ಇದ್ದರು. ಸಾಯುವಕಾಲಕ್ಕೆ ಕಾಸ್ಮಾಪಾಲಿಟನ್‌ಕ್ಲಬ್ ಮತ್ತು ಬಂಧಮುಕ್ತ ಕೈದಿಗಳ ಸಹಾಯಸಂಘಕ್ಕೆ ಅಧ್ಯಕ್ಷರಾಗಿದ್ದರು. ಜಿಲ್ಲಾ ಬೋರ್ಡು ಚುನಾವಣೆಯಕಾಲಕ್ಕೆ "ದಿವಾನು ಬಹದ್ದೂರ" ಪದವಿಯನ್ನು ತ್ಯಜಿಸಿ ಕಾಂಗ್ರೆಸ್ಸಿಗೆ ಸೇರಿದ್ದರು. ಇವರು ಅನೇಕ ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿರುತ್ತಾರೆ. ಇವರ ಜ್ಞಾಪಕಾರ್ಥವಾಗಿ ನಿನ್ನೆಯದಿನ ಶಾಲೆಗಳು, ಕೆಲಸಂಸ್ಥೆಗಳು ಮುಚಲ್ಪಟ್ಟಿದ್ದವು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ನೆಯಿಗೆಯವರ ಆರ್ಥಿಕ ದುಸ್ಥಿತಿ
ಮೊಳಕಾಲ್ಮುರು

ಮೈಸೂರು ಔದ್ಯೋಗಿಕ ಶಾಖೆಯ ಸೂಪರಿಂಡೆಂಟರವರು ಇಲ್ಲಿಗೆ 28ನೇ ತಾ, ದಯಮಾಡಿಸಿದ್ದಾಗ ನೆಯಿಗೆಯವರ ಆರ್ಥಿಕ ಉನ್ನತಿಗಾಗಿ ಕೆಲ ಸಲಹೆಗಳನ್ನು ಮಾಡಲಾಯಿತು.

ನೆಯಿಗೆಯವರು ತಯಾರಿಸುತ್ತಿರುವ ಮಾಲು, ರೇಷ್ಮೆಯ ದಿರಲಿ, ನೂಲಿನದಿರಲಿ ಅದಕ್ಕೆ ಗಿರಾಕಿಗಳಿಲ್ಲ. ಇದಕ್ಕೆ ಕಾರಣವೆಂದರೆ ಪೋಟ ಮತ್ತು ಇತರ ಊರುಗಳವರು ಮೊಳಕಾಲ್ಮುರು ಬಟ್ಟೆಗಳೆಂದು ಚೀಟು ಅಂಟಿಸಿ ಮಾರುವ ಪದ್ಧತಿ ವಾಯದುರ್ಗದಲ್ಲಿ ಜಯಂತಿಯವರ ಮಿಲ್ ಸ್ಥಾಪಿತವಾದ ಮೇಲೆ ಈ ಊರಿನ ಉದ್ಯೋಗಕ್ಕೆ ಧಕ್ಕೆ ತಗಲಿತು. ದೇಶದಲ್ಲಿ ಸದ್ಯಕ್ಕಿರುವ ಭಯಂಕರ ಆರ್ಥಿಕ ದುಸ್ಥಿತಿಯಜೊತೆಗೆ ಕೈಮಗ್ಗದ ಉದ್ಯೋಗಕ್ಕೆ ಬಲವಾದ ಪೆಟ್ಟಾಗಿದೆ. ಕೆಲ ನೆಯ್ಯುವ ಬಂಧುಗಳು ಇನ್ನೂ ಕುತಿತದ ದುಷ್ಪದ್ಧತಿಯನ್ನು ದೂರಮಾಡಿಲ್ಲ. ಈ ಉದ್ಯೋಗಕ್ಕೆ ಸ್ವಲ್ಪವಾದರೂ ಪರಿಹಾರ ದೊರೆಯಬೇಕೆಂದರೆ ಬಟ್ಟೆಯ ಸುಂಕವನ್ನು ತೆಗೆಯಬೇಕು. ಖಾದಿ ಉತ್ಪತ್ತಿಕೇಂದ್ರವು ಇಲ್ಲಿ ಸ್ಥಾಪಿಸಲ್ಪಡಬೇಕು. ಈ ತಾಲೂಕಿನಲ್ಲಿ ಕೊನೆಯಪಕ್ಷ ಈ ಊರಲ್ಲಾದರೂ ,ಮದ್ಯನಿಷೇಧ ಕಾಯ್ದೆಯನ್ನು ಜಾರಿಗೆತಂದು ಸೆಂದಿ ಅಂಗಡಿಯನ್ನು ಮುಚ್ಚಬೇಕು ಸರಕಾರದವರು ನಮಗೆ ಯಾವರೀತಿ ಸಹಾಯಮಾಡುವರೋ ನೋಡಬೇಕು.

ಒಬ್ಬ ನೆಯ್ಯಾರ ಬಂಧು.

Reserved for
ADVERTISEMENTS.
ಜಾಹೀರಾತುಗಳಿಗಾಗಿ ಕಾದಿಡಲ್ಪಟ್ಟಿದೆ

ರಾಜಕೋಟಿ.

ರಾಜಕೋಟಿ 30

ಥಾಕೂರ್ ಸಾಹೇಬರೊಂದು ಪ್ರಕಟನೆ ಹೊರಡಿಸಿ, ತಮ್ಮ ಪ್ರಜೆಗಳು ಹೊರಗಿನವರ ಕೈಗೊಂಬೆಗಳಾಗಿರಕೂಡದು ಎಂದು ತಿಳಿಸಿದ್ದಾರೆ. ತಮ್ಮ ಪ್ರಜೆಗಳಲ್ಲಿ ಬಹುಮಂದಿ ವಿವೇಕಯುತವಾದ ಮಾರ್ಗ ಹಿಡಿಯುವರೆಂದು ಅವರು ನಂಬಿದ್ದಾರೆ.

ಗಾಂಧೀಜಿಯವರ ಹೇಳಿಕೆ

ಬರ್ದೋಲಿ 31

ಗಾಂಧೀಜಿಯವರೊಂದು ಹೇಳಿಕೆ ಹೊರಡಿಸಿ 'ರಾಜಕೋಟಿಯಲ್ಲಿಂದು ಥಾಕೂರರಿಗೂ ಅವರ ಪ್ರಜೆಗಳಿಗೂ ಯುದ್ಧವಾರಂಭವಾಗಿಲ್ಲ ನಿಜವಾಗಿ ನೋಡಿದರೆ ಕಾಂಗ್ರೆಸ್ಸಿಗೂ ಬ್ರಿಟಿಷ್ ರೆಸಿಡೆಂಟರಿಗೂ ಯುದ್ಧವಾರಂಭವಾಗಿದೆ. ರಾಜಕೋಟೆಯಲ್ಲಾಗಿದ್ದ ಒಪ್ಪಂದವನ್ನು ಬ್ರಿಟಿಷ್ ರೆಸಿಡೆಂಟರು ಮುರಿದು ಈಗ ಸುಸ್ಥಿತಗೊಂಡಾ ವೃತ್ತಿಗೆ ಕೈಹಾಕಿದ್ದಾರೆಂದು ತಿಳಿದುಬಂದಿದೆ. ಒಪ್ಪಂದವನ್ನು ಪಾಲಿಸುವಂತೆ ರಾಜಕೋಟಿ ರೆಸಿಡೆಂಟರಿಗೂ ಬಜಾಜರು ಮೇಲಿನ ಬಹಿಷ್ಕಾರವನ್ನೆತ್ತುವಂತೆ ಜಯವುರದ ದೀವಾನರಿಗೂ ನೈಸ್ಥಾನಿಯರು ಸೂಚನೆ ಕೊಡುವುದು ಸೂಕ್ತವಾಗಿದೆ" ಎಂದು ತಿಳಿಸಿದ್ದಾರೆ.

ಪಂಡಿತ ಜವಾಹರಲಾಲರು

ಸ್ಪೇನ್ ಸಂದೇಶ

ಮುಂಬೈನಲ್ಲಿರುವ ಸ್ಪೇನ್ ಪರಿಹಾರ ಸಮಿತಿಗೆ ಪಂ|| ಜವಹರ್‌ಲಾಲರೊಂದು ಸಂದೇಶವನ್ನು ಕಳುಹಿಸುತ್ತ 'ನಮ್ಮ ಸ್ವಾತಂತ್ರ್ಯಕ್ಕಾಗಿ ಹೋಡೆದಾಡುತ್ತಿರುವ ನಾವು ಸ್ಪೇನ್ ಜನರು ನಡೆಸುತ್ತಿರುವ ಇತಿಹಾಸ ಪ್ರಸಿದ್ಧ ಸ್ವಾತಂತ್ರ್ಯ ಸಮರವನ್ನು ಕಂಡು ಮರುಕಗೊಂಡಿದ್ದೇವೆ. ಇಂದು ಸ್ಪೇನಿನಲ್ಲಿ ವಿನಾಶದ ಗತಿ ಒದಗಿದೆ ಎಂಬುದಾಗಿ ತಿಳಿಸಿದ್ದಾರೆ

'ನಮ್ಮ ಸ್ವಾತಂತ್ರ್ಯಸಂಗ್ರಾಮದ ಗಡಿಯು ನಮ್ಮ ದೇಶದಲ್ಲಿ ಮಾತ್ರ ಇದೆಯೆಂದು ಭಾವಿಸಬಾರದು. ಸ್ಪೇನ್, ಚೀನಾ ಇವುಗಳಿಗೆ ಸಹ ಅದು ವಿಸ್ತರಿಸಿದೆ. ಈ ಮಧ್ಯೆ ಸ್ವತಂತ್ರ ಸ್ಪೇನಿನಲ್ಲಿ ಲಕ್ಷಾಂತರ ಮಂದಿ ಅನಾಥರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಹೆಂಗಸರು ಮಕ್ಕಳು ಶತ್ರುವಿನ ಬಾಂಬಿಗೆ ಆಹುತಿಯಾಗಬೇಕಾಗಿರುವುದು ಮಾತ್ರವಲ್ಲ ಆಹಾರವಿಲ್ಲದೆ ಜೀವ ಬಿಡಬೇಕಾಗಿದೆ. ಈ ಭಯಂಕರ ಅನಾಹುತವನ್ನು ನೋಡಿ ನೋಡಿ ಭಾರತವು ಉದಾಸೀನದಿಂದಿರಲು ಸಾಧ್ಯವಿಲ್ಲ. ಅವರಿಗೆ ಆಹಾರಾದಿಗಳನ್ನು ಕಳುಹಿಸಲು ನಾವು ಸರ್ವ ಪ್ರಯತ್ನವನ್ನು ಮಾಡಬೇಕು.'

ಅಂಬಾ ಭವನ ಕಾಫೀ ಕ್ಲಬ್ (ರಜಿಸ್ಟರ್ಡ್)

ಮತ್ತು

ಶಾಖೆ:— **ಊಟದ - ಹೋಟೆಲ್.**

ಬೆಂಗಳೂರು ರೋಡ್, ಬಳ್ಳಾರಿ.

ರೈಲ್ವೆ ಸ್ಟೇಷನ್ನಿಗೆ ಬಹಳ ಸಮೀಪದಲ್ಲಿದೆ. ಶುದ್ಧತುಪ್ಪದಲ್ಲಿ ತಯಾರಿಸಿದ ರುಚಿಕರವಾದ ಫಲಾಹಾರ - ಗಾಳಿ - ಬೆಳಕು ಮತ್ತು ಇತರ ಅನುಕೂಲಗಳಿರುವ ಕೊಠಡಿಗಳು, ಭೋಜನ ಸಮಾರಂಭ ಟೀಪಾರ್ಟಿಗಳ ಏರ್ಪಾಟು ಕೆಲ ಘಂಟೆಗಳ ಮುಂಚೆ ತಿಳಿಸಿದರೆ ಸಾಕು ಅತ್ಯುತ್ತಮವಾದ ವ್ಯವಸ್ಥೆ ಮಾಡುವೆವು.

ಪ್ರೊಪ್ರಯಿಟರ್ಸ್— **ಶಿ. ಕನ್ನಯ್ಯ, ಹೆಚ್. ಕರಿಬಸಪ್ಪ.**

ಅಂಗ್ವೆಂಟೋ.,

ಎಲ್ಲ ಚರ್ಮವ್ಯಾಧಿಗಳಿಗೂ ರಾಮಬಾಣ ಮಲಾಮು

ಕಜ್ಜಿ ತುರಿ, ಇಸಬು, ಗಜಕರ್ಣ, ಹುಳಗಳು, ಚಲದಿ ಚಟ್ಟು ಸುಟ್ಟ ಬೊಬ್ಬೆಗಳು, ಘಾಯಗಳು, ಉಗುರುಸುತ್ತು ಪಾದ ಒಡೆದ ಬಿರುಕುಗಳು, ತೀರ ಹಳೇಹುಣ್ಣು, ಹುರುಕುಗಳು ಮುಂತಾದವು ಖಾತ್ರಿಯಾಗಿಯೂ, ಅತಿ ತೀವ್ರವಾಗಿಯೂ, ಗುಣವಾಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ಅಗತ್ಯವಾಗಿ ಸಂಗ್ರಹಿಸತಕ್ಕದ್ದು.

ಬೆಲೆ ಸೀಸೆ ಒಂದಕ್ಕೆ ರೂ. 0—8—0 ಟಿ. ಕ. ಪ್ರತ್ಯೇಕ.

ಜೀವನ ಸುಧಾ ಫಾರ್ಮಸಿ.

ಸೋಲ ಏಜಂಟರು:—ಸರೋವರ ಬ್ರದರ್ಸ್, ಬಳ್ಳಾರಿ.

ಎಸ್. ವಿ. ಶೆಟ್ಟಿ ಅಂಡ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆಯೂ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜ್ ಕೊಟ್ಟರೆ ಹೊಸ ವಸ್ತುಗಳನ್ನು ಕೊಡ್ಯುತ್ತೇವೆ

ವೆಸ್ಟ್‌ಎಂಡ್' ವಾಚುಗಳೂ, ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದುಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವುದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ, ಸುಲಭದಂದಲ್ಲಿ ಮಾರುತ್ತೇವೆ. ಗ್ಯಾರಂಟಿಯೊಂದಿಗೆ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ 'ಕಟ್ಟು' (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಯಸ್. ಅಂಡ್ ಸನ್ಸ್.

ಬೆಂಗಳೂರು ರೋಡ್ ಬಳ್ಳಾರಿ.

ಸ್ಥಳಲ ಮುದ್ರಣಾಲಯದಲ್ಲಿ ಮುದ್ರಿತವಾಗಿ, ಟಿ. ಬಿ. ಕೇಶವರಾಯರಿಂದ ಪ್ರಕಟಿಸಲ್ಪಟ್ಟಿತು.